ಸಂಪುಟ: 05 ಸಂಚಿಕೆ: 11 ಪುಟಗಳು: 08 ಮಂಗಳವಾರ 25 ಮಾರ್ಚ್ 2025 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 UV 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಉದಯ ಸಂಭ್ರಮ 5th ANNIVERSARY

## ನಿಯಮ ಉಲ್ಲಂಘಿಸಿ ಕಟ್ಟಡಗಳ ನಿರ್ಮಾಣ ಮಾಡಿರುವವರಿಗೆ ಶಾಕ್

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರಲ್ಲಿ ಸಾವಿರಾರು ಕಟ್ಟಡಗಳು ಬಿಬಿಎಂಪಿಯ ನಿಯಮ ಮೀರಿ, ಹೆಚ್ಚು ಅಂತಸ್ತು, ಜಾಗ ಕಬಳಿಕೆ, ಸೆಟ್ ಬ್ಯಾಕ್ ನಿಯಮ ಮೀರಿ ಹೀಗೆ ನಾನಾ ನಿಯಮ ಉಲ್ಲಂಘಿಸಿ ಅಕ್ರಮವಾಗಿ ನಿರ್ಮಾಣ ಮಾಡಿರುವವರಿಗೆ ಡಿಸಿಎಂ ಡಿಕೆ ಶಿವಕುಮಾರ್ ಖಡಕ್ ಎಚ್ಚರಿಕೆ ನೀಡಿದ್ದಾರೆ. 2025 – 26 ನೇ ಸಾಲಿನ ಬಿಬಿಎಂಪಿ ಬಜೆಟ್ ಕುರಿತು ಬೆಂಗಳೂರು ನಗರದ ಶಾಸಕರ ಜತೆ ಸಭೆ ಬಳಿಕ ಡಿಸಿಎಂ ಮಾತನಾಡಿದ್ದು, ಅಕ್ರಮ ನಿರ್ಮಾಣಗಳ ಪತ್ತೆಗೆ ಎಐ (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್) ತಂತ್ರಜ್ಞಾನದ ಬಳಕೆ ಮಾಡಲಾಗುವುದು ಎಂದು ಹೇಳಿದ್ದಾರೆ. ನಗರದಲ್ಲಿ ಉತ್ತಮ ತೆರಿಗೆ ಸಂಗ್ರಹವಾಗಬೇಕು.

ನೀರು, ರಸ್ತೆ ಸೇರಿದಂತೆ ಅನೇಕ ಮೂಲಸೌಕರ್ಯಗಳನ್ನು ನೀಡಿದ್ದೇವೆ. ಆದರೆ ಅನೇಕರು ಇದಕ್ಕೆ ತಕ್ಕಂತೆ ತೆರಿಗೆ ಪಾವತಿ ಮಾಡುತ್ತಿಲ್ಲ. ಅನುಮತಿ ನೀಡಿದ್ದಕ್ಕಿಂತ ಹೆಚ್ಚು ವಿಸ್ತೀರ್ಣದ ಹಾಗೂ ಮಹಡಿಗಳನ್ನು ಅಕ್ರಮವಾಗಿ ಕಟ್ಟಿಕೊಂಡಿದ್ದಾರೆ. ಇಂತಹ ಅಕ್ರಮಗಳನ್ನು ಎಐ ತಂತ್ರಜ್ಞಾನದ ಮೂಲಕ ಪತ್ತೆ ಮಾಡುವ ವ್ಯವಸ್ಥೆ ಜಾರಿಗೆ ತರಲಾಗುವುದು. ಇದರಿಂದ ಕಟ್ಟಡವನ್ನು ಎಷ್ಟು ವಿಸ್ತೀರ್ಣ, ಎತ್ತರ ಕಟ್ಟಿದ್ದಾರೆ ಎಂಬುದು ತಿಳಿಯುತ್ತದೆ. ಜತೆಗೆ ಪ್ರತಿಯೊಂದು ಮನೆಯ ದಾಖಲೆಯೂ ಸಿಗುತ್ತದೆ ಎಂದು ವಿವರಿಸಿದರು.

ನಗರದ ಸುಮಾರು 7 ಲಕ್ಷ ಮನೆಗಳು ತೆರಿಗೆ ಕಟ್ಟುತ್ತಿರಲಿಲ್ಲ, ಇವುಗಳಲ್ಲಿ 1 ಲಕ್ಷ ಮನೆಗಳು ತೆರಿಗೆ ವ್ಯಾಪ್ತಿಗೆ ಬಂದಿದ್ದು, ಇನ್ನೂ 6 ಲಕ್ಷ ಮನೆಗಳನ್ನು ತೆರಿಗೆ ವ್ಯಾಪ್ತಿಗೆ ತರಬೇಕಿದೆ. ಆದ ಕಾರಣ ಒಂದು ಬಾರಿ ಪಾವತಿಗೆ ಅವಕಾಶ (ಒಟಿಎಸ್) ಮಾಡಿಕೊಡಲಾಯಿತು. ಅಕ್ರಮ ನಿರ್ಮಾಣಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಅವಕಾಶ ಪಾಲಿಕೆಗೆ ಇರಲಿಲ್ಲ. ಕಳೆದ ವಾರ ಸದನದಲ್ಲಿ ಈ ಬಗ್ಗೆ ವಿಧೇಯಕ ಅಂಗೀಕಾರವಾಗಿದೆ. ಜೊತೆಗೆ ಕಂದಾಯ ಬಡಾವಣೆಗಳಲ್ಲಿ ಇರುವ ಖಾಸಗಿ ರಸ್ತೆಗಳನ್ನೂ ಸಹ ಸರ್ಕಾರಿ ರಸ್ತೆಗಳು ಎಂದು ಘೋಷಣೆ ಮಾಡಲಾಗುವುದು ಎಂದರು.

## ಹನಿಟ್ರ್ಯಾಪ್ ಕೇಸ್: ರಾಜಣ್ಣ ದೂರು, ಎಸ್‌ಐಟಿ ರಚನೆ ಸಾಧ್ಯತೆ

• **ಉದಯವಾಹಿನಿ, ಬೆಂಗಳೂರು**

ಹನಿಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳವಾರ ಸಹಕಾರ ಸಚಿವ ರಾಜಣ್ಣ ದೂರು ನೀಡುವ ಸಾಧ್ಯತೆಯಿದೆ. ಕಳೆದ ಮೂರು ದಿನಗಳಿಂದ ಪ್ರಕರಣ ದಾಖಲಿಸಲು ಮನಸ್ಸು ಮಾಡದೇ ಇದ್ದ ರಾಜಣ್ಣಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಅಭಯ ಹಸ್ತ ನೀಡಿದ್ದು, ಮಂಗಳವಾರ ಪ್ರಕರಣ ದಾಖಲು ಮಾಡಲಿದ್ದಾರೆ ಎನ್ನಲಾಗುತ್ತಿದೆ. ಪ್ರಕರಣ ದಾಖಲಾದ ಬಳಿಕ ಅಧಿಕೃತ ತನಿಖೆ ಪ್ರಾರಂಭ ಆಗಲಿದೆ. ಮಾಹಿತಿಯ ಪ್ರಕಾರ ವಿಶೇಷ ತನಿಖಾ ತಂಡ ಮೂಲಕವೇ ತನಿಖೆ ಮಾಡಿಸುವ ಸಾಧ್ಯತೆ ಇದೆ. ಕಳೆದ ಮೂರು ತಿಂಗಳಿಂದ ತುಮಕೂರು ಮತ್ತು ಬೆಂಗಳೂರಿನ ವಿವಿಧ ಭಾಗದಲ್ಲಿ ಈ ಪ್ರಯತ್ನ ನಡೆದಿದೆ ಎನ್ನಲಾಗಿದ್ದು, ತನಿಖೆ ದೃಷ್ಟಿಯಿಂದ ಎಸ್‌ಐಟಿ ರಚನೆಗೆ ಸರ್ಕಾರ ಮುಂದಾಗಿದೆ.

## ಮೈಸೂರು ಸೇರಿ 5 ಮಹಾನಗರ ಪಾಲಿಕೆಗಳಿಗೆ ವರ್ಷದಲ್ಲಿ ಚುನಾವಣೆ




• **ಉದಯವಾಹಿನಿ, ಮೈಸೂರು**

ಮೈಸೂರು ಸೇರಿದಂತೆ ರಾಜ್ಯದ ಐದು ಮಹಾ ನಗರ ಪಾಲಿಕೆ ಚುನಾವಣೆಯನ್ನು ಈ ವರ್ಷದಲ್ಲೇ ಮಾಡುತ್ತೇವೆ ಎಂದು ರಾಜ್ಯ ಚುನಾವಣಾ ಆಯೋಗದ ಆಯುಕ್ತ ಜಿ.ಎಸ್. ಸಂಗ್ರೇಶಿ ಹೇಳಿದರು. ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಐದು ಮಹಾ ನಗರ ಪಾಲಿಕೆಯಲ್ಲೂ ಮತದಾರರ ಪಟ್ಟಿ ಸಿದ್ಧವಾಗಿವೆ. ಈ ವರ್ಷದಲ್ಲಿ ಮಂಗಳೂರು, ಶಿವಮೊಗ್ಗ, ದಾವಣಗೆರೆ, ತುಮಕೂರು, ಮೈಸೂರು ಮಹಾನಗರ ಪಾಲಿಕೆ ಚುನಾವಣೆ ಮಾಡಲು ಚುನಾವಣಾ ಆಯೋಗ ಸಿದ್ಧವಾಗಿದೆ ಎಂದು ತಿಳಿಸಿದರು. ಸರಕಾರ ಮೀಸಲು ಪಟ್ಟಿ ಕೊಟ್ಟರೆ ಸರಿ. ಕೊಡದೆ ಇದ್ದರೆ ಹೈಕೋರ್ಟ್ ಮೊರೆ ಹೋಗಿ ಹಳೆ ಮೀಸಲು ಪಟ್ಟಿಯಂತೆ ಚುನಾವಣೆ ಮಾಡುತ್ತೇವೆ. ಆದಷ್ಟು ಬೇಗ ರಾಜ್ಯದ ಐದು ಮಹಾ ನಗರ ಪಾಲಿಕೆಗಳ ಮೀಸಲು ಪಟ್ಟಿ ನೀಡುವಂತೆ ಸರಕಾರಕ್ಕೆ ಪತ್ರ ಕೂಡ ಬರೆದಿದ್ದೇವೆ ಎಂದು ತಿಳಿಸಿದರು. ಇದಕ್ಕೂ ಮುನ್ನ ಪಾಲಿಕೆಯ ಸಭಾಂಗಣದಲ್ಲಿ ಪಾಲಿಕೆ ಆಯುಕ್ತರು ಸೇರಿದಂತೆ ಅಧಿಕಾರಿಗಳ ಸಭೆಯನ್ನು ನಡೆಸಿದ ಚುನಾವಣಾ ಆಯುಕ್ತರು, ಚುನಾವಣೆ ಸಂಬಂಧ ಕೈಗೊಳ್ಳಬೇಕಾದ ಅಗತ್ಯ ಸಿದ್ಧತಾ ಕ್ರಮಗಳ ಬಗ್ಗೆ ಆಯುಕ್ತರಿಂದ ಮಾಹಿತಿ ಪಡೆದುಕೊಂಡರು. ಜತೆಗೆ ಚುನಾವಣಾ ದಿನಾಂಕ ಪ್ರಕಟವಾದರೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಚನೆಗಳನ್ನೂ ಜಿ.ಎಸ್. ಸಂಗ್ರೇಶಿ ನೀಡಿದರು.

1 ಡಿಸಿಎಂ ಡಿಕೆ ಶಿವಕುಮಾರ್ ಅವರ ಸಂವಿಧಾನ ಬದಲಿಸಲಾಗುವುದು ಹೇಳಿಕೆ ವಿವಾದದ ಕಿಡಿ

2 ರಾಜ್ಯಸಭೆಯಲ್ಲಿ ಬಿಜೆಪಿ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ

3 ಸಂವಿಧಾನದ ಸ್ವಯಂ ಘೋಷಿತ ರಕ್ಷಕ ರಾಹುಲ್ ಗಾಂಧಿ ಈಗ ಎಲ್ಲಿದ್ದಾರೆ ಅಮಿತ್ ಮಾಲವೀಯ ಟ್ವೀಟ್

# ಸಂವಿಧಾನ ರಕ್ಷಣೆ ಇಲ್ಲ ಬದಲಾವಣೆ

## ಮುಗಿಬಿದ್ದ ಬಿಜೆಪಿ ನಾಯಕರು, ರಾಜ್ಯಸಭೆಯಲ್ಲಿ ಭಾರೀ ಆಕ್ರೋಶ




**ಬಿಜೆಪಿ ಸುಳ್ಳು ಹೇಳುತ್ತಿದೆ: ಡಿಸಿಎಂ**

• **ಉದಯವಾಹಿನಿ, ಬೆಂಗಳೂರು**

ಸಂವಿಧಾನ ಬದಲಾವಣೆ ಮಾಡಬೇಕು ಎಂದು ನಾನು ಎಲ್ಲಿಯೂ ಹೇಳಿಲ್ಲ. ನನ್ನ ಹೇಳಿಕೆಯನ್ನು ಬಿಜೆಪಿಯವರು ತಿರುಚುತ್ತಿದ್ದಾರೆ. ಸಂವಿಧಾನ ರಕ್ಷಣೆ ನಮ್ಮ ಪಕ್ಷದ ಜನ್ಮ ಸಿದ್ಧ ಹಕ್ಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ. ಸದಾಶಿವನಗರ ನಿವಾಸದ ಬಳಿ ಇಂದು ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಬಿಜೆಪಿ ಸುಳ್ಳು ಹೇಳುತ್ತಿದೆ. ಸಂವಿಧಾನ ಬದಲಾವಣೆ ಬಗ್ಗೆ ನಾನು ಎಲ್ಲಿ ಹೇಳಿದ್ದೇನೆ. ಸಂವಿಧಾನ ಬದಲಾವಣೆ ಆಗಿದೆ, ನಾವು ಬದಲಾವಣೆ ಮಾಡುತ್ತೇವೆ ಎಂದು ಎಲ್ಲಿಯೂ ನಾನು ಹೇಳಿಲ್ಲ. ನನ್ನ ಹೇಳಿಕೆಯನ್ನು ಬಿಜೆಪಿಯವರು ತಿರುಚುತ್ತಿದ್ದಾರೆ. ನಾನು ಕಾನೂನು ಹೋರಾಟ ಮಾಡುತ್ತೇನೆ. ಸಂವಿಧಾನ ರಕ್ಷಿಸುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿದೆ ಎಂದರು.

**ಸಂವಿಧಾನ ಬದಲಾಯಿಸಲು ಬಯಸುತ್ತಿರುವುದು ನಮ್ಮ ಸಚಿವರಲ್ಲ, ಅಧಿಕಾರದಲ್ಲಿರುವವರು**

ಬಿಜೆಪಿಯವರು ಇದರಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಅಪಪ್ರಚಾರ ಮಾಡೋದು, ಸುಳ್ಳು ಹೇಳೋದು ಅವರ ಕೆಲಸವಾಗಿದೆ. ಜೆ.ಪಿ. ನಡ್ಡಾಗಿಂತ ನಾನು ಸೆನ್ಸಿಬಲ್ ರಾಜಕಾರಣಿ. ನಾನು 36 ವರ್ಷದಿಂದ ಶಾಸಕ ಆಗಿದ್ದೇನೆ. ನಮ್ಮದು ರಾಷ್ಟ್ರೀಯ ಪಕ್ಷ. ನನಗೆ ಗೊತ್ತಿದೆ ಸಂವಿಧಾನ ಏನು. ಸಂವಿಧಾನ ಏನು ಹೇಳುತ್ತೆ ಅನ್ನೋ ಪರಿಜ್ಞಾನ ಇದೆ. ನನ್ನ ಹೆಸರನ್ನು ಎಲ್ಲಾ ಕಡೆ ತೆಗೆದುಕೊಂಡ್ರೆ, ತೆಗೆದುಕೊಳ್ಳಲಿ ಎಂದು ತಿಳಿಸಿದರು.

**ನಡ್ಡಾ ವಿರುದ್ಧ ಹಕ್ಕುಚ್ಯುತಿ ಮಂಡಿಸುತ್ತೇನೆ:** ನಾನು ಜೆ.ಪಿ. ನಡ್ಡಾ ವಿರುದ್ಧ ಹಕ್ಕುಚ್ಯುತಿ ಮಂಡನೆ ಮಾಡುತ್ತೇನೆ. ಬಿಜೆಪಿ ಅವರು ಮಿಸ್ ಗೈಡ್ ಮಾಡ್ತಿದ್ದಾರೆ. ಅವರ ಗ್ರಾಫ್ ಇಳಿಯುತ್ತಿದೆ. ನನಗೆ ಬೇಸಿಕ್ ಕಾಮನ್ ಸೆನ್ಸ್ ಇದೆ. ಸಾಕಷ್ಟು ಸಲ ಸಂವಿಧಾನ ಬದಲಾವಣೆ ಆಗಿದೆ ಅಂತ ಹೇಳಿದ್ದೇನೆ. ಆದರೆ ಅವರು ಸುಳ್ಳು ಹೇಳುತ್ತಿದ್ದಾರೆ, ನನ್ನ ಹೇಳಿಕೆಯನ್ನು ಮಿಸ್ ಕೋಟ್ ಮಾಡುತ್ತಿದ್ದಾರೆ. ನಾನು ಈ ವಿಷಯಗಳ ಬಗ್ಗೆ ಮಾತಾಡಿಲ್ಲ ಎಂದು ಸ್ಪಷ್ಟಪಡಿಸಿದರು. ಅವರು ನನ್ನ ಹೆಸರನ್ನು ಎಲ್ಲಾ ಕಡೆ ದುರುಪಯೋಗ ಮಾಡುತ್ತಿದ್ದಾರೆ. ಬಿಜೆಪಿಯವರು ದೇಶವನ್ನು ಮಿಸ್ ಗೈಡ್ ಮಾಡಿದ್ದಾರೆ. ಮೀಸಲಾತಿ ಕುರಿತು ಹಲವು ರಾಜ್ಯಗಳಲ್ಲಿ ಕೋರ್ಟ್ ಮೊರೆ ಹೋಗಲಾಗಿದೆ ಅಷ್ಟೇ. ಗಾಂಧಿ ಕುಟುಂಬದ ಹೆಸರು ಹೇಳದಿದ್ರೆ ಅವರಿಗೆ ಸಮಾಧಾನ ಆಗಲ್ಲ. ಏನು ಕಾನೂನು ಹೋರಾಟ ಮಾಡಬೇಕೋ ಮಾಡುತ್ತೇನೆ. ಬಿಜೆಪಿಯವರ ಆರೋಪ ಅಪ್ಪಟ ಸುಳ್ಳು ಎಂದು ಡಿಸಿಎಂ ತಿಳಿಸಿದರು. ಕೇವಲ ಅಲ್ಪಸಂಖ್ಯಾತರ ಓಲೈಕೆಗಾಗಿ ಕಾಂಗ್ರೆಸ್ ಪಕ್ಷದ ನಾಯಕರು ಸಂವಿಧಾನ ಬದಲಾವಣೆ ಮಾಡುವುದಾಗಿ ಹೇಳುತ್ತಾ ಬಂದಿದ್ದಾರೆ. ಇದರಿಂದ ಅಂಬೇಡ್ಕರ್ ಅವರಿಗೆ ಇವರು ಎಷ್ಟು ಗೌರವ ಕೊಡುತ್ತಾರೆ ಎಂಬುದು ಗೊತ್ತಾಗಿದೆ ಎಂದು ವಾಗ್ದಾಳಿ ನಡೆಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಸ್ಲಿಮರ ಓಲೈಕೆಗಾಗಿ ಸಂವಿಧಾನ ವಿರೋಧಿ ನೀತಿ ಅನುಸರಿಸುತ್ತಿದ್ದಾರೆ. ಈ ದೇಶದ ಪ್ರಧಾನಿ ನರೇಂದ್ರ ಮೋದಿಯವರಿಗೆ ಸಂವಿಧಾನ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಅವರ ಕುರಿತಾಗಿ ಅಪಾರವಾದ ಗೌರವ ಇರುವ ಕಾರಣಕ್ಕಾಗಿ ಯಾವುದೇ ಕಾರಣಕ್ಕೂ ಸಂವಿಧಾನ ತಿದ್ದುಪಡಿಗೆ ಅವಕಾಶ ನೀಡುವುದಿಲ್ಲ. ಹಾಗಾಗಿ, ತಾವು ಡಿಕೆಶಿ ಹೇಳಿಕೆಯನ್ನು ಸಾರಾಸಗಟಾಗಿ ಖಂಡಿಸುವುದಾಗಿ ವಿಜಯೇಂದ್ರ ಹೇಳಿದರು.

**ಡಿಕೆಶಿ ಬಂಡವಾಳ ಬಯಲು**

ಮೀಸಲಾತಿ ಸಂಬಂಧ ಸಂವಿಧಾನಕ್ಕೆ ತಿದ್ದುಪಡಿ ತರುವುದಾಗಿ ಹೇಳಿಕೆ ನೀಡಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಬಂಡವಾಳ ಬಯಲಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಟೀಕಿಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಒಂದುವೇಳೆ ದೇಶದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಸಂವಿಧಾನ ಬದಲಾವಣೆ ಮಾಡುತ್ತದೆ ಎಂದು ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಸಹಿತ ರಾಹುಲ್ ಗಾಂಧಿ ಅಪಪ್ರಚಾರ ಮಾಡಿದ್ದರು. ಆದರೆ, ಸ್ವಾತಂತ್ರ್ಯ ಬಂದ ನಂತರ ಕಾಂಗ್ರೆಸ್ ಅಧಿಕಾರವಧಿಯಲ್ಲಿಯೇ ಸಂವಿಧಾನಕ್ಕೆ ಅತಿ ಹೆಚ್ಚು ತಿದ್ದುಪಡಿ ತರಲಾಗಿದೆ ಎಂದರು.



**ಬೆಕ್ಕು ಚೀಲದಿಂದ ಹೊರಬಂದಿದೆ**

ಬಿಜೆಪಿ ನಾಯಕ ಶೆಹಜಾದ್ ಪೂನಾವಾಲಾ ಕೂಡ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿ, ಬೆಕ್ಕು ಚೀಲದಿಂದ ಹೊರಬಂದಿದೆ ಎಂದು ವ್ಯಂಗ್ಯವಾಡಿದ್ದಾರೆ. ಅಕ್ರಮ ಮುಸ್ಲಿಮರಿಗೆ ಮೀಸಲಾತಿ ನೀಡಲು ಸಂವಿಧಾನವನ್ನು ಬದಲಾಯಿಸಲು ಬಯಸುವುದಾಗಿ ಪಕ್ಷ ಒಪ್ಪಿಕೊಂಡಿದೆ ಎಂದಿದ್ದಾರೆ. ಕಾಂಗ್ರೆಸ್ ಸಂವಿಧಾನ ವಿರೋಧಿ, ಮೀಸಲಾತಿ ವಿರೋಧಿ ಮತ್ತು ಅಂಬೇಡ್ಕರ್ ವಿರೋಧಿ ಎಂಬುದು ಸ್ಪಷ್ಟವಾಗಿದೆ. ಮುಸಲ್ಮಾನರಿಗೆ ಗುತ್ತಿಗೆಗಳಲ್ಲಿ ಶೇ. 04 ರಷ್ಟು ಮೀಸಲಾತಿ ನೀಡುತ್ತಿರುವುದು ಸಂವಿಧಾನ ಬಾಹಿರ ಎಂದು ಡಿಕೆ ಶಿವಕುಮಾರ್ ಅವರೇ ಒಪ್ಪಿಕೊಂಡಿದ್ದಾರೆ.

**ಡಿಕೆಶಿ ವಿರುದ್ಧ ಹೈಕಮಾಂಡ್ ಕ್ರಮ**

ಸಂವಿಧಾನ ಬದಲಾವಣೆ ಬಗ್ಗೆ ಮಾತನಾಡಿರುವ ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ಕಾಂಗ್ರೆಸ್ ಹೈಕಮಾಂಡ್ ಕ್ರಮ ತೆಗೆದುಕೊಳ್ಳುತ್ತಾ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದರು. ಡಿಕೆಶಿ ಸಂವಿಧಾನ ಬದಲಾವಣೆ ಮಾಡುವುದಾಗಿ ಹೇಳಿದ್ದಾರೆ. ಮುಸ್ಲಿಮರಿಗೆ ಮೀಸಲಾತಿ ಕೊಡಲು ಸಾಧ್ಯವಿಲ್ಲ ಎಂದು ಗೊತ್ತಿದ್ದರೂ ವೋಟ್ ಬ್ಯಾಂಕ್‌ಗಾಗಿ ಬಿಲ್ ತಂದಿದ್ದಾರೆ. ಕಾಂಗ್ರೆಸ್ ಮುಸ್ಲಿಮರಿಗೆ ಅನ್ಯಾಯ ಮಾಡುತ್ತಿದೆ ಎಂದು ಕಿಡಿಕಾರಿದರು. ನಮ್ಮಲ್ಲಿ ಸಂವಿಧಾನ ಬದಲಾವಣೆ ಮಾಡುತ್ತೇವೆ ಅಂದವರಿಗೆ ನಾವು ಟಿಕೆಟ್ ಕೊಟ್ಟಿಲ್ಲ. ಈಗ ಡಿಕೆಶಿ ವಿರುದ್ಧ ಕ್ರಮ ಆಗಬೇಕು ಕಾಂಗ್ರೆಸ್ ಹೈಕಮಾಂಡ್‌ಗೆ ಆಗ್ರಹಿಸಿದರು. ಸಂವಿಧಾನ ಬದಲಾವಣೆ ಮಾಡುತ್ತೇನೆ ಎಂದು ಹೇಳಿ, ಈಗ ನಾನು ಹಾಗೆ ಹೇಳೇ ಇಲ್ಲ ಎನ್ನುತ್ತಿದ್ದಾರೆ. ಮಾಧ್ಯಮದಲ್ಲಿ ಎಲ್ಲಾರೂ ನೋಡಿದ್ದಾರೆ. ಅವರು ಸಂವಿಧಾನ ಬದಲಾವಣೆ ಬಗ್ಗೆ ಮಾತಾಡಿದ್ದಾರೆ. ಮಾತಾಡಿದರು ಈಗ ಬಿಜೆಪಿ ಮೇಲೆ ಆರೋಪ ಮಾಡುವುದು ಸರಿಯಲ್ಲ ಎಂದು ವಾಗ್ದಾಳಿ ನಡೆಸಿದರು.

## ಸಂವಿಧಾನ ಬದಲಾವಣೆ ಮಾಡಬೇಕು ಅಂತಾ ಎಲ್ಲಿಯೂ ನಾನು ಹೇಳಿಲ್ಲ

**ಡಿಕೆಶಿ ಹೇಳಿದ್ದೇನು**

ಖಾಸಗಿ ವಾಹಿನಿಯೊಂದರ ಚರ್ಚೆಯಲ್ಲಿ ಭಾಗಿಯಾಗಿ ಮಾತನಾಡುತ್ತಾ, ಮುಸಲ್ಮಾನರಿಗೆ ಗುತ್ತಿಗೆಯಲ್ಲಿ ಶೇ 04ರಷ್ಟು ಮೀಸಲಾತಿ ನೀಡುವ ವಿಚಾರ ದೊಡ್ಡ ಮಟ್ಟದಲ್ಲಿ ಚರ್ಚೆಯಾಗುತ್ತಿದೆ. ಮುಸಲ್ಮಾನರು ಬೈಕ್, ಗಾಡಿಗಳಿಗೆ ಪಂಕ್ಚರ್ ಹಾಕ್ತಾರೆ ಅಂತ ಎಂದು ಟೀಕಿಸುತ್ತಾರೆ. ಸಮಾಜದ ಪ್ರತಿಯೊಂದು ವರ್ಗವನ್ನು ಮೇಲಕ್ಕೆ ಎತ್ತುವುದು ಸರ್ಕಾರವಾಗಿ ನಮ್ಮ ಜವಾಬ್ದಾರಿ. ಸಮಾಜದಲ್ಲಿ ಮುಂದಕ್ಕೆ ಬರಲು, ಅಭಿವೃದ್ಧಿಯಲ್ಲಿ ಭಾಗಿಯಾಗಲು ನಾವು ಅವರಿಗೆ ಅವಕಾಶ ಮಾಡಿಕೊಡಬೇಕು. ಹಾಗಾಗಿ ಅದಕ್ಕೆ ಪೂರಕವಾದ ಒಂದಷ್ಟು ಕೆಲಸಗಳನ್ನು ಮಾಡುತ್ತಿದ್ದೇವೆ. ನಮ್ಮ ನಿಲುವನ್ನು ಪ್ರಶ್ನಿಸಿ ಸಾಕಷ್ಟು ಮಂದಿ ನ್ಯಾಯಾಲಯದ ಮೆಟ್ಟಿಲೇರುತ್ತಾರೆ ಎಂದು ನಮಗೆ ತಿಳಿದಿದೆ. ಈ ಹಿಂದೆ ನ್ಯಾಯಾಧೀಶರು ಸಹ ಸಂವಿಧಾನವನ್ನು ತಿದ್ದುಪಡಿ ಮಾಡಿದ್ದಾರೆ ಎಂದರು. ಇನ್ನು ಮುಂದುವರೆದು ಮಾತನಾಡುತ್ತಾ, ವಿರೋಧ ಪಕ್ಷವು ಈ ವಿಷಯದ ಬಗ್ಗೆ ನ್ಯಾಯಾಲಯದ ಮೊರೆ ಹೋಗಬಹುದು. ಸಂವಿಧಾನವನ್ನು ಬದಲಾಯಿಸಿದ ತೀರ್ಪುಗಳು ಈ ಹಿಂದೆಯೂ ಬಂದಿವೆ ಮತ್ತು ಅಂತಹ ಒಂದು ದಿನಕ್ಕಾಗಿ ಕಾಯಬೇಕು ಎಂದು ಹೇಳಿದರು. ನ್ಯಾಯಾಲಯ ಏನು ಹೇಳುತ್ತದೆಂದು ಕಾದು ನೋಡೋಣ. ನಾವು ಮುನ್ನುಡಿ ಹಾಡಿದ್ದೇವೆ. ಒಳ್ಳೆಯ ದಿನ ಬಂದೇ ಬರುತ್ತದೆ. ಹಲವು ಬದಲಾವಣೆಗಳಾಗಿವೆ, ಸಂವಿಧಾನ ಬದಲಾಗಲಿದೆ, ಸಂವಿಧಾನವನ್ನೂ ಬದಲಾಯಿಸುವ ತೀರ್ಪುಗಳಿವೆ ಎಂದರು.

**ಕೇತಗಾನಹಳ್ಳಿ ಭೂ ಒತ್ತುವರಿ ಆರೋಪ**

## ಕೋರ್ಟ್ ಮೆಟ್ಟಿಲೇರಿದ ಕುಮಾರಸ್ವಾಮಿ

• **ಉದಯವಾಹಿನಿ, ಬೆಂಗಳೂರು**

ಕೇತಗಾನಹಳ್ಳಿಯಲ್ಲಿ ಸರ್ಕಾರಿ ಭೂಮಿ ಒತ್ತುವರಿ ತೆರವು ಸಂಬಂಧ ತಹಶೀಲ್ದಾರ್ ನೀಡಿದ ನೋಟಿಸ್ ವಿರುದ್ಧ ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದು, ಕೋರ್ಟ್ ತಾತ್ಕಾಲಿಕ ರಿಲೀಫ್ ನೀಡಿದೆ. ಈ ಬಗ್ಗೆ ದಾಖಲೆ ಸಲ್ಲಿಸಲು ಕಾಲಾವಕಾಶ ನೀಡುವಂತೆ ಎಜಿ ಕಿರಣ್ ರೋಣ್ ಮನವಿ ಮಾಡಿದರು.



ಬಳಿಕ ಕೋರ್ಟ್, ಮಾರ್ಚ್ 27ರವರೆಗೂ ಬಲವಂತದ ಕ್ರಮ ಕೈಗೊಳ್ಳುವುದಿಲ್ಲವೆಂದು ಹೇಳಿಕೆ ದಾಖಲಿಸಿಕೊಂಡು ವಿಚಾರಣೆಯನ್ನು ಮಾರ್ಚ್ 27ಕ್ಕೆ ನಿಗದಿಪಡಿಸಿದೆ. ಇದರಿಂದ ಕುಮಾರಸ್ವಾಮಿ ಕೊಂಚ ನಿರಾಳರಾಗಿದ್ದಾರೆ. 6 ಎಕರೆ ಒತ್ತುವರಿ ಸಂಬಂಧ ನೋಟಿಸ್ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎನ್.ಎಸ್.ಸಂಜಯಗೌಡ ಅವರಿದ್ದ ಹೈಕೋರ್ಟ್ ಪೀಠ ವಿಚಾರಣೆ ನಡೆಸಿದ್ದು, ಕುಮಾರಸ್ವಾಮಿ ಪರ ಹಿರಿಯ ವಕೀಲ ಉದಯ್ ಹೊಳ್ಳ ಹಾಗೂ ಎ.ವಿ.ನಿಶಾಂತ್ ವಾದ ಮಂಡಿಸಿದ್ದು, ಅಧಿಕಾರ ವ್ಯಾಪ್ತಿ ಇಲ್ಲದಿದ್ದರೂ ತಹಶೀಲ್ದಾರ್ ನೋಟಿಸ್ ನೀಡಿದ್ದಾರೆ. 1985ರಲ್ಲಿ ಕ್ರಯಪತ್ರವಾಗಿರುವ ಜಮೀನಿಗೆ ಈಗ ನೋಟಿಸ್ ನೀಡಲಾಗಿದೆ. ಹಾಗೇ ನ್ಯಾಯಾಂಗ ನಿಂದನೆ ಪ್ರಕರಣವನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ ಎಂದು ವಾದ ಮಂಡಿಸಿದರು.

## ನಾನು ಸಿಎಂ ಆದ್ರೆ ಸಾವಿರ ಜೆಸಿಬಿ ಆರ್ಡರ್ ಮಾಡ್ತೀನಿ

• **ಉದಯವಾಹಿನಿ, ಬಾಗಲಕೋಟೆ**

ನಾನು ಮುಖ್ಯಮಂತ್ರಿ ಆದ್ರೆ ಸಾವಿರ ಜೆಸಿಬಿ ಆರ್ಡರ್ ಮಾಡ್ತಿನಿ, ಎಲ್ಲಾ ತಾಲ್ಲೂಕುಗಳಲ್ಲಿ ತಲಾ 35 ಜೆಸಿಬಿ ಇಡ್ತೀನಿ. ಯಾರೇ ಕ್ವಾಯಕ್ ಅಂದ್ರೂ ಅವ್ರ ಮನೆ ಕಲಾಸ್ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಗುಳೇದಗುಡ್ಡ ಪಟ್ಟಣದಲ್ಲಿ ಗುಡುಗಿದ್ದಾರೆ.

ಶಿವಾಜಿ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಜನರನ್ನು ಉದ್ದೇಶಿಸಿ ಮಾತನಾಡಿದ ಯತ್ನಾಳ್, ಯೋಗಿ ಆದಿತ್ಯನಾಥ್ ಅವರ ಬುಲ್ಡೋಜರ್ ನಿಯಮ ಜಾರಿಗೆ ತರುವ ಬಗ್ಗೆ ಮಾತನಾಡಿದರು. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕೆಟ್ಟು ಹೋಗಿದೆ, ನಮ್ಮ ಸರ್ಕಾರ ಇದ್ದಾಗೂ ಹಿಂಗೆ, ಈಗ ಇನ್ನಷ್ಟು ಕೆಟ್ಟು ಹೋಗಿದೆ. ಇದು ಹೋಗಬೇಕು ಅಂದ್ರೆ ಬುಲ್ಡೋಜರ್ಸ್ ತಗೊಂಡು ಬರಬೇಕು ಎಂದರು. ನಾನೇನಾದ್ರೂ ಮುಖ್ಯಮಂತ್ರಿ ಆದ್ರೆ ಒಂದು ಸಾವಿರ ಜೆಸಿಬಿ ಆರ್ಡರ್ ಮಾಡ್ತೀನಿ. ಎಲ್ಲಾ ತಾಲ್ಲೂಕುಗಳಲ್ಲಿ ತಲಾ 25 ಜೆಸಿಬಿ ಇಡ್ತೀನಿ, ಯಾರೇ ಒಬ್ರು ಕಿರಿಕ್ ಮಾಡಿದರೆ ಅವರ ಮನೆ ಧ್ವಂಸ ಮಾಡ್ತೀನಿ. ಇಲ್ಲದಿದ್ದರೆ ನಿಯಂತ್ರಣ ಆಗುವುದಿಲ್ಲ ಎಂದು ಹೇಳಿದರು.

**ಯಾರೇ ಕ್ವಾಯಕ್ ಅಂದ್ರೂ ಅವ್ರ ಮನೆ ಕಲಾಸ್**



ಮಹಾರಾಷ್ಟ್ರ ನಾಗಪುರನಲ್ಲಿ ಅಮಾಯಕ ಪೊಲೀಸರ ಮೇಲೆ ಹಿಂದೂಗಳ ಮೇಲೆ ದೌರ್ಜನ್ಯ ನಡೆಯುತ್ತಿದೆ. ಪೊಲೀಸ್ ಕಮಿಷನರ್ ಹಾಗೂ ಡಿಎಸ್‌ಪಿ ಮೇಲೆ ಹಲ್ಲೆ ಮಾಡ್ತಾರೆ ಅಂದರೆ ಅವರಿಗೆ ಎಷ್ಟು ದುರಹಂಕಾರ ಇದೆ. ಇದನ್ನೆಲ್ಲಾ ನಾವು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿದರು.

ಬರೀ ಮುಖ್ಯಮಂತ್ರಿ ಆಗೋದು ಲೂಟಿ ಮಾಡೋಕೆ ಅಲ್ಲ. ಯೋಗಿ ಆದಿತ್ಯನಾಥ್ ಅವರು ಭ್ರಷ್ಟಾಚಾರ ಮಾಡಿದವರ ಕುಟುಂಬದವರಿಗೆ ಮುಂದೆ ಎಂದೂ ಸರ್ಕಾರಿ ನೌಕರಿ ಸಿಗದಂತೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಈ ರೀತಿ ಮಾಡದೇ ಇದ್ದರೆ ನಮ್ಮ ದೇಶ ದೇಶವಾಗಿ ಉಳಿಯುವುದಿಲ್ಲ ಎಂದು ಅಭಿಪ್ರಾಯಪಟ್ಟರು. ರಾಜ್ಯದ ಸ್ಥಿತಿಗತಿ ಬಗ್ಗೆ ಪೊಲೀಸರು ಬಂದು ನಮ್ಮ ಹತ್ರ ಹೇಳುತ್ತಾರೆ. ಏನ್ ಮಾಡೋದು ಸರ್. ಇಂತಹ ಸರ್ಕಾರ ಇದೆ ಎಂದು ಬೇಸರ ಹೊರಹಾಕ್ತಿದ್ದಾರೆ ಎಂದು ರಾಜ್ಯ ಸರ್ಕಾರದ ವಿರುದ್ಧ ಗುಡುಗಿದರು.

# ಪಿಎಂ ವಿಶ್ವಕರ್ಮ ಯೋಜನೆಯಡಿ ಟೈಲರ್‌ಗಳಿಗೆ ಕೂಡಲೇ ಸಾಲ ವಿತರಿಸಿ

■ ಶ್ರಮಿಕ ವರ್ಗದವರಿಗೆ ಗುರುತಿಸಿ ಸೂಕ್ತ ತರಬೇತಿ ■ 15,000 ಉಚಿತ ಕಿಟ್ ನಂತರ ಬ್ಯಾಂಕ್‌ಗಳ ಮುಖಾಂತರ ಸಾಲ ನೀಡಲು ಕೇಂದ್ರ ಸರ್ಕಾರ ಕ್ರಮ

• **ಉಮೇಶ್ ಬಾಣಾವರ**

• **ಉದಯವಾಹಿನಿ ಮಂಗಳೂರು**

ಪ್ರಧಾನ ಮಂತ್ರಿಗಳ ಮಹತ್ವಾಕಾಂಕ್ಷಿ ಯೋಜನೆಯಾದ ಪಿಎಂ ವಿಶ್ವಕರ್ಮ ಯೋಜನೆ ಅಡಿಯಲ್ಲಿ ಕೇಂದ್ರ ಸರ್ಕಾರ ಸುಮಾರು 18 ಶ್ರಮಿಕ ವರ್ಗದವರನ್ನು ಗುರುತಿಸಿ ಇವರುಗಳಿಗೆ ಸೂಕ್ತ ತರಬೇತಿ ನೀಡಿ 15,000 ಉಚಿತ ಕಿಟ್ ಜೊತೆಗೆ ಬ್ಯಾಂಕ್‌ಗಳ ಮುಖಾಂತರ ಸಾಲ ನೀಡಲು ಕೇಂದ್ರ ಸರ್ಕಾರವು ಕ್ರಮ ಕೈಗೊಳ್ಳಲಾಗಿತ್ತು. ಈ ಯೋಜನೆ ಅಡಿ ರಾಜ್ಯಾದ್ಯಂತ ಸುಮಾರು 2 ಲಕ್ಷಕ್ಕೂ ಅಧಿಕ ಶ್ರಮಿಕ ವರ್ಗದವರು ಅರ್ಜಿ ಸಲ್ಲಿಸಿದ್ದು, ಇದರ ಪೈಕಿ ಶೇ.25ರಷ್ಟು ಶ್ರಮಿಕ ವರ್ಗದ ವೃತ್ತಿ ನಡೆಸುವ ಕೆಲವೇ ಮಂದಿಗೆ ತರಬೇತಿ ನೀಡಿದ್ದು ಇವರುಗಳಿಗೆ ಇದುವರೆಗೂ ಸಹ ಉಚಿತವಾಗಿ ಕಿಟ್ ಬಂದಿರುವುದಿಲ್ಲ.



**ಉಡುಪಿ ಜಿಲ್ಲಾಧಿಕಾರಿಗಳಿಗೆ ಮನವಿ**

ಇದಲ್ಲದೆ ಟೈಲರ್‌ಗಳಿಗೆ ಸಾಲವು ಕೂಡ ಇದುವರೆಗೂ ಸಹ ಮಂಜುರಾಗಿರುವುದಿಲ್ಲ. ಇತ್ತೀಚಿನ ಮಾಹಿತಿ ಪ್ರಕಾರ ಹೊಲಿಗೆ ಕಾರ್ಮಿಕರು ಅಂದರೆ ಟೈಲರ್‌ಗಳಿಗೆ ಪಿಎಂ ವಿಶ್ವಕರ್ಮ ಯೋಜನೆ ಅಡಿಯಲ್ಲಿ ಕೈ ಬಿಡಲಾಗುತ್ತಿದೆ. ಇದರ ಅರ್ಜಿಯೂ ಸಹ ಆನ್‌ಲೈನ್ ಮುಖಾಂತರ ಸಲ್ಲಿಕೆಯಾಗುತ್ತಿಲ್ಲ ಎಂದು ರಾಜ್ಯಾದ್ಯಂತ ಹೊಲಿಗೆ ಕಾರ್ಮಿಕರು ಆರೋಪ ವ್ಯಕ್ತಪಡಿಸುತ್ತಿದ್ದಾರೆ.

ಇದರಿಂದ ಕರ್ನಾಟಕ ಟೈಲರ್ ಅಸೋಸಿಯೇಷನ್ ಸಂಸ್ಥೆಯ ಪದಾಧಿಕಾರಿಗಳು ರಾಜ್ಯದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಉಡುಪಿ ಜಿಲ್ಲಾ ಜಿಲ್ಲಾಧಿಕಾರಿಗಳಾದ ವಿದ್ಯಾಕುಮಾರಿಯವರಿಗೆ ಮನವಿ ಸಲ್ಲಿಸಿ ಈ ಮನವಿಯನ್ನು ಕೂಡಲೇ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಡಲು ಕೋರಿದರು. ಕರ್ನಾಟಕ ರಾಜ್ಯ ಟೈಲರ್ಸ್ ಅಸೋಸಿಯೇಷನ್ ರಾಜ್ಯ ಕೋಶ ಅಧಿಕಾರಿಗಳಾದ ರಾಮಚಂದ್ರ ಉಡುಪಿ ಜಿಲ್ಲಾಸಮಿತಿ ಪ್ರಧಾನ ಕಾರ್ಯದರ್ಶಿಗಳಾದ ದಯಾನಂದ ಕೋಟ್ಯಾನ್, ರಾಜ್ಯ ಕಾರ್ಯದರ್ಶಿಗಳಾದ ಶಾಂತ ಬಸರೂರು. ಉಡುಪಿ ಜಿಲ್ಲಾ ಕ್ಷೇತ್ರ ಸಮಿತಿ ಅಧ್ಯಕ್ಷರಾದ ಸುರೇಶ್ ಪಾಲನ್. ಬ್ರಹ್ಮಾವರ ಕ್ಷೇತ್ರ ಸಮಿತಿ ಅಧ್ಯಕ್ಷರಾದ ನವೀನ್ ಬಿ ರಾವ್ ಸೇರಿದಂತೆ ಕರ್ನಾಟಕ ಸ್ಟೇಟ್ ಟೈಲರ್ ಅಸೋಸಿಯೇಷನ್‌ನ ಹಲವಾರು ಪದಾಧಿಕಾರಿಗಳು ಮತ್ತು ವೃತ್ತಿಬಾಂಧವರು ಉಪಸ್ಥಿತರಿದ್ದರು.



**ಸಾಲ ನೀಡಲು ಕೇಂದ್ರಕ್ಕೆ ಮನವಿ**

ರಾಜ್ಯದ ಟೈಲರ್ ವೃತ್ತಿಬಾಂಧವರಿಗೆ ಪ್ರಧಾನ ಮಂತ್ರಿಗಳ ವಿಶ್ವಕರ್ಮ ಯೋಜನೆಯಡಿಯಲ್ಲಿ ಆನ್ ಲೈನ್ ಮುಖಾಂತರ ಅರ್ಜಿ ತೆಗೆದುಕೊಳ್ಳಲು ಅವಕಾಶ ಕಲ್ಪಿಸುವಂತೆ ಮತ್ತು ಇದುವರೆಗೂ ಸಹ ಅರ್ಜಿ ಹಾಕಿರುವ ಎಲ್ಲಾ ಟೈಲರ್ಸ್ ವೃತ್ತಿಬಾಂಧವರಿಗೆ ಸೂಕ್ತ ತರಬೇತಿ ನೀಡಿ ಉಚಿತ 15 ಸಾವಿರ ರೂ.ಗಳ ಟೂಲ್ ಕಿಟ್ ಕೊಟ್ಟು ರಾಷ್ಟ್ರೀಕೃತ ಬ್ಯಾಂಕುಗಳ ಮುಖಾಂತರ ಯಾವುದೇ ಸಿಬಿಲ್ ಪರಿಗಣಿಸದಂತೆ ಸಾಲ ನೀಡಲು ಕೇಂದ್ರ ಸರ್ಕಾರಕ್ಕೆ ಮನವಿ ಕಳಿಸುವಂತೆ ಉಡುಪಿ ಜಿಲ್ಲಾ ಕರ್ನಾಟಕ ಟೈಲರ್ ಅಸೋಸಿಯೇಷನ್ ಪದಾಧಿಕಾರಿಗಳು, ಜಿಲ್ಲಾಧಿಕಾರಿಗಳು ಮತ್ತು ಮಂಗಳೂರು ಕ್ಷೇತ್ರದ ಶಾಸಕರಾದ ಯಶ್‌ಪಾಲ್ ಸುವರ್ಣ ಅವರಿಗೆ ಮನವಿ ನೀಡಿ ಗಮನ ಸೆಳೆದರು.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹8,962/Gram24ct ₹8,215/Gram22ct ಬೆಳ್ಳಿ: ₹101.00/Gram

## ಭರತನಾಟ್ಯ ಪ್ರದರ್ಶನ

• ಉದಯವಾಹಿನಿ,ಬೆಂಗಳೂರು



ಜಯನಗರ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶಾನುಸಾರ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್. ಕೆ. ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಮಾರ್ಚ್ 27, ಗುರುವಾರ ಸಂಜೆ 5-30ಕ್ಕೆ ವಿದುಷಿ ಶ್ರೀಮತಿ ಸುಮಾ ಐತಾಳ್ ಅವರ ನಿರ್ದೇಶನದಲ್ಲಿ ಕಲಾಸಂಕಲ್ಪ ನೃತ್ಯ ಶಾಲೆಯ ವಿದ್ಯಾರ್ಥಿಗಳಿಂದ ಭರತನಾಟ್ಯ ಪ್ರದರ್ಶನ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಶ್ರೀ ನಂದಕಿಶೋರಾಚಾರ್ ತಿಳಿಸಿದ್ದಾರೆ. ಸ್ಥಳ : ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಬೆಂಗಳೂರು-41

## ಹಾಲು ದರ 3 ರೂ ಹೆಚ್ಚಳ ಸಾಧ್ಯತೆ

• ಉದಯವಾಹಿನಿ,ಬೆಂಗಳೂರು

ನಂದಿನಿ ಹಾಲಿನ ದರ ಏರಿಕೆ ಬಗ್ಗೆ ಸಂಜೆ ಸರ್ಕಾರ ತೀರ್ಮಾನ ಕೈಗೊಳ್ಳಲಿದ್ದು, ಹಾಲಿನ ದರ ಪ್ರತಿ ಲೀಟರ್‌ಗೆ 3 ರೂ. ಹೆಚ್ಚಾಗುವ ಸಾಧ್ಯತೆಗಳು ಇವೆ. ಕರ್ನಾಟಕ ಹಾಲು ಮಹಾ ಮಂಡಳ ಪ್ರತಿ ಲೀಟರ್ ಹಾಲಿಗೆ 5 ರೂ. ಏರಿಕೆ ಮಾಡಬೇಕು ಎಂದು ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಿದೆ. ಹಾಲಿನ ದರ ಏರಿಕೆ ಬಗ್ಗೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಇಂದು ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್, ಕೆಎಂಎಫ್ ಅಧ್ಯಕ್ಷ ಭೀಮಾನಾಯಕ್ ಹಾಗೂ ಉನ್ನತ ಅಧಿಕಾರಿಗಳ ಜತೆ ಸಭೆ ನಡೆಸಲಿದ್ದು, ಈ ಸಭೆಯಲ್ಲಿ ಹಾಲಿನ ದರ ಏರಿಕೆ ಬಗ್ಗೆ ತೀರ್ಮಾನಗಳನ್ನು ಕೈಗೊಳ್ಳಲಾಗುತ್ತದೆ. ಕೆಎಂಎಫ್ ಸಲ್ಲಿಸಿರುವ 5 ರೂ. ಹಾಲಿನ ದರ ಏರಿಕೆ ಬದಲು ಪ್ರತಿ ಲೀಟರ್‌ಗೆ 3 ರೂ. ದರ ಹೆಚ್ಚಳ ಮಾಡಲು ಈ ಸಭೆಯಲ್ಲಿ ಒಪ್ಪಿಗೆ ನೀಡಲಾಗುತ್ತದೆ ಎಂದು ಮೂಲಗಳು ಹೇಳಿವೆ. ಈಗಾಗಲೇ ಸಾರಿಗೆ ಬಸ್ ದರ, ವಿದ್ಯುತ್, ಮೆಟ್ರೋ ಪ್ರಯಾಣ ದರಗಳು ಏರಿಕೆಯಾಗಿದ್ದು, ಹಾಲಿನ ದರ ಏರಿಕೆಯೂ ಜನರಿಗೆ ಗಾಯದ ಮೇಲೆ ಬರೆ ಎಳದಂತಾಗುತ್ತದೆ.

## 205-25: 18 ಸಾವಿರ ಕೋಟಿ ರೂ. ಗಾತ್ರದ ವಲಯವಾರು ಬಜೆಟ್ ಮಂಡನೆಗೆ ತಯಾರಿ

• ಉದಯವಾಹಿನಿ,ಬೆಂಗಳೂರು

ಬಹುನಿರೀಕ್ಷಿತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಬಜೆಟ್ ಈ ವಾರ ಮಾರ್ಚ್ 27 ಅಥವಾ ಮಾರ್ಚ್ 28 ರಂದು ಮಂಡನೆಯಾಗುವ ಸಾಧ್ಯತೆಗಳಿವೆ. ಕಳೆದ ವರ್ಷ 2024-25ರಲ್ಲಿ ಬಿಬಿಎಂಪಿ 12,371.63 ಕೋಟಿ ರೂಪಾಯಿಗಳ ಬಜೆಟ್ ಮಂಡಿಸಿತ್ತು.

(ಬಜೆಟ್ ಗಾತ್ರವನ್ನು 13,114 ಕೋಟಿ ರೂಪಾಯಿಗೆ ಹೆಚ್ಚಿಸಲಾಗಿತ್ತು). ಪ್ರಸಕ್ತ ಸಾಲಿನಲ್ಲಿ ಬಜೆಟ್ ಗಾತ್ರ 18 ಸಾವಿರ ಕೋಟಿ ರೂಗಿಂತ ಹೆಚ್ಚಾಗುವ



ಸಾಧ್ಯತೆಗಳಿವೆ ಎಂದು ತಿಳಿದುಬಂದಿದೆ. ಬೆಂಗಳೂರಿನ ಶಾಸಕರೊಂದಿಗೆ ಬಜೆಟ್ ಸಭೆಯನ್ನು ನಗರಸಭೆ ನಿಗದಿಪಡಿಸಿದ್ದು, ಬೆಂಗಳೂರಿನ ಅಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ವರ್ಷದ ಬಜೆಟ್‌ನಲ್ಲಿ ಸುಗಮ ಸಂಚಾರ ಬೆಂಗಳೂರು, ಸ್ವಚ್ಛ ಬೆಂಗಳೂರು, ಹಸಿರು ಬೆಂಗಳೂರು, ಆರೋಗ್ಯಕರ ಬೆಂಗಳೂರು, ಶಿಕ್ಷಣ ಬೆಂಗಳೂರು, ಟೆಕ್ ಬೆಂಗಳೂರು, ವೈಬ್ರೆಂಟ್ ಬೆಂಗಳೂರು ಮತ್ತು ಜಲ ಭದ್ರತಾ ಬೆಂಗಳೂರು ಮತ್ತು ಬ್ರ್ಯಾಂಡ್ ಬೆಂಗಳೂರು ಸೇರಿದಂತೆ ಎಂಟು ವಿಭಾಗಗಳಿಗೆ ಬಜೆಟ್ ಹಂಚಿಕೆ ಕುರಿತು ಚರ್ಚೆ ನಡೆಸುವ ಸಾಧ್ಯತೆಗಳಿವೆ. ಪ್ರಸಕ್ತ ಸಾಲಿನ ಬಜೆಟ್'ನಲ್ಲಿ ಮೂಲಭೂತ ಸೌಕರ್ಯಗಳಿಗೆ ಒತ್ತು ನೀಡಲಿದ್ದು, ಪ್ರಮುಖ ರಸ್ತೆಗಳನ್ನು ಸಿಗ್ನಲ್ ಮುಕ್ತಗೊಳಿಸುವ ಹಾಗೂ ನಗರವನ್ನು ತೀವ್ರ ಕಾಡುತ್ತಿರುವ ಘನತ್ಯಾಜ್ಯ ನಿರ್ವಹಣೆ ಸಮಸ್ಯೆಯನ್ನು ಕೇಂದ್ರೀಕರಿಸುತ್ತದೆ. ಕಳೆದ ಬಾರಿಯ ಬಜೆಟ್‌ನಲ್ಲಿ ನಗರದಲ್ಲಿ ಭಾರೀ ಸಂಚಾರ ದಟ್ಟಣೆ ಇರುವ ಎರಡು ಸ್ಥಳಗಳಲ್ಲಿ ಸುರಂಗ ಯೋಜನೆ ಸೇರಿದಂತೆ ವಿವಿಧ ರಸ್ತೆ ಯೋಜನೆಗಳಿಗೆ ಡಿಪಿಆರ್ ಸಿದ್ಧಪಡಿಸಲು 200 ಕೋಟಿ ರೂ.ಗಳ ಅನುದಾನವನ್ನು ಕಾಯ್ದಿರಿಸಲಾಗಿತ್ತು.

# ಅಧಿವೇಶನದಲ್ಲಿ ಬಿಜೆಪಿ ಎತ್ತಿದ ಪ್ರಶ್ನೆಗಳಿಗೆ ಸರ್ಕಾರ ಗಪ್‌ಚುಪ್

### ಬಾಬಾ ಸಾಹೇಬ್ ಅಂಬೇಡ್ಕರ್‌ರ ಸಂವಿಧಾನಕ್ಕೆ ವಿರೋಧವಾಗಿ ನಡೆದುಕೊಂಡಿದ್ದಕ್ಕೆ ಬಿಜೆಪಿ ಪ್ರತಿಭಟನೆ

• ಉದಯವಾಹಿನಿ,ಬೆಂಗಳೂರು

ಈ ಅಧಿವೇಶನದಲ್ಲಿ ಅನೇಕ ಸಮಸ್ಯೆಗಳ ಬಗ್ಗೆ ಬಿಜೆಪಿ ಬೆಳಕು ಚೆಲ್ಲಿದೆ. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಯಾವುದಕ್ಕೂ ಸರಿಯಾದ ಉತ್ತರ ನೀಡಿಲ್ಲ. ಪ್ರತಿಭಟನೆ ಮಾಡಿರುವುದಕ್ಕೆ ಶಾಸಕರನ್ನೇ ಅಮಾನತು ಮಾಡಲಾಗಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಜೆಟ್ ಪುಸ್ತಕದಲ್ಲಿ ಬಹಳ ಸುಳ್ಳುಗಳಿವೆ. ಸಿಎಂ ಕಚೇರಿಯಲ್ಲಿ ಕೆಲಸ ಮಾಡುವವರು ಗ್ಯಾರಂಟಿಯನ್ನು ಹೊಗಳಿದ್ದನ್ನು ಪುಸ್ತಕದಲ್ಲಿ ಉಲ್ಲೇಖಿಸಲಾಗಿದೆ. ಅಧಿವೇಶನದಲ್ಲಿ ಚರ್ಚೆ ಮಾಡಿದ ಎಲ್ಲಾ ವಿಷಯಗಳನ್ನ ಜನರ ಮುಂದೆ ಇಡಲಿದ್ದೇವೆ. ಜನರ ನ್ಯಾಯಾಲಯದಲ್ಲಿ ಸರ್ಕಾರದ ಬಗ್ಗೆ ಜನರೇ ತೀರ್ಮಾನ ಮಾಡಲಿದ್ದಾರೆ ಎಂದರು.

**ಬಿಜೆಪಿ ಶಾಸಕರ ಅಮಾನತು ಸರಿಯಲ್ಲ:** ಈ ಬಾರಿಯ ಅಧಿವೇಶನದಲ್ಲಿ ಕಾಂಗ್ರೆಸ್ ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧ ಪ್ರತಿಭಟಿಸಲಾಗಿದೆ. ಸಿಎಂ ಸಿದ್ದರಾಮಯ್ಯ ವೀಲ್ ಚೇರ್‌ನಲ್ಲಿದ್ದರೆ, ಸರ್ಕಾರ ಇನ್ನೂ ತೆವಳುತ್ತಿದೆ. 18 ಶಾಸಕರನ್ನು ಸ್ಪೀಕರ್ ಯು.ಟಿ.ಖಾದರ್ ಅಮಾನತು ಮಾಡಿದ್ದಾರೆ. ಮಾನಗೇಡಿ ಕಾಂಗ್ರೆಸ್‌ನವರು ವಿಧಾನಪರಿಷತ್‌ನಲ್ಲಿ ಸಭಾಪತಿ ಸ್ಥಾನದಲ್ಲಿ



ಉದಯವಾಹಿನಿ ಚಿತ್ರ

**ಬಿಜೆಪಿ ಶಾಸಕರ ಅಮಾನತು ಸರಿಯಲ್ಲ**

ಕುಳಿತಿದ್ದ ಎಸ್.ಎಲ್.ಧರ್ಮೇಗೌಡ ಅವರನ್ನು ಎಳೆದು ಅಪಮಾನ ಮಾಡಿದ್ದರು. ಆದರೂ ಬಿಜೆಪಿ ಧರಣಿ ಮಾಡಿದ್ದೇ ತಪ್ಪು ಎನ್ನುತ್ತಿದ್ದಾರೆ. ಬಾಬಾ ಸಾಹೇಬ್ ಅಂಬೇಡ್ಕರ್‌ರ ಸಂವಿಧಾನಕ್ಕೆ ವಿರೋಧವಾಗಿ ನಡೆದುಕೊಂಡಿದ್ದಕ್ಕೆ ಬಿಜೆಪಿ ಪ್ರತಿಭಟಿಸಿದೆ. ಕಾಂಗ್ರೆಸ್ ಚಿತಾವಣೆಯಿಂದ ಸ್ಪೀಕರ್ ಯು.ಟಿ.ಖಾದರ್ ಅಮಾನತು ಮಾಡಿದ್ದಾರೆ. ಹಿಂದಿನ ಯಾವುದೇ ಸ್ಪೀಕರ್ ಈ ರೀತಿ ದೀರ್ಘಾವಧಿಯ ಅಮಾನತು ಮಾಡಿಲ್ಲ ಎಂದರು.

**ಧರ್ಮಾಧಾರಿತ ಮೀಸಲಾತಿಯನ್ನು ಅಂಬೇಡ್ಕರ್ ವಿರೋಧಿಸಿದ್ದರು:** ಸಂವಿಧಾನ ರಚನಾ ಸಭೆಯಲ್ಲಿ ಮುಸ್ಲಿಮ್ ಮೀಸಲಾತಿಗೆ ವಿರೋಧ ಕೇಳಿಬಂದಿತ್ತು. ತಜ್ಮುಲ್ಲಾ ಹುಸೇನ್ ಎಂಬ ನಾಯಕರು ಮುಸ್ಲಿಮ್ ಮೀಸಲಾತಿಯನ್ನು ವಿರೋಧಿಸಿದ್ದರು. ಈಗ ಕಾಂಗ್ರೆಸ್ ವೋಟ್‌ಬ್ಯಾಂಕ್‌ಗಾಗಿ ಮೀಸಲಾತಿ

- ಅಧಿವೇಶನದಲ್ಲಿ ಬಿಜೆಪಿ ಪ್ರಶ್ನೆಗಳಿಗೆ ಸರ್ಕಾರ ಗಪ್‌ಚುಪ್
- ಅಧಿವೇಶನದಲ್ಲಿ ಚರ್ಚೆ ಮಾಡಿದ ಎಲ್ಲಾ ವಿಷಯಗಳನ್ನ ಜನರ ಮುಂದೆ ಇಡಲಿದ್ದೇವೆ
- ಈ ಬಾರಿಯ ಅಧಿವೇಶನದಲ್ಲಿ ಕಾಂಗ್ರೆಸ್ ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧ ಪ್ರತಿಭಟಿಸಲಾಗಿದೆ

ನೀಡಿದೆ. ಹಿಂದೂ-ಮುಸ್ಲಿಂ ನಡುವೆ ಒಡಕು ತಂದು ಬ್ರಿಟಿಷರ ಕೆಲಸವನ್ನು ಕಾಂಗ್ರೆಸ್ ಮುಂದುವರಿಸುತ್ತಿದೆ. ಗುತ್ತಿಗೆಯಲ್ಲಿನ ಮೀಸಲಾತಿಯಿಂದಾಗಿ ಇದರಿಂದಾಗಿ ಹಿಂದೂಗಳಿಗೆ ಅವಕಾಶ ಕಡಿಮೆಯಾಗಿದೆ. ಈಗಾಗಲೇ ಗುತ್ತಿಗೆದಾರರಲ್ಲಿ ಮುಸ್ಲಿಮರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಧರ್ಮಾಧಾರಿತ ಮೀಸಲಾತಿಯನ್ನು ಅಂಬೇಡ್ಕರ್ ವಿರೋಧಿಸಿದ್ದರು. ಇದನ್ನು ಕೂಡ ಕಾಂಗ್ರೆಸ್ ಹೇಳಬೇಕು ಎಂದರು.

ಲೋಕಸೇವಾ ಆಯೋಗದ ಅಕ್ರಮ, ದಲಿತರ ಹಣ ವರ್ಗಾವಣೆ ಬಗ್ಗೆಯೂ ಅಧಿವೇಶನದಲ್ಲಿ ಮಾತನಾಡಿದ್ದೇನೆ. ಎಸ್‌ಸಿಎಸ್ಪಿ/ಟಿಎಸ್‌ಪಿ ಹಣ ವರ್ಗಾವಣೆ ಬಗ್ಗೆ ಸಿಎಂ ಸಿದ್ದರಾಮಯ್ಯ ತಪ್ಪಾಗಿ ಉತ್ತರ ನೀಡಿದ್ದಾರೆ. ಹುಲಿ ಯೋಜನೆಗೂ ಈ ಹಣ ಬಳಸಲಾಗಿದೆ. ಈ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರ ಜನರ ಮುಂದೆ ಬೆತ್ತಲಾಗಿದೆ ಎಂದರು.

**ಗ್ಯಾರಂಟಿ ಸಮಿತಿಗೆ ವಿರೋಧ**

**ಗ್ಯಾರಂಟಿ ಯೋಜನೆಯನ್ನು ಜನರಿಗೆ ನೇರವಾಗಿ ನೀಡುವುದು ಬಿಟ್ಟು ಕಾಂಗ್ರೆಸ್ ಕಾರ್ಯಕರ್ತರಿಗೆ ಅಧಿಕಾರ ನೀಡಲಾಗಿದೆ. ಅಧಿಕಾರಿಗಳೇ ಇರುವಾಗ ಕಾರ್ಯಕರ್ತರು ಸಭೆ ನಡೆಸುವುದು ಏಕೆ ಗ್ಯಾರಂಟಿ ಅನುಷ್ಠಾನ ಸಮಿತಿಗಳಿಂದ 150 ಕೋಟಿ ರೂ. ನಷ್ಟವಾಗಲಿದೆ. ಇವರು ಏಜೆಂಟ್‌ಗಳಂತೆ ಕೆಲಸ ಮಾಡಲಿದ್ದಾರೆ. ಇದರ ವಿರುದ್ಧ ಬಿಜೆಪಿ ಅಧಿವೇಶನದಲ್ಲಿ ಹೋರಾಟ ಮಾಡಿದೆ ಎಂದರು.**

**ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ:** ಮಹಿಳೆಯರ ಮೇಲೆ ಅತ್ಯಾಚಾರ, ದೌರ್ಜನ್ಯ ನಡೆಯುತ್ತಿದೆ. ನಿಗಮಗಳಿಗೆ 1,600 ಕೋಟಿ ರೂ. ಹಣ ಕಡಿತವಾಗಿರುವುದರಿಂದ ಮೈಕ್ರೋ ಫೈನಾನ್ಸ್‌ಗಳಿಂದ ಜನರು ಸಾಲ ಪಡೆದಿದ್ದಾರೆ. ಆದರೆ ಸರ್ಕಾರ ಕಾನೂನು ತಂದು ಸುಮ್ಮನಾಗಿದೆ. ಕಾನೂನು ತಂದ ಬಳಿಕವೂ ಆತ್ಮಹತ್ಯೆ ನಡೆದಿದೆ. ಒಂಬತ್ತು ವಿಶ್ವವಿದ್ಯಾಲಯಗಳನ್ನು ಮುಚ್ಚಿರುವುದರ ಬಗ್ಗೆಯೂ ಪ್ರಶ್ನೆ ಮಾಡಿದ್ದೇನೆ. ವಿವಿಗಳ ವಿಚಾರದಲ್ಲಿ ಸರ್ಕಾರ ನಿರಾಸಕ್ತಿ ತೋರಿಸಿದೆ ಎಂದರು.

## ಎಸ್.ರಘುನಾಥ್, ರವರ ತಂಡದಿಂದ ವಿಜಯ ಸಂಕಲ್ಪ ಯಾತ್ರೆ

• ಉದಯವಾಹಿನಿ,ಬಸವನಗುಡಿ

ದೊಡ್ಡಗಣಪತಿ ದೇವಸ್ಥಾನದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷೀಯ ಚುನಾವಣೆ, ನಗರ ಜಿಲ್ಲಾ ಪ್ರತಿನಿಧಿಗಳ ಚುನಾವಣೆ ಪ್ರಯುಕ್ತ ಚುನಾವಣೆ ಪ್ರಚಾರ ಶುಭಾರಂಭಿಸಲು ವಿಶೇಷ ಪೂಜೆ ಸಮಾರಂಭ.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷೀಯ ಅಭ್ಯರ್ಥಿ ಎಸ್.ರಘುನಾಥ್ ರವರು ಮತ್ತು ನಿಕಟಪೂರ್ವ ಉಪಾಧ್ಯಕ್ಷರಾದ ಆರ್.ಲಕ್ಷ್ಮಿಕಾಂತ್ ರವರು, ವಿಪ್ರ ಮುಖಂಡರಾದ ಅರುಳು ಮಲ್ಲಿಗೆ ಪಾರ್ಥಸಾರಥಿ, ನರಸಿಂಹನ್, ವಿಶೇಷ ಪೂಜೆ ಸಲ್ಲಿಸಿದರು. ನಗರ ಜಿಲ್ಲಾ ಪ್ರತಿನಿಧಿ ಸ್ಥಾನಕ್ಕೆ ಸ್ಪರ್ಧಿಸುತ್ತಿರುವ ರಾಜಶೇಖರ್ ಜಿ.ರಾವ್, ಸತೀಶ್ ಉರಾಳ್ ,ಜಿ ಎಸ್ ನಾಗೇಶ್, ಕೆ.ಎನ್. ರವಿಕುಮಾರ್, ಎ ದಿಲೀಪ್ ಕುಮಾರ್, ಶ್ರೀನಿವಾಸ ಪಿ ರಾಘವನ್,ಎಸ್. ಎಸ್.ಪ್ರಸಾದ್ ಶ್ರೀಮತಿ ಅಂಬಿಕಾ ರಾಮಚಂದ್ರ ರವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಎಸ್.ರಘುನಾಥ್ ರವರು



ಉದಯವಾಹಿನಿ ಚಿತ್ರ

ಮಾತನಾಡಿ ವಿಪ್ರ ಸಮುದಾಯದ ಆರ್ಥಿಕವಾಗಿ, ಶೈಕ್ಷಣಿಕ, ರಾಜಕೀಯವಾಗಿ ಸಬಲರಾಗಬೇಕು ಈ ನಿಟ್ಟಿನಲ್ಲಿ ನಮ್ಮ ಸಾಧನೆ, ಯೋಜನೆಗಳನ್ನು ಮುಂದಿಟ್ಟು ಚುನಾವಣೆಯಲ್ಲಿ ಮತಯಾಚನೆ ಮಾಡುತ್ತಿದ್ದೇವೆ.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆ ಪ್ರಯುಕ್ತ ರಾಜ್ಯಾದ್ಯಂತ ಚುನಾವಣೆ ಪ್ರವಾಸದಲ್ಲಿ ವಿಪ್ರ ಸಮುದಾಯ ಮತ್ತು ಮುಖಂಡರುಗಳಿಂದ ಉತ್ತಮ ಬೆಂಬಲ, ಸಹಕಾರ ನೀಡುತ್ತಿದ್ದಾರೆ.

ಈ ಬಾರಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ

**ಆರ್.ಲಕ್ಷ್ಮಿಕಾಂತ್ ರವರು ಮಾತನಾಡಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಮಾಡಲಾಗಿದೆ. ಹೋದ ಕಡೆಗಳಲ್ಲಿ ಅಭೂತಪೂರ್ವ ಬೆಂಬಲ ಸಿಗುತ್ತಿದೆ. ಈ ಬಾರಿ ಎಸ್.ರಘುನಾಥ್ ರವರ ತಂಡ ಅತ್ಯಧಿಕ ಮತಗಳಿಂದ ಜಯಭೇರಿ ಬಾರಿಸಲಿದೆ. ವಿಪ್ರ ಸಮುದಾಯ ಏಳಿಗೆಗಾಗಿ ನಮ್ಮ ಯೋಜನೆಗಳನ್ನು ರೂಪಿಸಲಾಗಿದೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯದ ಪ್ರತಿ ಮನೆಯ ವಿಪ್ರರ ಕುಟುಂಬಗಳಿಗೆ ತಲುಪವಂತೆ ಮಾಡಲಾಗುವುದು ಎಂದು ಹೇಳಿದರು.**

ಹೊಸ ಚೈತನ್ಯ, ನವಶಕ್ತಿ ಹೊಸ ದಿಕ್ಕಿನತ್ತ ಸಾಗಲಿದೆ ಎಂದು ಹೇಳಿದರು. ವಿಪ್ರ ಸಮುದಾಯದ ಮುಖಂಡರುಗಳು, ಸಿ.ವಿ.ಎಲ್.ಶಾಸ್ತ್ರೀ ಮತ್ತು ಬಿ.ಎನ್.ವಿ.ಸುಬ್ರಮಣ್ಯರವರ ಅಭಿಮಾನಿಗಳು ಉಪಸ್ಥಿತರಿದ್ದರು.

## ಶೇ 70ಕ್ಕೂ ಅಧಿಕ ಮರಗಳ ನಾಶ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಯಲಹಂಕ

ಭೂಮಿಯ ಮೇಲಿದ್ದ ಶೇ 70ಕ್ಕೂ ಅಧಿಕ ಮರಗಳು ನಾಶವಾಗಿವೆ ಎಂದು ಗ್ಲೋಬಲ್ ಗ್ರೀನ್ ಫ್ರೋತ್ ಫೌಂಡೇಷನ್‌ನ ಸಂಸ್ಥಾಪಕ ಅಧ್ಯಕ್ಷ ಚಂದ್ರಶೇಖರ್ ಬಿರಾದಾರ ಕಳವಳ ವ್ಯಕ್ತಪಡಿಸಿದರು. ಅಂತರರಾಷ್ಟ್ರೀಯ ಅರಣ್ಯ ದಿನದ ಪ್ರಯುಕ್ತ ಗ್ಲೋಬಲ್ ಗ್ರೀನ್ ಫ್ರೋತ್ ಫೌಂಡೇಷನ್, ಎಸ್ಸಾ ಸೊಸೈಟಿ ಹಾಗೂ ಜಿಕೆವಿಕೆ ಆವರಣದಲ್ಲಿರುವ ತೋಟಗಾರಿಕಾ ಮಹಾವಿದ್ಯಾಲಯ, ದಂಡಿನ್ ಫೌಂಡೇಷನ್ ಹಮ್ಮಿಕೊಂಡಿದ್ದ 'ಅರಣ್ಯ ಓಟ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಟಿಂಬರ್‌ಗೆ ಅಥವಾ ವ್ಯಾವಹಾರಿಕವಾಗಿ ಮರಗಳನ್ನು ಬೆಳೆದರೆ ಸಾಲದು. ಭೂಮಿಯೊಳಗಿನ ಉಷ್ಣಾಂಶ ಸಮತೋಲನದಲ್ಲಿ ಇರಬೇಕಾದರೆ ಮರಗಳ ಸಂಖ್ಯೆ ಹೆಚ್ಚಾಗಬೇಕು. ಮರಗಳ ಬಳಕೆಯ ಬಗ್ಗೆ ಜನರಿಗೆ ಅರಿವು ಮೂಡಿಸುವ ಮೂಲಕ ಹೆಚ್ಚಾಗಿ ಮರಗಳನ್ನು ಬೆಳೆಸಲು ಎಲ್ಲಾರೂ ಸಂಕಲ್ಪ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು. ತೋಟಗಾರಿಕಾ ಮಹಾವಿದ್ಯಾಲಯದ ಡೀನ್ ಸಿ.ಜಿ.ಕೆ. ಸ್ವಾಮಿ ಮಾತನಾಡಿ, 'ಅರಣ್ಯ, ತೋಟಗಾರಿಕೆ ಮತ್ತು ಆಹಾರ ಭದ್ರತೆಯ ನಡುವೆ ಪರಸ್ಪರ ಸಂಬಂಧವಿದ್ದು, ಮರ ಆಧಾರಿತ ಆಹಾರ ವ್ಯವಸ್ಥೆಗಳ ಪ್ರಚಾರದ ಮೂಲಕ ಹಸಿರು ಆರ್ಥಿಕತೆ ಬಗ್ಗೆ ಅರಿವು ಮೂಡಿಸಲು ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯವು ಬದ್ಧವಾಗಿದೆ' ಎಂದು ತಿಳಿಸಿದರು. ಎಸ್ಸಾ ಸೊಸೈಟಿಯ ಅಧ್ಯಕ್ಷ ಅಚ್ಯುತರಾವ್, ರೈತ ಉತ್ಪಾದಕ ಉತ್ಕೃಷ್ಟ ಕೇಂದ್ರದ ನಿರ್ದೇಶಕ ಮೆಸ್ತಾ ಆರ್.ಕೆ., ತೋಟಗಾರಿಕೆ ಮಹಾವಿದ್ಯಾಲಯದ ಸಹಾಯಕ ಡೀನ್ (ವಿದ್ಯಾರ್ಥಿ ಕಲ್ಯಾಣ) ವೆಂಕಟರಾವ್, ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ ಅಂಬಿಕಾ ಡಿ.ಎಸ್. ಉಪಸ್ಥಿತರಿದ್ದರು.

## ಡಾ.ಶಿವಕುಮಾರ ಸ್ವಾಮೀಜಿಯವರ 118ನೇ ಪುಣ್ಯಾರಾಧನೆ

• ಉದಯವಾಹಿನಿ,ಬೆಂಗಳೂರು

ಪೀಣ್ಯ ದಾಸರಹಳ್ಳಿ ಸಮೀಪದ ದಾಸರಹಳ್ಳಿಯ ನೆಲೆ ಮಹೇಶ್ವರಮ್ಮ ದೇವಸ್ಥಾನದ ಆವರಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಬೆಂಗಳೂರು ಘಟಕ, ವೀರಶೈವ ಲಿಂಗಾಯಿತ ಕ್ಷೇಮಾಭಿವೃದ್ಧಿ ವೇದಿಕೆ ದಾಸರಹಳ್ಳಿ ಕ್ಷೇತ್ರ, ಅಖಿಲ ಭಾರತ ವೀರಶೈವ- ಲಿಂಗಾಯತ ಮಹಾಸಭಾ, ಕಾಯಕಯೋಗಿ ಸಹಕಾರ ಸಂಘ ನಿಯಮಿತ ಮತ್ತು ಅಕ್ಕಮಹಾದೇವಿ ಮಹಿಳಾ ಸಂಘದ ವತಿಯಿಂದ ಶ್ರೀ ಶಿವಕುಮಾರ ಸ್ವಾಮೀಜಿ ಅವರ 118ನೇ ಜನ್ಮ ದಿನೋತ್ಸವದ ಪ್ರಯುಕ್ತ ವಚನಾಮೃತ ಮತ್ತು





ಉದಯವಾಹಿನಿ ಚಿತ್ರ

ಆಧ್ಯಾತ್ಮಿಕ ಪ್ರವಚನ ವಚನ ಗೀತೆ, ಭಕ್ತಿ ಗೀತೆಯನ್ನು ರಾಯಚೂರು ಜಿಲ್ಲೆ ಮಹಾಂತೇಶ್ವರ ಮಠದ ಮಹಾಂತ ಮಹಾಸ್ವಾಮೀಜಿ ನಡೆಸಿಕೊಟ್ಟರು.

ಸಿದ್ದಗಂಗಾ ಮಠದ ಕಿರಿಯ ಸ್ವಾಮಿಗಳಾದ ಶಿವ ಸಿದ್ದೇಶ್ವರ ಮಹಾಸ್ವಾಮಿಗಳು, ವಿಜಿಪುರ ಮಠದ ಸದಾಶಿವ ಸ್ವಾಮಿಗಳು ಭಾಗವಹಿಸಿದರು. 1000 ಜನರಿಗೆ ಅನ್ನ ದಾಸೋಹವನ್ನು ದಾಸರಹಳ್ಳಿ ಕ್ಷೇತ್ರ ಘಟಕ ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ವೈಬಿಎಚ್ ಜಯದೇವ್ ಅವರು ಏರ್ಪಡಿಸಿದ್ದರು. ವೇದಿಕೆಯ ಅಧ್ಯಕ್ಷ ಬಸವರಾಜಣ್ಣ, ಪಿ ಎಚ್ ರಾಜು, ಎಂ ಬಸವರಾಜ್, ಎಂ.ಕೆ ಜಗದೀಶ್, ಸೋಲಾರ್ ಸುಬ್ಬಣ್ಣ ಮುಂತಾದವರಿದ್ದರು.

## ಪ್ರತ್ಯೇಕ ಪ್ರಕರಣ: ಇಬ್ಬರ ಬಂಧನ, 5 ದ್ವಿಚಕ್ರ ವಾಹನ ವಶ

• ಉದಯವಾಹಿನಿ,ಬೆಂಗಳೂರು

ಹನುಮಂತನಗರ ಹಾಗೂ ಪುಟ್ಟೇನಹಳ್ಳಿ ಪೊಲೀಸರು ಪ್ರತ್ಯೇಕ ಕಾರ್ಯಾಚರಣೆ ನಡೆಸಿ ಇಬ್ಬರು ಆರೋಪಿಗಳನ್ನು ಬಂಧಿಸಿ, ಐದು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಹನುಮಂತನಗರ ಠಾಣಾ ವ್ಯಾಪ್ತಿಯ ಶ್ರೀನಗರದ ಅಪಾರ್ಟ್‌ಮೆಂಟ್ ನಿವಾಸಿ ಸೂರಜ್ ಅವರ ದ್ವಿಚಕ್ರ ವಾಹನ ಕಳವು ಆಗಿತ್ತು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಪೊಲೀಸರು, ಶ್ರೀನಗರದ ಶಾಮಣ್ಣ ಉದ್ಯಾನ ಬಳಿ ಆರೋಪಿ ತೌಫೀಕ್ ಪಾಷಾನನ್ನು ವಶಕ್ಕೆ ಪಡೆದು ವಿಚಾರಣೆ



ಉದಯವಾಹಿನಿ ಚಿತ್ರ

ನಡೆಸಿದರು. ಆರೋಪಿ ನೀಡಿದ ಮಾಹಿತಿ ಆಧರಿಸಿ ಕೆಂಪೇಗೌಡ ಆಟದ ಮೈದಾನದ ಪಕ್ಕದ ಖಾಲಿ ಜಾಗದಲ್ಲಿ ನಿಲ್ಲಿಸಿದ್ದ 1 ಲಕ್ಷ ಮೌಲ್ಯದ ಮೂರು ವಾಹನಗಳನ್ನು ವಶಕ್ಕೆ ಪಡೆದುಕೊಳ್ಳಲಾಯಿತು. ಆರೋಪಿಯ ಬಂಧನದಿಂದ ಮೂರು ಪ್ರಕರಣ ಪತ್ತೆಯಾಗಿವೆ' ಎಂದು ಪೊಲೀಸರು ತಿಳಿಸಿದರು.

ಪುಟ್ಟೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಬಿ.ಜಿ.ರಸ್ತೆ ನಿವಾಸಿ ಮೊಹದ್ದೀನ್ ಜಿಲಾನಿ ಅವರು ಮನೆ ಮುಂದೆ ನಿಲ್ಲಿಸಿದ್ದ ವಾಹನ ಕಳುವಾಗಿತ್ತು.

ಪ್ರಕರಣ ದಾಖಲಿಸಿಕೊಂಡು ಕಾರ್ಯಚರಣೆ ನಡೆಸಿದ ಪೊಲೀಸರು, ಬಿಎಂಟಿಸಿ ಬಸ್ ಡಿಪೊ ಬಳಿ ಆರೋಪಿ ಮಾರಿಮುತ್ತು ಎಂಬಾತನನ್ನು ಬಂಧಿಸಿ, ವಿಚಾರಣೆ ನಡೆಸಿದಾಗ ಕಳವು ಮಾಡಿರುವುದಾಗಿ ಒಪ್ಪಿಕೊಂಡ ಎಂದು ಪೊಲೀಸರು ತಿಳಿಸಿದರು. ಆರೋಪಿಯಿಂದ 60 ಸಾವಿರ ಮೌಲ್ಯದ ಎರಡು ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ ಎಂದರು.

## ಸ್ಮಾರ್ಟ್ ಮೀಟರ್ ಅಳವಡಿಸಿಕೊಳ್ಳಲು ಬಲವಂತ ಇಲ್ಲ

• ಉದಯವಾಹಿನಿ,ಬೆಂಗಳೂರು

ಹೊಸದಾಗಿ ಮೀಟರ್‌ಗಳನ್ನು ಅಳವಡಿಸಿಕೊಳ್ಳುವವರಿಗೆ ಮಾತ್ರ ಸ್ಮಾರ್ಟ್ ಮೀಟರ್ ವ್ಯವಸ್ಥೆ ಜಾರಿ ಮಾಡಲಾಗುವುದು, ಯಾರಿಗೂ ಬಲವಂತ ಮಾಡಲ್ಲ ಎಂದು ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ ತಿಳಿಸಿದರು. ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಮತ್ತು ಪೂರೈಕೆ ವ್ಯವಸ್ಥೆ ಹೇಗಿದೆ ಎಂಬುದನ್ನು ತಿಳಿಸಲು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಇವರು, ಸ್ಮಾರ್ಟ್ ಮೀಟರ್ ಯೋಜನೆ ಕೇಂದ್ರ ಸರ್ಕಾರದ್ದು, ಅದರಲ್ಲಿನ ಕೆಲವು ಲೋಪದೋಷಗಳಿಂದ ರಾಜ್ಯ ಸರ್ಕಾರ ಒಪ್ಪಿಕೊಂಡಿರಲಿಲ್ಲ.

ಕೆಲವು ನಿಬಂಧನೆಗಳಂತೆ ಆರ್.ಡಿ.ಎಸ್. ಎಸ್ ಯೋಜನೆಯಡಿಯಲ್ಲಿ ಹೊಸ ಮೀಟರ್ ವ್ಯವಸ್ಥೆಯನ್ನು ಜಾರಿ ಮಾಡಿದ್ದೇವೆ. ಬೇರೆ ರಾಜ್ಯಗಳಲ್ಲಿ ಒಟ್ಟಿಗೆ ಹಳೆ ಮೀಟರಗಳನ್ನು ತೆಗೆದು ಹೊಸ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸಿಕೊಳ್ಳವ ವ್ಯವಸ್ಥೆ ಇದೆ ಎಂದು ಸಮಜಾಯಿಸಿ ನೀಡಿದರು. ಈ ಪದ್ದತಿಯನ್ನು ಕರ್ನಾಟಕದಲ್ಲಿ ತಿರಸ್ಕರಿಸಿದ್ದೇವೆ. ಅದರ ಬದಲಾಗಿ ಹೊಸೆ ಮನೆ ಕಟ್ಟಿದಾಗ ಮತ್ತು ಹಳೆ ಮೀಟರುಗಳು ದುರಸ್ತಿಗೆ ಒಳಪಟ್ಟಾಗ ಮಾತ್ರ ಸ್ಮಾರ್ಟ್ ಮೀಟರ್



ಉದಯವಾಹಿನಿ ಚಿತ್ರ

ಅಳವಡಿಸಿಕೊಳ್ಳಲು ಗ್ರಾಹಕರಿಗೆ ತಿಳಿಸಿದ್ದೇವೆ.

ಹಳೆ ಮೀಟರಗಳು ಹಾಗೆ ಇರುತ್ತವೆ ಎಂದರು ಹೊಸ ಸ್ಮಾರ್ಟ್ ಮೀಟರ್ ಅಳವಡಿಸಿಕೊಳ್ಳಲು ಗ್ರಾಹಕರು 5000 ರೂಗಳನ್ನು ಕಟ್ಟಿನಂತರ ಇದರಲ್ಲಿನ ತಂತ್ರಜ್ಞಾನ ಅಳವಡಿಕೆಯ ಕಾರಣದಿಂದಾಗಿ ಅದರ ನಿರ್ವಹಣೆಗಾಗಿ ಹತ್ತು ವರ್ಷಗಳ ಕಾಲ 116ಗಳನ್ನು ಪ್ರತಿ ತಿಂಗಳು ಪಾವತಿಸ ಬೇಕು ಎಂದರು. ಇದರ ಕುರಿತಾಗಿ ಬಡವರಿಗೆ ಹೊರೆಯಾಗುವುದಿಲ್ಲವೇ, ಇದರಲ್ಲಿ ವಿರೋಧ ಪಕ್ಷಗಳನ್ನು ಭ್ರಷ್ಟಾಚಾರ ನಡೆದಿದೆ ಎಂದು ಆಪಾದಿಸುತ್ತಿವೆ ಎಂಬ ಮಾಧ್ಯಮ ಪ್ರಶ್ನೆಗೆ ಇದರಲ್ಲಿ ಆ ರೀತಿಯ ಭ್ರಷ್ಟಾಚಾರ ಇಲ್ಲ, ಬಡವರಿಗೆ ಯಾವುದೇ ಹೊರೆಯಾಗುವುದಿಲ್ಲ.

ಟೆಂಡರ್ ಸೇರಿದಂತೆ ಎಲ್ಲಾವೂ ಪಾರದರ್ಶಕತೆಯಿಂದ ನಡೆಯುತ್ತಿದೆ ಎಂದು ಇಂಧನ ಇಲಾಖೆ ಮುಖ್ಯ ಕಾರ್ಯದರ್ಶಿ ಗೌರವ ಗುಪ್ತ, ಬೆಸ್ಕಾಂ ಎಂಡಿ ಡಾ.ಎಂ ಶಿವಶಂಕರ್ ಸಮರ್ಥಿಸಿಕೊಂಡರು. ನಮ್ಮಲ್ಲಿ ಹೆಚ್ಚಿಗೆ

**ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಮತ್ತು ಪೂರೈಕೆ ಬಗ್ಗೆ ಮಾತನಾಡಿದ ಪಂಕಜ್ ಕುಮಾರ್ ಪಾಂಡೆ, ಕಳೆದ ವರ್ಷ ಉತ್ತಮ ಮಳೆಯಾಗಿದೆ ಆದ್ದರಿಂದ ರೈತರು ಎರಡು ಬೆಳೆಗಳನ್ನ ಬೆಳೆದಿದ್ದಾರೆ ಇದರಿಂದಾಗಿ ವಿದ್ಯುತ್ ಬೇಡಿಕೆ ಹೆಚ್ಚಾಗಿದೆ ಇದನ್ನು ಸರಿದೂಗಿಸಲು ಹೊರ ರಾಜ್ಯಗಳಾದ ಉತ್ತರ ಪ್ರದೇಶ ಮಧ್ಯಪ್ರದೇಶ ಮತ್ತು ಪಂಜಾಬ್ ನಿಂದ ವಿದ್ಯುತ್ ಕೊಂಡುಕೊಳ್ಳುವ ವ್ಯವಸ್ಥೆ ಮಾಡಿದ್ದೇವೆ. ಇನ್ನು ಜಲ ವಿದ್ಯುತ್, ಥರ್ಮಲ್ ವಿದ್ಯುತ್, ಪವನ ವಿದ್ಯುತ್ ಸ್ಥಾವರಗಳನ್ನ ಮತ್ತಷ್ಟು ಗಟ್ಟಿಗೊಳಿಸುವ ವ್ಯವಸ್ಥೆ ಮಾಡಲಾಗಿದೆ.**

ಉದ್ಪಾದನೆಯಾದಾಗ ಮತ್ತೆ ಅವರಿಗೆ ತೆಗೆದುಕೊಂಡ ವಿದ್ಯುತ್‌ಅನ್ನು ವಾಪಸ್ ಕೊಡುತ್ತೇವೆ. ಎಲ್‌ಇಡಿ ಬಲ್‌ಪಗಳು ಮತ್ತು ಹೊಸ ಟೆಕ್ನಾಲಜಿ ಫ್ಯಾನುಗಳನ್ನ ಗ್ರಾಹಕರಿಗೆ ತಲುಪುವಂತೆ ನೋಡಿಕೊಳ್ಳುತ್ತಿದ್ದೇವೆ. ರಾಜ್ಯಕ್ಕೆ ವಿದ್ಯುತ್ ಕೊರತೆ ಇಲ್ಲ ಎಂದು ಸ್ಪಷ್ಟೀಕರಣ ನೀಡಿದರು.

## ಬಿಎಂಟಿಸಿ ದುರಸ್ತಿ ಸಂಚಾರಿ ವಾಹನಗಳಿಗೆ ಸಚಿವ ಚಾಲನೆ

• ಉದಯವಾಹಿನಿ,ಬೆಂಗಳೂರು

ಪರಿಸರ ಸ್ನೇಹಿ, ವಾಯುಮಾಲಿನ್ಯವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಎಲೆಕ್ಟ್ರಿಕ್ ಬಸ್‌ಗಳು ಹೆಚ್ಚು ಕಾರ್ಯಾಚರಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಇಂದಿಲ್ಲಿ ತಿಳಿಸಿದ್ದಾರೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ರಸ್ತೆ ಅವಘಡದಲ್ಲಿ ತ್ವರಿತ ನಿವಾರಣೆಗಾಗಿ ಹೊಸದಾಗಿ ಖರೀದಿಸಿರುವ 5 ಸಂಚಾರಿ ದುರಸ್ತಿ ವಾಹನಗಳಿಗೆ ಚಾಲನೆ ನೀಡಿ ಮಾತನಾಡಿದರು. ಬಿಎಂಟಿಸಿ ಪ್ರಸ್ತುತ 6,835 ಬಸ್ಸುಗಳೊಂದಿಗೆ ಸರಾಸರಿ 5,875 ಅನುಸೂಚಿಗಳನ್ನು ಕಾರ್ಯಾಚರಣೆ ನಡೆಸುತ್ತಿವೆ. ಬಿಎಂಟಿಸಿ ಬಸ್‌ಗಳು ನಗರದ ಎಲ್ಲಾ ಪ್ರದೇಶ ಹಾಗೂ ಉಪನಗರಗಳಿಗೂ ಸಂಚರಿಸುತ್ತಿದ್ದು ಹೆಚ್ಚುವರಿ ಕಾರ್ಯಾಚರಣೆಗೆ ಒಳಪಡುತ್ತಿವೆ. ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೌಲಭ್ಯವನ್ನು ಒದಗಿಸಲು ನಗರದಲ್ಲಿ ವಾಯುಮಾಲಿನ್ಯ ತಗ್ಗಿಸುವ ನಿಟ್ಟಿನಲ್ಲಿ ಎಲೆಕ್ಟ್ರಿಕ್ ಬಸ್‌ಗಳನ್ನು ಕಾರ್ಯಾಚರಣೆ ಪ್ರಾರಂಭಿಸಿದ್ದು, ಪ್ರಸ್ತುತ 1336 ಎಲೆಕ್ಟ್ರಿಕ್ ಬಸ್‌ಗಳನ್ನು ಕಾರ್ಯಾಚರಣೆ ಮಾಡಲಾಗುತ್ತದೆ



ಉದಯವಾಹಿನಿ ಚಿತ್ರ

ಹಾಗೂ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಎಲೆಕ್ಟ್ರಿಕ್ ಬಸ್‌ಗಳನ್ನು ಸೇರ್ಪಡೆಗೊಳಿಸಲು ಯೋಚಿಸಲಾಗಿದೆ ಎಂದರು. ನಗರದಲ್ಲಿ ಸಂಚಾರದಟ್ಟಣೆ ಹೆಚ್ಚುತ್ತಿದ್ದು ರಸ್ತೆ ಮಧ್ಯದಲ್ಲಿ ಕೆಲ ಅವಘಡಗಳಿಂದ ಬಸ್ಸಿನ ಚಲನೆಯಲ್ಲಿ ಉಂಟಾಗುವ ಸಣ್ಣ ವಿಳಂಬ ವಾಹನಗಳು ಸಾಲುಗಟ್ಟಿ ನಿಲ್ಲಲು ಕಾರಣವಾಗುತ್ತವೆ. ಇದರಿಂದ ಸಂಚಾರದಟ್ಟಣೆ ಹೆಚ್ಚಾಗಿ ಅಡಚಣೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ವಲಯ, ಪ್ರಮುಖ ಟಿಟಿಎಂಸಿ, ಬಸ್ ನಿಲ್ದಾಣಗಳಿಗೆ ಕನಿಷ್ಠ 1 ಸಂಚಾರಿ ದುರಸ್ತಿ ವಾಹನ ಅಗತ್ಯವಿರುವುದಾಗಿ ನಿರ್ಧರಿಸಿ ನಗರದಲ್ಲಿ ಬಿಎಂಟಿಸಿ ಬಸ್‌ಗಳಿಂದ ಎದುರಾಗುವ ಅನನುಕೂಲವನ್ನು ತಡೆಗಟ್ಟಲು ಈ ದುರಸ್ಥಿ ವಾಹನಗಳನ್ನು ಬಳಸಲಾಗುತ್ತದೆ ಎಂದು ಹೇಳಿದರು.

# ಮುಸ್ಲಿಮರಿಗೆ 4% ಮೀಸಲಾತಿ ವಿವಾದ: ಜೆಡಿಎಸ್ ನಿಲುವು ಸ್ಪಷ್ಟಪಡಿಸಿದ ಎಚ್‌ಡಿಕೆ

### ಕಾಂಗ್ರೆಸ್ ಸರ್ಕಾರದಿಂದ ಅಲ್ಪಸಂಖ್ಯಾತರ ತುಷ್ಟೀಕರಣ ಎಂದು ಬಿಜೆಪಿ ಆರೋಪ

• ಉದಯವಾಹಿನಿ,ಬೆಂಗಳೂರು

ಮುಸಲ್ಮಾನರಿಗೆ ಸಾರ್ವಜನಿಕ ಗುತ್ತಿಗೆಗಳಲ್ಲಿ ಶೇ 4 ರಷ್ಟು ಮೀಸಲಾತಿ ನೀಡುವ ವಿಚಾರ ಚರ್ಚೆಯಾಗುತ್ತಿದೆ. ಕಾಂಗ್ರೆಸ್ ಸರ್ಕಾರದಿಂದ ಅಲ್ಪಸಂಖ್ಯಾತರ ತುಷ್ಟೀಕರಣ ಎಂದು ಬಿಜೆಪಿ ಆರೋಪ ಮಾಡುತ್ತಿದೆ. ಇದು ಸಂವಿಧಾನ ಬಾಹಿರ ಎಂದು ಹೇಳುತ್ತಿದೆ. ಸರ್ಕಾರದ ನಿಲುವಿನ ವಿರುದ್ಧ ಬಿಜೆಪಿ ಹೋರಾಟಕ್ಕಿಳಿದಿದೆ. ಇದರ ಬೆನ್ನಲ್ಲೇ ಈ ಹೋರಾಟದಲ್ಲಿ ಬಿಜೆಪಿ ಜೆಡಿಎಸ್ ನಡುವೆ ಮೈತ್ರಿ ಇಲ್ಲ. ಹೊಂದಾಣಿಕೆ ಇಲ್ಲ. ಮೈತ್ರಿ ನಾಯಕರ ನಡುವೆ ಗೊಂದಲ ಇದೆ ಎಂದು ವರದಿಯಾಗುತ್ತಿದೆ. ಈ ಬಗ್ಗೆ ಕೇಂದ್ರ ಸಚಿವ ಎಚ್ ಡಿ ಕುಮಾರಸ್ವಾಮಿ ಪ್ರತಿಕ್ರಿಯೆ ನೀಡಿದ್ದಾರೆ.

ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಾಕಿ ಸ್ಪಷ್ಟನೆ ನೀಡಿದ್ದಾರೆ. ಮುಸ್ಲಿಮರಿಗೆ ಸರಕಾರ 4% ಗುತ್ತಿಗೆ ಮೀಸಲಾತಿ ನೀಡಿರುವುದರ ವಿರುದ್ಧದ ಹೋರಾಟದಲ್ಲಿ ಜೆಡಿಎಸ್, ನಡುವೆ ಹೊಂದಾಣಿಕೆ ಇಲ್ಲ, ಗೊಂದಲವಿದೆ ಎನ್ನುವುದು ಸತ್ಯಕ್ಕೆ ದೂರ. ಕೆಲ ಪತ್ರಿಕೆ ಮತ್ತು ಸುದ್ದಿವಾಹಿನಿಗಳಲ್ಲಿ ವರದಿಯಾಗಿರುವ ವರದಿಗಳು ಸತ್ಯಕ್ಕೆ ದೂರ ಎಂದು ಆರಂಭದಲ್ಲೇ ಸ್ಪಷ್ಟನೆ ನೀಡಿದ್ದಾರೆ.



ಉದಯವಾಹಿನಿ ಚಿತ್ರ

**ಎಚ್‌ಡಿ ಕುಮಾರಸ್ವಾಮಿ ಪ್ರತಿಕ್ರಿಯೆ**

ಕಾಂಗ್ರೆಸ್ ಸರಕಾರವು ಕೇವಲ ಚುನಾವಣಾ ಸ್ವಾರ್ಥಕ್ಕೆ, ವೋಟ್ ಬ್ಯಾಂಕ್ ರಾಜಕೀಯಕ್ಕಾಗಿ ಸಾಮಾಜಿಕ ನ್ಯಾಯದ ಆದರ್ಶ ಪರಿಕಲ್ಪನೆಯಾದ ಮೀಸಲಾತಿ ವ್ಯವಸ್ಥೆಯನ್ನು ಹಾಳು ಮಾಡುತ್ತಿದೆ. ಮೀಸಲಾತಿಯನ್ನೇ ಓಲೈಕೆ ಅಸ್ತ್ರವನ್ನಾಗಿ ಮಾಡಿಕೊಂಡು ರಾಜ್ಯದ ಜನತೆಯ ದಿಕ್ಕು ತಪ್ಪಿಸುತ್ತಿದೆ. ರಾಷ್ಟ್ರದ ಉದ್ದಗಲಕ್ಕೂ ಕಾಂಗ್ರೆಸ್ ಮೀಸಲು ಅರಾಜಕತೆ ಸೃಷ್ಟಿಸುತ್ತಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

**ಸೋಮವಾರದಿಂದ ಹೋರಾಟ:** ಧರ್ಮ ಆಧಾರಿತ ಮೀಸಲು ನೀಡಲಾಗದು ಎಂದು ಸಂವಿಧಾನದಲ್ಲಿ ಸ್ಪಷ್ಟವಾಗಿದ್ದು, ಈ ಸಂಬಂಧ ಸುಪ್ರೀಂ ಕೋರ್ಟ್ ಸೇರಿದಂತೆ ನಾನಾ ನ್ಯಾಯಾಲಯಗಳು ತೀರ್ಪು ನೀಡಿವೆ.

ಅವೆಲ್ಲಾ ನಮ್ಮ ಅನುಭವಿ ಮುಖ್ಯಮಂತ್ರಿಗಳಿಗೆ ತಿಳಿದಿದೆ. ಸಂವಿಧಾನ ವಿರೋಧಿ ಎಂಬುದು ಗೊತ್ತಿದ್ದರೂ ಹಿಂದೂಗಳಿಗೆ ಅನ್ಯಾಯ ಮಾಡುವ, ಅವಮಾನಿಸುವ ನಿರ್ಧಾರ ಕೈಗೊಂಡಿರುವುದು ಅಕ್ಷಮ್ಯ ಅಪರಾಧ. ಸೋಮವಾರದಿಂದ ಜಿಲ್ಲೆಗಳಲ್ಲಿ ಬಿಜೆಪಿ ಮತ್ತು ಜೆಡಿಎಸ್ ಒಟ್ಟಿಗೆ ಹೋರಾಟ ನಡೆಸಲಿದೆ, ಎಂದು ಎಚ್ಚರಿಸಿದರು.

**ಜಿಲ್ಲೆಗಳಲ್ಲಿ ಜೆಡಿಎಸ್ ಜತೆಗೂಡಿ ಹೋರಾಟ: ಬಿಜೆಪಿ**

**ಎರಡು ಕೋಟಿ ರೂ.ವರೆಗಿನ ಸರಕಾರಿ ಕಾಮಗಾರಿಗಳಲ್ಲಿ ಮುಸ್ಲಿಮರಿಗೆ ಶೇ.4 ರಷ್ಟು ಮೀಸಲು ಕಲ್ಪಿಸುವ ರಾಜ್ಯ ಸರಕಾರದ ನಿರ್ಧಾರ ಅಸಾಂವಿಧಾನಿಕ ಎಂದು ಆರೋಪಿಸಿರುವ ಬಿಜೆಪಿಯು ಜಿಲ್ಲೆಗಳಲ್ಲಿ ಹೋರಾಟದ ಮೂಲಕ ವಿಧೇಯಕದ ವಿರುದ್ಧ ಜನ ಜಾಗೃತಿ ಮೂಡಿಸಲು ಸಜ್ಜಾಗಿದೆ. ಸಂವಿಧಾನದಲ್ಲಿ ಧರ್ಮ ಆಧರಿತ ಮೀಸಲಿಗೆ ಅವಕಾಶವಿಲ್ಲ. ಹಾಗಿದ್ದರೂ ಗುತ್ತಿಗೆಯಲ್ಲಿ ಮೀಸಲು, ವಿದೇಶಿ ವ್ಯಾಸಂಗಕ್ಕೆ ಹೋಗುವ ಮುಸ್ಲಿಂ ವಿದ್ಯಾರ್ಥಿಗಳಿಗೆ 20 ಲಕ್ಷ ರೂ. ಬದಲಿಗೆ 30 ಲಕ್ಷ ರೂ. ನೀಡುವುದು, ಮುಸ್ಲಿಂ ಹೆಣ್ಣು ಮಕ್ಕಳಿಗೆ ಆತ್ಮರಕ್ಷಣೆ ಕಲೆ ಸಂಬಂಧ ಬಜೆಟ್‌ನಲ್ಲಿ ಹಣ ಮೀಸಲಿಟ್ಟಿರುವುದು ಸರಿಯೇ ಹಿಂದೂಗಳಲ್ಲಿ ಬಡವರೇ ಇಲ್ಲವೇ ಹಿಂದೂ ಮಕ್ಕಳಿಗೆ ವಿದೇಶಿ ಉನ್ನತ ವ್ಯಾಸಂಗದ ಕನಸಿಲ್ಲವೇ, ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಶ್ನಿಸಿದರು.**

## ಯುವತಿಯ ಕುಟುಂಬಸ್ಥರಿಂದ ಯುವಕನ ಮೇಲೆ ಹಲ್ಲೆ, ಪ್ರಕರಣ ದಾಖಲು

• ಉದಯವಾಹಿನಿ,ಬೆಂಗಳೂರು

ಪ್ರೀತಿಗೆ ನೆರವು ನೀಡುತ್ತಿದ್ದ ಹಿನ್ನೆಲೆಯಲ್ಲಿ ಯುವತಿಯ ಕುಟುಂಬಸ್ಥರು ಯುವಕನ ಮೇಲೆ ಹಾಗೂ ಆತನ ರಕ್ಷಣೆಗೆ ಬಂದ ಸಹೋದರನ ಮೇಲೂ ಹಲ್ಲೆ ನಡೆಸಿರುವ ಘಟನೆಯೊಂದು ಹುಣಸೂರಿನಲ್ಲಿ ನಡೆದಿದೆ. ಬಿಳಿಕೆರೆ ಪೊಲೀಸ್ ಠಾಣೆ ವ್ಯಾಪ್ತಿಯ ಶ್ರವಣನಹಳ್ಳಿ ಗ್ರಾಮದ ನಿವಾಸಿ ಚೆಲವರಾಜು ಎಂಬುವವರ ಪುತ್ರಿ ಲಕ್ಷ್ಮೀ ಎಂಬಾಕೆ ಇದೇ ಗ್ರಾಮದ ಯುವಕನೊಬ್ಬನನ್ನು ಪ್ರೀತಿಸುತ್ತಿದ್ದಳು. ಇವರ ಪ್ರೀತಿಗೆ ಇದೇ ಗ್ರಾಮದ ನಿವಾಸಿ ಘನವಂತ್ ನೆರವು ನೀಡುತ್ತಿದ್ದು, ಈ ವಿಚಾರ ತಿಳಿದು ಯುವಕ ಹಾಗೂ ಆತನ ಸಹೋದರ ಮೇಲೆ

**ಪ್ರೀತಿಗೆ ನೆರವು**

ಯುವತಿಯ ಕುಟುಂಬಸ್ಥರು ಹಲ್ಲೆ ನಡೆಸಿದ್ದಾರೆಂದು ತಿಳಿದುಬಂದಿದೆ. ಹಿಂದೆಯೂ ಚೆಲುವರಾಜು ಅವರು ಯುವಕನ ಮೇಲೆ ಹಲ್ಲೆ ನಡೆಸಿದ್ದರು. ವೇಳೆ ಗ್ರಾಮದ ಮುಖಂಡರು ಸಭೆ ನಡೆಸಿ ರಾಜಿ ಸಂಧಾನ ಮಾಡಿಸಿದ್ದರು. ಕೆಲ ತಿಂಗಳುಗಳ ಹಿಂದಷ್ಟೇ ಚೆಲುವರಾಜು ಪುತ್ರಿಗೆ ದೂರದ ಸಂಬಂಧಿಯೊಂದಿಗೆ ಬಲವಂತವಾಗಿ ಮದುವೆ ಮಾಡಿಸಿದ್ದಾನೆ. ಆದರೂ ಯುವಕನ ಮೇಲಿನ ದ್ವೇಷ ಬಿಡದೆ ಎದುರಿಗೆ ಸಿಕ್ಕಾಗಲೆಲ್ಲಾ ಹಲ್ಲೆ ನಡೆಸಿದ್ದ ಎನ್ನಲಾಗಿದೆ. ಘನವಂತ್ ತನ್ನ ಬೈಕ್‌ನಲ್ಲಿ ಹೋಗುತ್ತಿದ್ದಾಗ, ಚೆಲುವರಾಜು ಮತ್ತು ಅವರ ಗುಂಪು ಮತ್ತೆ ಹಲ್ಲೆ ನಡೆಸಿದೆ ಎಂದು ಯುವಕ ಪೊಲೀಸರಿಗೆ ದೂರು ನೀಡಿದ್ದಾರೆ. ಆತನ ರಕ್ಷಣೆಗೆ ಧಾವಿಸಿದ್ದ ಅಣ್ಣ ಯಶವಂತ್ ಮೇಲೂ ಹಲ್ಲೆ ನಡೆಸಿದ್ದಾರೆ. ಇಬ್ಬರೂ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಂಡೆವು ಎಂದು ತಿಳಿಸಿದ್ದಾರೆ. ಘಟನೆ ಬಳಿಕ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಯುವಕ ದೂರು ದಾಖಲಿಸಿದ್ದಾನೆ.

# ಕಾರ್ಯನಿರ್ವಹಿಸುತಿಲ್ಲ ಘನ ತ್ಯಾಜ್ಯ ಘಟಕ

## ಕೆಲ ವಾರ್ಡ್ ನಿವಾಸಿಗಳಿಗೆ ಕೆಟ್ಟ ವಾಸನೆ ಬರುತ್ತಿದ್ದು ಪುರಸಭೆ ವಿರುದ್ಧ ಆಕ್ರೋಶ

• **ಉದಯ ವಾಹಿನಿ, ಮಾಗಡಿ**

ಪಟ್ಟಣದ ಘನ ತ್ಯಾಜ್ಯ ಘಟಕ ಸರಿಯಾಗಿ ಕಾರ್ಯನಿರ್ವಹಿಸದ ಕಾರಣ ಕಸಕ್ಕೆ ಬೆಂಕಿ ಹಚ್ಚುತ್ತಿದ್ದು, ಕೆಲ ವಾರ್ಡ್ ನಿವಾಸಿಗಳಿಗೆ ಕೆಟ್ಟ ವಾಸನೆ ಬರುತ್ತಿದ್ದು ಪುರಸಭೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಪಟ್ಟಣದ ತಿರುಮಲೆ ರಂಗನಾಥ ಸ್ವಾಮಿ ದೇವಾಲಯದ ಆವರಣದ ಪಕ್ಕದಲ್ಲಿ ಆರು ಎಕರೆ ವಿಸ್ತೀರ್ಣದಲ್ಲಿದೆ ಘನ ತ್ಯಾಜ್ಯ ಘಟಕ. ಇದು 2000ರಲ್ಲಿ ಉದ್ಘಾಟನೆಯಾಗಿದ್ದು, ಪುರಸಭೆ ವ್ಯಾಪ್ತಿಯ 23 ವಾರ್ಡ್‌ಗಳ ಕಸವನ್ನು ಇಲ್ಲಿ ಸುರಿಯಲಾಗುತ್ತಿದೆ. ಆದರೆ ಈ ಘಟಕಕ್ಕೆ ವಿದ್ಯುತ್ ಸಂಪರ್ಕವಿಲ್ಲದ ತ್ಯಾಜ್ಯ ಸಂಸ್ಕರಣೆ ಉಪಕರಣಗಳು ತುಕ್ಕು ಹಿಡಿದಿವೆ.

ಇದರಿಂದ 25 ವರ್ಷಗಳಿಂದ ತ್ಯಾಜ್ಯ ಘಟಕಕ್ಕೆ ಬರುವ ಕಸವನ್ನು ಪುರಸಭೆಯ ಪೌರ ಕಾರ್ಮಿಕ ಸಿಬ್ಬಂದಿ ಬೆಂಕಿ ಇಡುವ ಮೂಲಕ ಕಸದ ರಾಶಿಯ ಬೃಹತ್ ಪ್ರಮಾಣದಲ್ಲಿ ವಿಲೇವಾರಿಯಾಗದಂತೆ ನೋಡಿ ಕೊಳ್ಳುತ್ತಿದ್ದಾರೆ.

ಹೀಗೆ ಕಸಕ್ಕೆ ಬೆಂಕಿ ಹಚ್ಚಿದಾಗ ಮಾಗಡಿ ಪಟ್ಟಣ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳು ಹೊಗೆಯಿಂದ ಆವೃತ್ತವಾಗಿ ಜನರು ಕೆಟ್ಟ ವಾಸನೆ ಹಾಗೂ ಕ್ಯಾನ್ಸರ್ ಹರಡುವ ಭೀತಿಯಲ್ಲಿ ದಿನ ಕಳೆಯುವಂತಾಗಿದೆ. ಇಲ್ಲಿ ಆಗುತ್ತಿರುವ ವಾಯುಮಾಲಿನ್ಯವನ್ನು ತಪ್ಪಿಸಬೇಕೆಂದು 2024ರ ಮೇ ತಿಂಗಳಲ್ಲಿ ನಿಸರ್ಗ ಪರಿಸರ ಟ್ರಸ್ಟ್ ವತಿಯಿಂದ ಹೋರಾಟ ಮಾಡಲಾಗಿತ್ತು. ಅನಂತರ ಪೌರಕಾರ್ಮಿಕರು ಒಮ್ಮೆಗೆ ಕಸಕ್ಕೆ ಬೆಂಕಿ ಇಡದೆ ನಿಯಂತ್ರಿತವಾಗಿ ಬೆಂಕಿ ಹಚ್ಚುವ ಮೂಲಕ ಹೆಚ್ಚಿನ ಹೊಗೆ ಹೊರ ಹೊಮ್ಮದಂತೆ ನೋಡಿಕೊಳ್ಳುತ್ತಿದ್ದಾರೆ.

ಆದರೆ, ಇದರಿಂದ ವಾಯುಮಾಲಿನ್ಯ, ಜಲ



☛ ಉದಯವಾಹಿನಿ ಚಿತ್ರ

ಮಾಲಿನ್ಯ ಮತ್ತು ಮಣ್ಣಿನ ಮಾಲಿನ್ಯವಾಗುತ್ತಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜತೆಗೆ ಟ್ರಸ್ಟ್ ಘನ ತ್ಯಾಜ್ಯ ಘಟಕವನ್ನು ಜನವಸತಿ ಪ್ರದೇಶದಿಂದ ಸುಮಾರು 5 ಕಿ.ಮೀ ದೂರಕ್ಕೆ ಸ್ಥಳಾಂತರಿಸುವಂತೆ ಆಗ್ರಹಿಸಿ 2024ರ ಜುಲೈ ಅಲ್ಲಿ ಐದು ದಿನಗಳ ಕಾಲ ಉಪವಾಸ ಸತ್ಯಾಗ್ರಹ ಮಾಡಿದ್ದರು.

ಆ ವೇಳೆ ಮಾಗಡಿ ಪುರಸಭೆ ಅಧಿಕಾರಿಗಳು ಮತ್ತು ತಹಶೀಲ್ದಾರ್ ಆದಷ್ಟು ಬೇಗನೆ ಸೂಕ್ತ ಜಾಗ ಗುರುತಿಸಿ ಘನ ತ್ಯಾಜ್ಯ ಘಟಕ ಸ್ಥಳಾಂತರಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಆದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಈ ಘಟಕದ ಹೊಗೆ, ತ್ಯಾಜ್ಯವು ಕಣ್ವ ನದಿ ಜಲಮೂಲವನ್ನು ಕಲುಷಿತಗೊಳಿಸುತ್ತಿದೆ. ತ್ಯಾಜ್ಯ ಘಟಕದ ಸಮೀಪದಲ್ಲಿರುವ ಅನೇಕ ಮನೆಗಳ ಕುಟುಂಬಸ್ಥರು ಕ್ಯಾನ್ಸರ್ ಹಾಗೂ ಇತರ ಗಂಭೀರ ಕಾಯಿಲೆಗಳಿಂದ ನರಳುತ್ತಿದ್ದಾರೆ. ಹಾಗಾಗಿ ಘಟಕವನ್ನು ಸ್ಥಳಾಂತರಿಸಬೇಕು. ಇಲ್ಲದಿದ್ದರೆ ಹಸಿರು ನ್ಯಾಯಾಧೀಕರಣದ ಮೊರೆ ಹೋಗಬೇಕಾಗುತ್ತದೆ ಎಂದು ಸ್ಥಳೀಯರು ಎಚ್ಚರಿಕೆ ನೀಡಿದ್ದಾರೆ.

**ದಟ್ಟ ಹೊಗೆಯಿಂದ ಉಸಿರಾಟಕ್ಕೆ ಸಮಸ್ಯೆ**

> ಮಾಗಡಿ ಪಟ್ಟಣದ ತಿರುಮಲೆಯಲ್ಲಿರುವ ಘನ ತ್ಯಾಜ್ಯ ನಿರ್ವಹಣಾ ಘಟಕದಿಂದ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ ಎಂಬ ದೂರುಗಳಿದ್ದು ಇದನ್ನು ಸ್ಥಳಾಂತರಿಸಲು ಪುರಸಭೆ ಮುಖ್ಯಾಧಿಕಾರಿಗಳೊಂದಿಗೆ ಚರ್ಚಿಸಿದ್ದೇನೆ. ಸ್ಥಳ ಗುರುತಿಸಲಾಗುತ್ತಿದೆ ಸ್ಥಳ ನಿಗದಿಯಾದ ಕೂಡಲೇ ತ್ಯಾಜ್ಯ ಘಟಕ ಸ್ಥಳಾಂತರಿಸಲಾಗುವುದು.
> -ಎಚ್.ಸಿ.ಬಾಲಕೃಷ್ಣ ಶಾಸಕ ಮಾಗಡಿ

**ತಾಂತ್ರಿಕ ಸಮಸ್ಯೆಯಿಂದ ವಿಳಂಬ**

ಪುರಸಭೆ ವ್ಯಾಪ್ತಿಯ ತಿರುಮಲೆಯಲ್ಲಿರುವ ಘನತ್ಯಾಜ್ಯ ಘಟಕದಲ್ಲಿ ಕಿಡಿಗೇಡಿಗಳು ಆಗಾಗ ಬೆಂಕಿ ಹಚ್ಚುವುದರಿಂದ ಈ ಭಾಗದ ಪರಿಸರಕ್ಕೆ ಹಾನಿಯಾಗುತ್ತಿದೆ ಎಂಬ ದೂರುಗಳು ಬಂದಿವೆ. ಈ ಸಂಬಂಧ ಸುಮಾರು 3 ಕಿ.ಮೀ ದೂರಕ್ಕೆ ಸ್ಥಳಾಂತರಿಸಲು ಆಡಳಿತ ಮಂಡಳಿಯೊಂದಿಗೆ ಚರ್ಚಿಸಿದ್ದು ಸ್ಥಳ ಗುರುತಿಸಲಾಗಿತ್ತು. ಆದರೆ ಕೆಲವೊಂದು ತಾಂತ್ರಿಕ ಸಮಸ್ಯೆಯಿಂದ ವಿಳಂಬವಾಗಿದೆ. ಶೀಘ್ರದಲ್ಲಿಯೇ ಸ್ಥಳ ಗುರುತಿಸಲು ಶಾಸಕರು ಸೂಚನೆ ನೀಡಿದ್ದಾರೆ. ಅಗತ್ಯ ಕ್ರಮ ಕೈಗೊಳ್ಳಲಾಗುವುದು.

# ನಡೆಯದ ಮೌಲ್ಯಯುತ ಚರ್ಚೆಗಳು: ಡಾ.ಎಚ್.ಸಿ.ಎಂ ವಿಷಾಧ

• **ಉದಯ ವಾಹಿನಿ, ಮೈಸೂರು**

ಪಾರ್ಲಿಮೆಂಟ್ ಹಾಗೂ ಶಾಸನ ಸಭೆಯಲ್ಲಿ ಅನುಭವಮಂಟಪದಂತೆ ಮೌಲ್ಯಯುತವಾದ ಚರ್ಚೆಗಳು ನಡೆಯುತ್ತಿಲ್ಲ ಎಂದು ಜಿಲ್ಲಾಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ವಿಷಾಧ ವ್ಯಕ್ತಪಡಿಸಿದರು.

ನಗರದ ಕಲಾಮಂದಿರದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ಜಿಲ್ಲಾ ಹಾಗೂ ನಗರ ಘಟಕದ ಸಹಯೋಗದೊಂದಿಗೆ ಭಾನುವಾರ ನಡೆದ ಶರಣ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದ ಪಾರ್ಲಿಮೆಂಟ್ ಹಾಗೂ ರಾಜ್ಯದ ಶಾಸನ ಸಭೆಯನ್ನು 12ನೇ ಶತಮಾನದ ಅನುಭವ ಮಂಟಪಕ್ಕೆ ಹೋಲಿಕೆ ಮಾಡುತ್ತಾರೆ ಎಂದರು.

ಅನುಭವ ಮಂಟಪದ ಪ್ರೇರಣೆಯಿಂದಲೇ ಶಾಸನ ಸ'ಗಳು ರೂಪುಗೊಂಡಿವೆ ಎನ್ನುತ್ತಾರೆ. ಆದರೆ ಈಗ ಅಂತಹ ಚರ್ಚೆಗಳು ಆಗುತ್ತಿಲ್ಲ. ಬಸವಣ್ಣ, ಚನ್ನಬಸವಣ್ಣ, ಅಕ್ಕಮಹಾದೇವಿ, ಅಲ್ಲಮನಂತಹವರು ಈಗ ಯಾರು ಇಲ್ಲ. ಹಿಂದಿನ ದಶಕಗಳಲ್ಲಿ ಅಂತಹ ರಾಜಕಾರಣಿಗಳು, ರಾಜಕೀಯ ನಾಯಕರು ಇದ್ದರು,ಆದರೆ ಈಗ ಅಂತಹವರನ್ನು ಕಾಣುತ್ತಿಲ್ಲ. ಮೌಲ್ಯ ಕುಸಿಯುತ್ತಿದೆ. ಸಾಂಸ್ಕೃತಿಕ ದಿವಾಳಿತನವನ್ನು ಕಾಣುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಒ.ಎಲ್.ನಾಗಭೂಷಣ ಸ್ವಾಮಿ ಮಾತನಾಡಿ, ಅಶರಣ ಸಾಹಿತ್ಯದ ಆಳ, ಅಗಲ ಹಾಗೂ ಅದರ ಪ್ರಾಮುಖ್ಯತೆ ನಮಗೆ ಇನ್ನೂ ಅರ್ಥವಾಗಿಲ್ಲ. ಶರಣ ಸಾಹಿತ್ಯದ ಕುರಿತು ಹೆಮ್ಮೆ ಪಡುವ ನಾವು ಶರಣ



ಸಾಹಿತ್ಯದಲ್ಲಿ ಶರಣರು ಹೇಳಿರುವ ಮಾತುಗಳನ್ನು ನಮ್ಮ ಜೀವನದಲ್ಲಿ ಅನ್ವಯಿಸಿಕೊಳ್ಳುವ ಕಡೆಗೆ ನಮ್ಮ ಗಮನ ಹರಿಯುತ್ತಿಲ್ಲ ಎಂದು ವಿಷಾಧ ವ್ಯಕ್ತಪಡಿಸಿದರು. ವಚನ ಸಾಹಿತ್ಯ ಅಥವಾ ಶರಣ ಸಾಹಿತ್ಯ ಯಾವ ಪ್ರಶ್ನೆಗಳನ್ನು ಮಾಡುತ್ತಿವೆ ಎಂಬ ಸ್ಪಷ್ಟವಾದ ಅರಿವೂ ಸಹ ನಮ್ಮ ಜನರಿಗೆ ಇಲ್ಲ. ಇಂಗ್ಲೀಷಿನ ಪ್ರಭಾವ ಇಲ್ಲದ, ಅನ್ಯ ಮತೀಯರ ದಾಳಿಯೂ ನಡೆಯದ ಹಾಗೂ ತಂತ್ರಜ್ಞಾನದ ಆರಂಭದ ಸ್ಥಿತಿಯ ಕಾಲದಲ್ಲಿ ಇದ್ದಂತಹ ಜ್ಞಾನ ಹಾಗೂ ಚಿಂತನೆಯನ್ನು ಒಳಗೊಂಡು ಬದುಕಿಗೆ ಬೇಕಾದ ಸಂಗತಿಗಳನ್ನು ಯಾವ ರೀತಿಯಲ್ಲಿ ಶರಣರು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದರು. ಶರಣ ಸಾಹಿತ್ಯ ನಮಗೆ ದೊರೆತಿರುವ ಅಮೂಲ್ಯವಾದ ಸಂಪತ್ತು. ಆದರೆ ಮಕ್ಕಳು ಸಂಪತ್ತಿನ ಬೆಲೆ ಅರಿಯದೇ ಸಂಪತ್ತಿನೊಂದಿಗೆ ಆಟವಾಡುವ ಹಾಗೆ ಶರಣ ಸಾಹಿತ್ಯದ ಜತೆಗೆ ಮಕ್ಕಳ ರೀತಿಯಲ್ಲೇ ನಾವೂ ಸಹ ನಡೆದುಕೊಳ್ಳುತ್ತಿರುವುದು ಬೇಸರದ ಸಂಗತಿ ಎಂದು ಹೇಳಿದರು.ಕನ್ನಡಕ್ಕೆ ಸುಮಾರು ಎರಡು ಸಾವಿರ ವರ್ಷದ ಇತಿಹಾಸವಿದ್ದರೂ ಸಹ ದೊಡ್ಡ ಕ್ರಾಂತಿ ಸಂ'ವಿಸಿದ್ದು 12ನೇ ಶತಮಾನದಲ್ಲಿ. ಶರಣರು ಆಡು ಮಾತಿನಲ್ಲಿ ಬದುಕಿದ ರೀತಿಯಲ್ಲಿ ದೊಡ್ಡ ಬದಲಾವಣೆ ತಂದು ಕನ್ನಡ ಭಾಷೆಯನ್ನು ಬದಲಿಸಿದರು.

# ಮಿನಿ ನ್ಯೂಸ್

## ತಾಲ್ಲೂಕು ಕಚೇರಿಗೆ ಬೀಗ ಜಡಿದು ಪ್ರತಿಭಟನೆ

• **ಉದಯ ವಾಹಿನಿ, ಹಾರೋಹಳ್ಳಿ**

ಇಲ್ಲಿನ ತಹಶೀಲ್ದಾರ್ ಶಿವಕುಮಾರ್ ಆರ್.ಸಿ ಅವರನ್ನು ಕರ್ತವ್ಯಲೋಪದ ಆಧಾರದ ಮೇಲೆ ಅಮಾನತು ಮಾಡಿರುವುದನ್ನು ಖಂಡಿಸಿ, ವಿವಿಧ ಸಂಘಟನೆಗಳ ಕಾರ್ಯಕರ್ತರು ಸೋಮವಾರ ಬೆಳಿಗ್ಗೆ ತಾಲ್ಲೂಕು ಕಚೇರಿಗೆ ಬೀಗ ಜಡಿದು ಪ್ರತಿಭಟನೆ ನಡೆಸಿದರು. ಬಾಯಿಗೆ ಕಪ್ಪು ಬಟ್ಟೆ ಧರಿಸಿ, ಪ್ರತಿಭಟನಾ ಫಲಕಗಳನ್ನು ಹಿಡಿದಿದ್ದ ಪ್ರತಿಭಟನಾಕಾರರು, ಜಿಲ್ಲಾಧಿಕಾರಿ ಮತ್ತು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ತಾಲ್ಲೂಕಿಗೆ ಪ್ರಾಮಾಣಿಕ ಅಧಿಕಾರಿ ಬೇಕೇ ಬೇಕು ಎಂದು ಘೋಷಣೆ ಹಾಕಿ, ಶಿವಕುಮಾರ್ ಅಮಾನತು ಆದೇಶ ಹಿಂಪಡೆಯುವವರೆಗೆ ಸ್ಥಳದಿಂದ ಕದಲುವುದಿಲ್ಲ ಎಂದು ಪಟ್ಟು ಹಿಡಿದರು.ಇದೇ ವೇಳೆ ಕಚೇರಿಗೆ ಬಂದ ಪ್ರಭಾರ ತಹಶೀಲ್ದಾರ್ ಅವರನ್ನು ಸಹ ಪ್ರತಿಭಟನಾಕಾರರು ಒಳಕ್ಕೆ ಬಿಡಲಿಲ್ಲ. ಈ ವೇಳೆ ಅಧಿಕಾರಿ ಮತ್ತು ಪ್ರತಿಭಟನಾನಿರತರ ಮಧ್ಯೆ ವಾಗ್ವಾದ ನಡೆಯಿತು. ವಿಷಯ ತಿಳಿದು ಸ್ಥಳಕ್ಕೆ ಬಂದ ಪೊಲೀಸರು ಎಲ್ಲಾರನ್ನೂ ಸಮಾಧಾನಪಡಿಸಿದರು. ಶಾಂತ ರೀತಿಯಲ್ಲಿ ಪ್ರತಿಭಟನೆ ನಡೆಸುವಂತೆ ಸೂಚನೆ ನೀಡಿದರು. ರೈತಪರ, ದಲಿತಪರ ಹಾಗೂ ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಇದ್ದರು.

## ಗೂಗಲ್‌ನಲ್ಲಿ ಗ್ರಾಮಗಳ ಹೆಸರು ಸರಿಪಡಿಸಲು ಯೋಜನೆ

• **ಉದಯ ವಾಹಿನಿ, ಚಿಕ್ಕಬಳ್ಳಾಪುರ**

ಗೂಗಲ್‌ನಲ್ಲಿ ತಪ್ಪಾಗಿ ಬಳಕೆಯಾಗುತ್ತಿರುವ ಕರ್ನಾಟಕದ ಗ್ರಾಮಗಳ ಹೆಸರು ಸರಿಪಡಿಸಲು ಯೋಜನೆ ರೂಪಿಸಲಾಗುವುದು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ತಿಳಿಸಿದ್ದಾರೆ. ಗೂಗಲ್‌ನಲ್ಲಿ ಗ್ರಾಮಗಳ ಹೆಸರು ತಪ್ಪಾಗಿ ಉಚ್ಚಾರಣೆಯಾಗುತ್ತಿವೆ. ಹೆದ್ದಾರಿ ನಾಮಫಲಕಗಳಲ್ಲೂ ಗ್ರಾಮಗಳ ಹೆಸರನ್ನು ತಪ್ಪಾಗಿ ಬರೆಯಲಾಗುತ್ತಿದೆ. ಅದನ್ನು ತಪ್ಪಿಸಲು ಕಂದಾಯ ಇಲಾಖೆ ರಾಜ್ಯದ 72 ಸಾವಿರಕ್ಕೂ ಹೆಚ್ಚು ಗ್ರಾಮಗಳ ಹೆಸರು ಸಂಗ್ರಹಿಸಿ, ಧ್ವನಿ ಮುದ್ರಣ ಸಹ ಮಾಡಿದೆ. ಧ್ವನಿ ಮುದ್ರಣದಲ್ಲಿ ಗ್ರಾಮಗಳ ಸ್ಪಷ್ಟ ಉಚ್ಚಾರಣೆ ಇದೆ ಎಂದು ಅವರು ತಿಳಿಸಿದರು. ನಗರದಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗ ಮಾರ್ಗಗಳನ್ನು ತಿಳಿಯಲು ಬಹಳಷ್ಟು ಮಂದಿ ಗೂಗಲ್ ಮ್ಯಾಪ್ ಬಳಸುತ್ತಾರೆ. ಈ ಎಲ್ಲಾ ಕಾರಣಗಳಿಂದ ತಪ್ಪಾಗಿರುವ ಗ್ರಾಮಗಳ ಹೆಸರು ಸರಿಪಡಿಸಲಾಗುವುದು ಎಂದರು.

ಇದು ದೊಡ್ಡ ಕೆಲಸ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಗೂಗಲ್ ಮತ್ತು ಕಂದಾಯ ಇಲಾಖೆ ಸಹಯೋಗದಲ್ಲಿ ತಪ್ಪುಗಳನ್ನು ಸರಿಪಡಿಸಲು ಯೋಜನೆ ರೂಪಿಸುತ್ತದೆ ಎಂದು ಬಿಳಿಮಲೆ ತಿಳಿಸಿದರು. ಹೆದ್ದಾರಿಗಳಲ್ಲಿ ನಾಮಫಲಕ ಹಾಕುವ ಗುತ್ತಿಗೆ ಪಡೆಯುವವರು ತೆಲುಗು ಮತ್ತು ತಮಿಳು ಭಾಷಿಕರಾಗಿರುತ್ತಾರೆ. ಕಂಪ್ಯೂಟರ್‌ನಲ್ಲಿ ಆ ಊರಿನ ಹೆಸರು ಪಡೆದು ಫಲಕಕ್ಕೆ ಹಾಕುವನಿಗೆ ಅದು ಚಿತ್ರ ಮಾತ್ರವಾಗಿ ಕಾಣುತ್ತದೆ ಅಷ್ಟೇ ಎಂದರು.

## ಮಹಿಳೆ ಕೊಲೆ: ಇಬ್ಬರು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ

• **ಉದಯ ವಾಹಿನಿ, ಮಧುಗಿರಿ**

ಬಂಗಾರದ ಒಡವೆ ಆಸೆಗಾಗಿ ಮಹಿಳೆಯನ್ನು ಕೊಲೆ ಮಾಡಿದ್ದ ಇಬ್ಬರು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ, ತಲಾ ರೂ. 60 ಸಾವಿರ ದಂಡ ವಿಧಿಸಿ ಸೋಮವಾರ 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ನ್ಯಾಯಾಧೀಶ ಯಾದವ ಕರಕೇರ ತೀರ್ಪು ನೀಡಿದೆ. 2019ರ ಜೂನ್ 6 ರಂದು ಕೊರಟಗೆರೆ ತಾಲ್ಲೂಕಿನ ತುಂಬಾಡಿ ಗ್ರಾಮದ ಮೂಡಲ ಗಿರಿಯಪ್ಪ ಎಂಬವರ ಪತ್ನಿ ಗಿರಿಜಮ್ಮ ಎಂಬವರ ಮೈಮೇಲಿದ್ದ ಒಡವೆ ಆಸೆಗಾಗಿ ಶಿವಕುಮಾರ್ ಮತ್ತು ಮಂಜುನಾಥ್ ಸೇರಿಕೊಂಡು ಮಹಿಳೆಯನ್ನು ಕಾರಿನಲ್ಲಿ ಕರೆದುಕೊಂಡು ಮಾಯಗೊಂಡನಹಳ್ಳಿ ಗ್ರಾಮದ ಸಮೀಪದ ನಿರ್ಜನ ಪ್ರದೇಶದಲ್ಲಿ ಹಗ್ಗದಿಂದ ಮಹಿಳೆಯ ಕುತ್ತಿಗೆ ಬಿಗಿದು ಕೊಲೆ ಮಾಡಿದ್ದಾರೆ. ರಂಟವಳಲು ಗ್ರಾಮದ ಪೆಟ್ಟಿಗೆ ಅಂಗಡಿಯಲ್ಲಿ ಡೀಸೆಲ್ ಖರೀದಿಸಿ ಮೃತದೇಹವನ್ನು ಪುಲಮಘಟ್ಟ ಗ್ರಾಮದ ರಸ್ತೆ ಬಳಿ ಬೆಂಕಿ ಹಚ್ಚಿದ್ದಾರೆ. ಬಂಗಾರದ ಒಡವೆ ದೋಚಿದ್ದರು. ಬಡವನಹಳ್ಳಿ ಪೊಲೀಸ್ ಇನ್ಸ್ಪೆಕ್ಟರ್ ಕೆ.ಪ್ರಭಾಕರ್ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಸರ್ಕಾರದ ಪರ ಬಿ.ಎಂ.ನಿರಂಜನಮೂರ್ತಿ ವಾದ ಮಂಡಿಸಿದ್ದರು.

# ರೈತ ಮುಖಂಡ ಜಗಜಿತ್ ಸಿಂಗ್ ದಲ್ಲೈವಾಲಾ ಬಂಧನ ಖಂಡಿಸಿ ಮೊಂಬತ್ತಿ ಮೆರವಣಿಗೆ

• **ಉದಯ ವಾಹಿನಿ, ಚಾಮರಾಜನಗರ,**

ಪಂಜಾಬಿನ ಕನೋರಿ ಹಾಗೂ ಶಂಭು ಬಾರ್ಡರ್‌ನಲ್ಲಿ ಕಳೆದ ಒಂದು ವರ್ಷದಿಂದ ದೇಶದ ರೈತರಿಗಾಗಿ ಎಂಎಸ್‌ಪಿ ಖಾತ್ರಿ ಕಾನೂನು ಜಾರಿ ಮಾಡುವಂತೆ ಒತ್ತಾಯಿಸಿ ಹೋರಾಟ ನಡೆಸುತ್ತಿದ್ದ ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಸಂಘಟನೆಯ ರಾಷ್ಟ್ರೀಯ ರೈತ ಮುಖಂಡ ಜಗಜಿತ್ ಸಿಂಗ್ ದಲ್ಲೈವಾಲಾ ಹಾಗೂ ನೂರಾರು ರೈತ ಮುಖಂಡರ ಬಂಧನ ಖಂಡಿಸಿ ರೈತ ಸಂಘಟನೆಗಳು ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘ ಜಿಲ್ಲಾ ಘಟಕದ ವತಿಯಿಂದ ನಗರದಲ್ಲಿ ಮೊಂಬತ್ತಿ ಮೆರವಣಿಗೆ ನಡೆಸಿದರು.

ನಗರದ ಚಾಮರಾಜೇಶ್ವರಿ ಉದ್ಯಾನದಿಂದ ಮೊಂ ಬತ್ತಿ ಹಿಡಿದು ಹೊರಟು ಭುವನೇಶ್ವರಿ ವೃತ್ತದಲ್ಲಿ ತೆರಳಿ ರಾಷ್ಟ್ರೀಯ ಹೆದ್ದಾರಿ ತಡೆದು ಸರ್ಕಾರಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.




☛ ಉದಯವಾಹಿನಿ ಚಿತ್ರ

**ಸರ್ಕಾರಗಳ ವಿರುದ್ಧ ಘೋಷಣೆ**

ಪ್ರತಿಭಟನೆ ನೇತೃತ್ವ ವಹಿಸಿದ್ದ ಜಿಲ್ಲಾ ಕಾರ್ಯದರ್ಶಿ ಮೂಕಳ್ಳಿ ಮಹದೇವಸ್ವಾಮಿ ಮಾತನಾಡಿ, ಪಂಜಾಬಿನ ಕನೋರಿ ಹಾಗೂ ಶಂಭು ಬಾರ್ಡರ್‌ನಲ್ಲಿ ಕಳೆದ ಒಂದು ವರ್ಷದಿಂದ ನ್ಯಾಯಯುತ ಹಕ್ಕುಗಳಾದ ಎಂಎಸ್‌ಪಿ ಕಾಯ್ದೆ ಗ್ಯಾರಂಟಿ ಕಾನೂನು ಜಾರಿ, ದೇಶದ ರೈತರ ಸಂಪೂರ್ಣ ಸಾಲ ಮನ್ನಾ, 60 ವರ್ಷ ತುಂಬಿದ ರೈತರಿಗೆ ಪೆನ್ಷನ್ (ಮಾಸಾಶನ) ಎಂಬಿತ್ಯಾದಿ ಜಾರಿ ಮಾಡುವಂತೆ ಒತ್ತಾಯಿಸಿ ಚಳುವಳಿ ನಡೆಸುತ್ತಿದ್ದ ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಸಂಘಟನೆಯ ರಾಷ್ಟ್ರೀಯ ರೈತ ಮುಖಂಡ ಜಗಜಿತ್ ಸಿಂಗ್ ದಲ್ಲೈವಾಲ ಹಾಗೂ ನೂರಾರು ರೈತ ಮುಖಂಡರನ್ನು ಬಂಧಿಸಿ ಚಳುವಳಿಯನ್ನು ವಿಫಲಗೊಳಿಸಲು ಯತ್ನಿಸುತ್ತಿರುವ ಪಂಜಾಬ್, ಕೇಂದ್ರ ಸರ್ಕಾರದ ಧೋರಣೆಯನ್ನು ತೀವ್ರವಾಗಿ ಖಂಡಿಸಿದರು.

ಕೂಡಲೇ ಬಂಧನ ಮಾಡಿರುವ ರೈತರ ಬಿಡುಗಡೆ ಮಾಡಬೇಕು ಹೋರಾಟ ಮಾಡುತ್ತಿರುವ ರೈತರ ಸಮಸ್ಯೆಗಳನ್ನು ಬಗೆಹರಿಸಬೇಕು. ಕೇಂದ್ರ ಸರ್ಕಾರ ಹಾಗೂ ಪಂಜಾಬ್ ಸರ್ಕಾರಗಳು ದಬ್ಬಾಳಿಕೆ, ದೌರ್ಜನ್ಯ ನೀತಿ ಅನುಸರಿಸುತ್ತಿರುವುದನ್ನು ಖಂಡಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಘಟಕದ ವತಿಯಿಂದ ಮೊಂಬತ್ತಿ ಹಚ್ಚಿ ಪ್ರತಿಭಟನೆ ನಡೆಸಿ ಕೇಂದ್ರ ಹಾಗೂ ಪಂಜಾಬ್ ಸರ್ಕಾರಕ್ಕೆ ಎಚ್ಚರಿಸುತ್ತಾ ಕಡೆಗಣಿಸಿದರೆ ದಕ್ಷಿಣ ಭಾರತದ ರೈತ ಸಂಘಟನೆಗಳು ಪಂಜಾಬ್-ಹರಿಯಾಣದ ರೈತರ ಜೊತೆಗೂಡಿ ಪಂಜಾಬ್ ಸರ್ಕಾರದ ವಿರುದ್ಧ ದೆಹಲಿಯಲ್ಲಿ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

# ಮಳೆ ಗಾಳಿಗೆ ಮುರಿದು ಬಿದ್ದ ಮರಗಳು

• **ಉದಯ ವಾಹಿನಿ, ಗುಬ್ಬಿ**

ರಾತ್ರಿಯ ಮಳೆ ಗಾಳಿಯಿಂದಾಗಿ ತಾಲ್ಲೂಕಿನ ವಿವಿಧೆಡೆ ಮರ, ತೆಂಗು, ಅಡಿಕೆ ಮರಗಳು ಮುರಿದುಬಿದ್ದಿವೆ. ಅಡಿಕೆ ಮರಗಳು ಹೊಂಬಾಳೆಯ ಹೊರಡುವ ಈ ಸಮಯದಲ್ಲಿಯೇ ಮುರಿದು ಬಿದ್ದಿವೆ. ಹೆಚ್ಚು ಎಳನೀರು ಹಾಗೂ ಕಾಯಿ ಬಿಡುವ ತೆಂಗಿನ ಮರಗಳೇ ಮುರಿದು ಬಿದ್ದಿರುವುದರಿಂದ ರೈತರು ಸಂಕಷ್ಟ ಎದುರಿಸುವಂತಾಗಿದೆ. ಸಿಎಸ್ ಪುರದ ಸಮೀಪ ಮುಖ್ಯ ರಸ್ತೆಗೆ ಬೃಹತ್ ಗಾತ್ರದ ಅರಳಿಮರ ಬಿದ್ದಿದ್ದರಿಂದ ಸಂಚಾರಕ್ಕೆ ತೊಂದರೆಯಾಯಿತು.

ಹಲವೆಡೆ ವಿದ್ಯುತ್ ತಂತಿಗಳ ಮೇಲೆಯೇ ಮರಗಳು ಬಿದ್ದಿದ್ದರಿಂದ ತಂತಿ ಹಾಗೂ ವಿದ್ಯುತ್ ಕಂಬ ತುಂಡಾಗಿ ವಿದ್ಯುತ್ ಸರಬರಾಜು ಸ್ಥಗಿತಗೊಂಡಿತ್ತು. ಅಧಿಕಾರಿಗಳು ತುರ್ತು ಕ್ರಮ ಕೈಗೊಂಡು ಮರ ತೆರವುಗೊಳಿಸುವ ಮೂಲಕ ಸಂಜೆ ವೇಳೆಗೆ ವಿದ್ಯುತ್ ಸರಬರಾಜು ಮಾಡಲು ಕ್ರಮ ಕೈಗೊಂಡರು.

ಸಿಎಸ್ ಪುರ ಹೋಬಳಿ ಹಿಂಡಿಸೆಗೆರೆ ಗ್ರಾಮದಲ್ಲಿ ವಾಸದ ಮನೆಯ ಮೇಲೆ ತೆಂಗಿನ ಮರ ಉರುಳಿ



☛ ಉದಯವಾಹಿನಿ ಚಿತ್ರ

ಬಿದ್ದಿದ್ದರಿಂದ ಮನೆಯ ಹೆಂಚುಗಳು ಪುಡಿಯಾಯಿತು. ಕಂದಾಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸರ್ಕಾರದ ನಿಯಮಾನುಸಾರ ಒಂದು ಎಕರೆಯಲ್ಲಿ ಶೇ 33ರಷ್ಟು ತೆಂಗು ಮತ್ತು ಅಡಿಕೆ ಮರಗಳು ಬಿದ್ದರೆ ಮಾತ್ರ ಪರಿಹಾರ ಪಡೆಯಲು ಸಾಧ್ಯವಿದೆ. ಇದು ಅವೈಜ್ಞಾನಿಕವಾಗಿದ್ದು, ರೈತರನ್ನು ಸಂಕಷ್ಟಕ್ಕೆ ಈಡು ಮಾಡುತ್ತದೆ. ಸರ್ಕಾರವು ನಿಯಮಾವಳಿ ಸಡಿಲಿಸಿ ಪರಿಹಾರ ನೀಡಲು ಮುಂದಾಗಬೇಕು ಎಂದು ರೈತರು ಅಳಲು ತೋಡಿಕೊಂಡರು.

# ಇತಿಹಾಸದಲ್ಲಿಯೇ ಹೊಸ ಮನ್ವಂತರಕ್ಕೆ ಕಾರಣರಾದವರು ಬಸವಣ್ಣನವರು

• **ಉದಯ ವಾಹಿನಿ, ಚಾಮರಾಜನಗರ,**

ಧಾರ್ಮಿಕ ಇತಿಹಾಸದಲ್ಲಿಯೇ ಹೊಸ ಮನ್ವಂತರಕ್ಕೆ ಕಾರಣರಾದವರು ಬಸವಣ್ಣನವರು ಎಂದು ಸುತ್ತೂರು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮಿಗಳು ಹೇಳಿದರು.

ತಾಲ್ಲೂಕಿನ ಕಾಗಲವಾಡಿ ಗ್ರಾಮದ ಶ್ರೀ ಬಸವನ ಗುಡಿಯ ಸಂಪ್ರೋಕ್ಷಣ, ನೂತನ ಗೋಪುರದ ಕಳಸಾ ರೋಹಣದ ಧಾರ್ಮಿಕ ಸಭೆಯ ದಿವ್ಯಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ತಮ್ಮ ಮನೆಯಲ್ಲಿ ಇದ್ದ ಕರ್ಮಠತನ ಮತ್ತು ಅಸಮಾನತೆ ವಿರುದ್ಧ ಧ್ವನಿ ಎತ್ತಿ ಮನೆಯಿಂದ ಹೊರನಡೆದು ಕ್ರಾಂತಿಕಾರಕ ಬದಲಾವಣೆಗಳನ್ನು ತಂದರು. ಕಲ್ಯಾಣದಲ್ಲಿ ಅನುಭವ ಮಂಟಪ ಸ್ಥಾಪಿಸಿ ಅಲ್ಲಮಪ್ರಭುಗಳನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿ ಎಲ್ಲಾರಿಗೂ ಅವಕಾಶ ನೀಡಿದುದರ ಫಲವಾಗಿ ಅವರು ಜಗಜ್ಯೋತಿ ಆದರು ಎಂದರು.

ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ಡಾ. ವಚನ ಕುಮಾರಸ್ವಾಮಿ ಉಪನ್ಯಾಸ ನೀಡಿ, ಮನದ ಮೈಲಿಗೆಯನ್ನು ತೊಳೆದುಕೊಳ್ಳಲು ಶರಣರ ವಚನಗಳು



☛ ಉದಯವಾಹಿನಿ ಚಿತ್ರ

ಸಹಕಾರಿಯಾಗಿದ್ದು, ಜೀವಿತದ ಅವಧಿಯಲ್ಲಿಯೇ ನಾವು ಕಳೆಯುವ ಸಂತಸದ ಕ್ಷಣಗಳೇ ಸ್ವರ್ಗ, ದುಃಖದ ಸಂದರ್ಭಗಳೇ ನರಕ. ಲೇಸೆನಿಸಿಕೊಂಡು ಎಷ್ಟು ವರ್ಷ ಬದುಕುತ್ತೇವೆಯೋ ಅದೇ ಮನುಷ್ಯನ ನಿಜವಾದ ವಯಸ್ಸು ಎಂಬುದನ್ನು ಅನೇಕ ದೃಷ್ಟಾಂತಗಳ ಮೂಲಕ ಮನದಟ್ಟು ಮಾಡಿಸಿದರು. ಜಗತ್ತು ಎಂಬುದು ದೇವನ ಜಾತ್ರೆಯಾಗಿದ್ದು, ದೇವರು ನಮಗೆ ಇಲ್ಲಿ ಆಮಂತ್ರಣವನ್ನು ನೀಡಿದ್ದು, ನಾವು ಅತಿಥಿಯಾಗಿ ಬಂದು ಅತಿಥಿಯಾಗಿ ಹೋದಾಗ ಮಾತ್ರ ನಮ್ಮ ಜೀವಕ್ಕೆ ಬೆಲೆ ಬರುತ್ತದೆ ಎಂದರು. ಯಾರ ಹೃದಯದಲ್ಲಿ ಪ್ರೇಮ ತುಂಬಿದೆಯೋ, ಯಾರ ಸನಿಹ ಬಂದಾಗ ಪ್ರೇಮದ ತರಂಗಗಳು ಏಳುತ್ತವೆಯೋ ಅವರೇ ಸದ್ಗುರು.

ಅಂತಹ ಸದ್ಗುರುಗಳ ದರ್ಶನವನ್ನು ಸಾವಿರಾರು ಮಂದಿಗೆ ಮಾಡಿಸಿದಂತಹ ಕಾಗಲವಾಡಿ ಗ್ರಾಮಸ್ಥರ ಆದರ್ಶ ಇತರ ಗ್ರಾಮಗಳಿಗೆ ಅನುಕರಣೀಯ ಎಂದರು.

> ತುಮಕೂರು ಶ್ರೀ ಸಿದ್ಧಗಂಗಾ ಮಠದ ಕಿರಿಯ ಶ್ರೀಗಳಾದ ಶ್ರೀ ಶಿವಸಿದ್ದೇಶ್ವರಮಹಾಸ್ವಾಮಿಗಳು ಮಾತನಾಡಿ, ಜಗತ್ತನ್ನು ನಡೆಸುತ್ತಿರುವ ಮಹಾಶಕ್ತಿಯಾದ ಭಗವಂತನ ದರ್ಶನಕ್ಕೆ ಶರಣ ಸಿದ್ಧಾಂತ ಸುಲಭ ಮಾರ್ಗ. ಹಣ ಸಂಪಾದನೆ ಮುಖ್ಯವಾಗದೆ ಗುಣ ಸಂಪಾದನೆ ಮುಖ್ಯವಾಗಬೇಕು. ಧಾರ್ಮಿಕ ಸಭೆಗಳು ಆಧ್ಯಾತ್ಮಿಕ ಜ್ಞಾನವನ್ನು ಉಂಟು ಮಾಡಿ ನಮ್ಮಲ್ಲಿರುವ ದುರ್ಗುಣಗಳನ್ನು ಕಳೆದು ಸುಜ್ಞಾನವನ್ನು ಉಂಟುಮಾಡಿ ನಮ್ಮ ಜೀವನವನ್ನು ಪಾವನ ಮಾಡುತ್ತವೆ ಎಂದರು.

# ಜಲಜೀವನ್ ಮಿಷನ್ ಯೋಜನೆಯ ಅನುಷ್ಠಾನಕ್ಕೆ ಸುಮಾರು 6 ಕೋಟಿ ಅನುದಾನ ಬಿಡುಗಡೆ

• **ಉದಯ ವಾಹಿನಿ, ಬೇತಮಂಗಲ**

ಕೇಂದ್ರ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಗಳಲಲ್ಲಿ ಒಂದಾದ ಜಲಜೀವನ್ ಮಿಷನ್ (ಮನೆ ಮನೆಗೆ ಗಂಗೆ) ಯೋಜನೆಯ ಕಾಮಗಾರಿ ಅನುಷ್ಠಾನಕ್ಕಾಗಿ ರಸ್ತೆಗಳಿಗೆ ಕತ್ತರಿ ಬಿದ್ದು ಸಂಪೂರ್ಣವಾಗಿ ರಸ್ತೆಗಳು ಹಾಳಾಗಿವೆ.

ಬೇತಮಂಗಲ ಗ್ರಾಮದಲ್ಲಿ ಜಲಜೀವನ್ ಮಿಷನ್ ಯೋಜನೆಯ ಅನುಷ್ಠಾನಕ್ಕೆ ಸುಮಾರು ರೂ. 6 ಕೋಟಿ ಅನುದಾನ ಬಿಡುಗಡೆಯಾಗಿದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಈಗಾಗಲೇ ಕಾಮಗಾರಿ ಕೈಗೊಳ್ಳಲಾಗಿದೆ. ಪೈಪ್ ಅಳವಡಿಸಲು ರಸ್ತೆಗಳನ್ನು ಅಗೆದು ಹಾಗೆ ಬಿಡಲಾಗಿದೆ. ಇದರಿಂದ ವಾಹನ ಮತ್ತು ಪಾದಚಾರಿಗಳ ಓಡಾಟಕ್ಕೆ ಅಡಚಣೆ ಉಂಟಾಗಿದೆ.



☛ ಉದಯವಾಹಿನಿ ಚಿತ್ರ

ಬೇತಮಂಗಲದ 115ನೇ ಕರಗ ಮಹೋತ್ಸವಕ್ಕೆ ಗ್ರಾಮ ಸಜ್ಜಾಗಿದೆ. ಆದರೆ ಊರಿನ ರಸ್ತೆಗಳು ಜೆಜೆಎಂ ಕಾಮಗಾರಿಯಿಂದ ಹದಗೆಟ್ಟಿರುವುದರಿಂದ ಕರಗ ಮೆರವಣಿಗೆಗೆ ತೊಂದರೆಯಾಗಲಿದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ. ಬೇತಮಂಗಲ ಕರಗ ಮಹೋತ್ಸವ ಪ್ರತಿ ವರ್ಷವೂ ಸಹ ಸುಮಾರು 24 ಗಂಟೆಗಳಿಗೂ ಹೆಚ್ಚು ಕಾಲ ಕರಗ ಪೂಜಾರಿ ಕರಗವನ್ನು ಹೊತ್ತು ಗ್ರಾಮದಲ್ಲಿ ಸಂಚರಿಸುತ್ತಾರೆ. ಕರಗ ಮಹೋತ್ಸವಕ್ಕೆ ಹಾಗೂ ಪುಷ್ಪ ಪಲ್ಲಕ್ಕಿಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ರಸ್ತೆ ಸರಿಪಡಿಸಬೇಕಿದೆ ಎಂದು ದೇಗುಲ ಸಮಿತಿಯ ಮುಖ್ಯಸ್ಥ ಅ.ಮು.ಲಕ್ಷ್ಮೀನಾರಾಯಣ್ ಕೋರಿದ್ದಾರೆ.

> ಜಲಜೀವನ್ ಮಿಷನ್ ಯೋಜನೆ ಕೈಗೊಂಡಿರುವ ಬ್ಲಾಕ್‌ಗಳಲ್ಲಿ ಹಾಳಾಗಿರುವ ರಸ್ತೆಗಳಿಗೆ ಸಿಮೆಂಟ್ ಹಾಕಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಗುತ್ತಿಗೆದಾರರು ಸಹ ವೇಗವಾಗಿ ಕಾಮಗಾರಿ ನಡೆಸುತ್ತಿದ್ದಾರೆ.
> -ವಿನೋದ್ ಕಾರ್ತಿಕ್

# ಮಧುಬಲೆಯ ಕಿಂಗ್‌ಪಿನ್ ಅಮಿತ್ ಶಾ: ಹರೀಶ್ ಗೌಡ

• **ಉದಯ ವಾಹಿನಿ, ಮೈಸೂರು**

'ಮಧುಬಲೆ (ಹನಿಟ್ರ್ಯಾಪ್)ಯ ಹಿಂದೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಇದ್ದಾರೆ. ಅವರೇ ನಿಜವಾದ ಕಿಂಗ್‌ಪಿನ್' ಎಂದು ಕಾಂಗ್ರೆಸ್ ಶಾಸಕ ಕೆ.ಹರೀಶ್ ಗೌಡ ಆರೋಪಿಸಿದರು. ಇಲ್ಲಿ ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮಧುಬಲೆಯ ಹಿಂದೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪಾತ್ರವಿಲ್ಲ ಎಂದು ಹೇಳಿದರು. ಎಲ್ಲಾ ದಕ್ಕೂ ಕಾಂಗ್ರೆಸ್‌ನವರತ್ತ ಬೊಟ್ಟು ಮಾಡುವುದು ಬಿಜೆಪಿಯವರ ಹುಟ್ಟುಗುಣ ಎಂದು ಟೀಕಿಸಿದರು. ನಾನೂ ಆರು ತಿಂಗಳ ಹಿಂದೆಯೇ ಮಧುಬಲೆಯ ಬಗ್ಗೆ ದೂರು ನೀಡಿದ್ದೆ. ಮೈಸೂರು ಭಾಗದ ಹಲವರನ್ನು ಸಿಲುಕಿಸಲಾಗಿತ್ತು. ಸಾಮಾನ್ಯ ಜನರು, ಪ್ರೊಫೆಸರ್, ಕೈಗಾರಿಕೋದ್ಯಮಿಗಳನ್ನು ಗುರಿ ಮಾಡಿದ್ದರು. ಈಗ, ಶಾಸಕರನ್ನೇ ಟಾರ್ಗೆಟ್ ಮಾಡುತ್ತಿದ್ದಾರೆ. ಒಬ್ಬ ಮನುಷ್ಯ ನನ್ನು ಮಣಿಸಲು ವಾಮಮಾರ್ಗ ಅನುಸರಿಸಬಾರದು. ದಿನನಿತ್ಯದ ಕಿರುಕುಳ ನೀಡುವ ವ್ಯಕ್ತಿಗಳ ವಿರುದ್ಧ ನಾನು ಸಮರ ಸಾರಿದ್ದೆ ಎಂದರು. ಮುನಿರತ್ನನೇ ಕೇಡಿ. ಅವನು ಬೇರೊಬ್ಬರ ಬಗ್ಗೆ ಅಪಾದಿಸುವುದು ಸರಿಯಲ್ಲ. ಆತನನ್ನು ಕಂಡರೆ ನನಗೆ ಭಯವಾಗುತ್ತದೆ.

# ಶೀಘ್ರದಲ್ಲಿ ಶಿರಾ ಗ್ರೇಡ್ 1 ನಗರಸಭೆ ಶಾಸಕ ಟಿ.ಬಿ.ಜಯಚಂದ್ರ

• **ಉದಯ ವಾಹಿನಿ, ಶಿರಾ**

ಯೋಜನಾ ಪ್ರಾಧಿಕಾರವನ್ನು ಮೇಲ್ದರ್ಜೆಗೇರಿಸಿ ಶಿರಾ ನಗರಾಭಿವೃದ್ಧಿ ಪ್ರಾಧಿಕಾರವನ್ನು ರಚನೆ ಮಾಡಿದ ರೀತಿಯಲ್ಲಿಯೇ ಶೀಘ್ರದಲ್ಲಿ ಶಿರಾ ನಗರಸಭೆಯನ್ನು ಗ್ರೇಡ್ 1 ನಗರಸಭೆಯಾಗಿ ಮೇಲ್ದರ್ಜೆಗೇರಿಸಲಾಗುವುದು ಎಂದು ಶಾಸಕ ಟಿ.ಬಿ.ಜಯಚಂದ್ರ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಬೆಂಗಳೂರಿನ ಜನಸಂಖ್ಯೆ 2050ರ ವೇಳೆಗೆ 4ಕೋಟಿ ಆಗುವುದಾಗಿ ವರದಿ ನೀಡಲಾಗಿದೆ. ಇದರ ಪರಿಣಾಮ ಶಿರಾ ಸಹ ಬೆಂಗಳೂರಿನ ಭಾಗವಾಗುವ ದಿನಗಳು ದೂರವಿಲ್ಲ.

ಶಿರಾವನ್ನು ಅಭಿವೃದ್ಧಿಯ ಕಡೆ ತೆಗೆದುಕೊಂಡು ಹೋಗಲು ಎಲ್ಲಾ ಪ್ರಯತ್ನ ನಡೆಸಲಾಗಿದೆ ಎಂದರು. ಉತ್ತರ ಕರ್ನಾಟಕದ ಭಾಗದಿಂದ ಬೆಂಗಳೂರಿಗೆ ಬರುವ ಜನರಿಗೆ ಶಿರಾ ಹೆಬ್ಬಾಗಿಲು ಆಗಿರುವುದರಿಂದ ಶಿರಾ ತಾಲ್ಲೂಕಿನಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾರಂಭಿಸುವಂತೆ ಉತ್ತರ ಕರ್ನಾಟಕದ ಶಾಸಕರ ಜೊತೆ ಸೇರಿ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಶಿರಾ ನಗರ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಕಾನೂನುಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕಲಾಗುವುದು. ಭೂಮಿಯ ಬೆಲೆ ಗಗನಕ್ಕೆ ಏರಿದ ನಂತರ ರಿಯಲ್ ಎಸ್ಟೇಟ್ ಮಾಫಿಯಾದವರು ಜನತೆಗೆ ವಂಚಿಸುವ ಕೆಲಸ ಮಾಡುತ್ತಿದ್ದಾರೆ. ತಾಲ್ಲೂಕಿನಲ್ಲಿ 1,730 ಎಕರೆ ಜಮೀನಿನ ಬೋಗಸ್ ದಾಖಲೆ ಸೃಷ್ಟಿಸಿದ್ದಾರೆ. ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಂಡು ಭೂಗಳ್ಳರನ್ನು ಜೈಲಿಗೆ ಕಳುಹಿಸಲಾಗುವುದು' ಎಂದರು.

# ಕ್ಷಯ ನಿಯಂತ್ರಣ; ಚಿಕ್ಕಬಳ್ಳಾಪುರ ರಾಜ್ಯಕ್ಕೆ ಪ್ರಥಮ

## ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಸದಸ್ಯರು ಹಾಗೂ ಪಿಡಿಒಗಳಿಗೆ ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಪ್ರಮಾಣ ಪತ್ರ ವಿತರಿಸಿದರು

• **ಉದಯ ವಾಹಿನಿ, ಚಿಕ್ಕಬಳ್ಳಾಪುರ**

ಕ್ಷಯ ರೋಗ ನಿಯಂತ್ರಣ ಕಾರ್ಯಕ್ರಮ ಅನುಷ್ಠಾನದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ ರಾಜ್ಯಕ್ಕೆ ಪ್ರಥಮ ಸ್ಥಾನಗಳಿಸಿದೆ ಎಂದು ಜಿಲ್ಲಾಧಿಕಾರಿ ಪಿ.ಎನ್ ರವೀಂದ್ರ ತಿಳಿಸಿದರು ಇಲ್ಲಿನ ಜಿಲ್ಲಾಡಳಿತ ಭವನದಲ್ಲಿ ಸೋಮವಾರ ನಡೆದ ವಿಶ್ವ ಕ್ಷಯ ರೋಗ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕ್ಷಯರೋಗ ನಿರ್ಮೂಲನೆಗಾಗಿ ಕಳೆದ 5 ವರ್ಷಗಳಲ್ಲಿ ಕೈಗೊಂಡಿರುವ ಕ್ರಮಗಳು, ಸೂಚ್ಯಂಕಗಳನ್ನು ರಾಜ್ಯ ಮಟ್ಟದಲ್ಲಿ ಪರಿಶೀಲಿಸಿ ಈ ಆಯ್ಕೆ ಮಾಡಲಾಗಿದೆ. ಮರಣ ಪ್ರಮಾಣ ಇಳಿಕೆ, ಕ್ಷಯರೋಗಗಳ ಪ್ರಕರಣಗಳ ಇಳಿಕೆ, ಪತ್ತೆ ಹಚ್ಚುವಿಕೆ, ಚಿಕಿತ್ಸಾ ವಿಧಾನ ಸೇರಿದಂತೆ 12 ಮಾನದಂಡ ಅನುಸರಿಸಲಾಗಿದೆ. ಈ ಕಾರ್ಯಕ್ಕೆ ಶ್ರಮಿಸಿದ ಆರೋಗ್ಯ ಇಲಾಖೆಯ ಎಲ್ಲಾ ಅಧಿಕಾರಿಗಳು, ಶುಶ್ರೂಷಕಿಯರು, ಆರೋಗ್ಯ, ಆಶಾ ಕಾರ್ಯಕರ್ತೆಯರು ಹಾಗೂ ಇತರ ಸಿಬ್ಬಂದಿಗೆ ಧನ್ಯವಾದ ತಿಳಿಸುವೆ ಎಂದರು.

2024ನೇ ಸಾಲಿನಲ್ಲಿ ಜಿಲ್ಲೆಯ 157 ಗ್ರಾಮ ಪಂಚಾಯಿತಿಗಳ ಪೈಕಿ ಕ್ಷಯರೋಗ ನಿರ್ಮೂಲನೆಯಲ್ಲಿ ಉತ್ತಮ ಸಾಧನೆ ತೋರಿದ 23 ಗ್ರಾಮ ಪಂಚಾಯಿತಿಗಳನ್ನು ಕ್ಷಯರೋಗ ಮುಕ್ತ ಗ್ರಾಮ ಪಂಚಾಯಿತಿಗಳು ಎಂದು ಘೋಷಿಸಲಾಗಿದೆ. 2025ರ ರೊಳಗೆ ಕ್ಷಯ ರೋಗ ನಿರ್ಮೂಲನೆ ಮಾಡಿ ಎಲ್ಲಾ ಗ್ರಾಮ ಪಂಚಾಯಿತಿಗಳು ಹಾಗೂ ನಗರ ಆಡಳಿತ ಸಂಸ್ಥೆಗಳು ಜಿಲ್ಲೆಯನ್ನು ಕ್ರಯರೋಗ ಮುಕ್ತ ಜಿಲ್ಲೆ ಎಂದು ಘೋಷಿಸಲು ಕ್ರಮ ವಹಿಸಬೇಕು ಎಂದು ತಿಳಿಸಿದರು. ಕಳೆದ ಡಿಸೆಂಬರ್‌ನಿಂದ ಜಿಲ್ಲೆಯಲ್ಲಿ ನೂರು ದಿನಗಳ ಕ್ಷಯರೋಗ ಪತ್ತೆ ಅಭಿಯಾನ ಮಾಡಲಾಗಿದೆ. ಅಭಿಯಾನದಲ್ಲಿ ಆಶಾ, ಆರೋಗ್ಯ ಮತ್ತು ಅಂಗನವಾಡಿ ಕಾರ್ಯಕರ್ತೆಯರ ಪಾತ್ರ ಮಹತ್ವದ್ದಾಗಿತ್ತು ಎಂದರು. ಜಿಲ್ಲೆಯಲ್ಲಿ ಹಲವು ವರ್ಷಗಳಿಂದ ಆರೋಗ್ಯ ಇಲಾಖೆ ಕೈಗೊಂಡ ಪರಿಣಾಮಕಾರಿ ಕ್ರಮಗಳ ಪರಿಣಾಮ ಕ್ಷಯ ಪ್ರಕರಣಗಳ ಸಂಖ್ಯೆ ಕಡಿಮೆ ಆಗುತ್ತಿದೆ. ಕ್ಷಯರೋಗ ಭಾರತದಲ್ಲಿ ಸವಾಲಾಗಿ ಉಳಿದಿದೆ. ಪ್ರತಿವರ್ಷ ಲಕ್ಷಾಂತರ ಹೊಸ ಪ್ರಕರಣಗಳು ವರದಿಯಾಗುತ್ತಿದೆ. ಕ್ಷಯ ಪರೀಕ್ಷೆಯ ಮಾಹಿತಿಗಾಗಿ ಉಚಿತ ಆರೋಗ್ಯ ಸಹಾಯವಾಣಿ 104 ಸಂಪರ್ಕಿಸಬಹುದು ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಯಲುವಹಳ್ಳಿ ಎನ್. ರಮೇಶ್, ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಅತಿಕ್ ಪಾಷಾ, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಮಂಜುಳಾ, ಡಾ. ಉಮಾ, ನಾಯನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಕೃಷ್ಣ, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಕೊಂಡೇನಹಳ್ಳಿ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ಪಾಲ್ಗೊಂಡಿದ್ದರು.



☛ ಉದಯವಾಹಿನಿ ಚಿತ್ರ

> ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿ ಡಾ.ಎಸ್.ಎಸ್ ಮಹೇಶ್ ಕುಮಾರ್ ಮಾತನಾಡಿ, ಕ್ಷಯ ಕುಷ್ಠ ರೋಗಿಗಳನ್ನು ಹಲವು ವರ್ಷಗಳ ಹಿಂದೆ ಅತ್ಯಂತ ಅಮಾನವೀಯವಾಗಿ ಮತ್ತು ಹೀನಾಯವಾಗಿ ನೋಡಲಾಗುತ್ತಿತ್ತು. ಆದರೆ ಆಧುನಿಕತೆ, ವೈದ್ಯಕೀಯ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಭಾವ ಪರಿಣಾಮದಿಂದ ನಾಗರಿಕತೆ ಬೆಳೆದಂತೆ ಪರಿಸ್ಥಿತಿ ಬದಲಾಗಿದೆ ಎಂದರು. ಆ ಸಂದರ್ಭದಲ್ಲಿ ಸರಿಯಾದ ಚಿಕಿತ್ಸೆ ಮತ್ತು ಅರಿವಿನ ಕೊರತೆ ಕಾರಣದಿಂದ ಈ ಎರಡೂ ಕಾಯಿಲೆಗಳ ರೋಗಿಗಳನ್ನು ಹೀನವಾಗಿ ನಡೆಸಿಕೊಳ್ಳಲಾಗುತ್ತಿತ್ತು. ಈಗ ಕ್ಷಯ ಮತ್ತು ಕುಷ್ಠರೋಗಗಳು ಸಂಪೂರ್ಣವಾಗಿ ಗುಣಪಡಿಸಬಹುದಾದಂತಹ ಕಾಯಿಲೆಗಳು ಎಂದು ವೈದ್ಯಕೀಯ ವಿಜ್ಞಾನ ದೃಢಪಡಿಸಿದೆ ಎಂದು ಹೇಳಿದರು.

ಅಂತರಾಳದಿಂದ.. EDITORIAL

# ಮಧುಬಲೆಗೆ ಬೀಳಿಸುವ ಯತ್ನ
## ತನಿಖೆ ನಡೆದು ಸತ್ಯಾಂಶ ಹೊರಬರಲಿ

ರಾಜಕೀಯ ಎದುರಾಳಿಗಳನ್ನು ಹಣಿಯಲು ಮಧುಬಲೆಯನ್ನು (ಹನಿಟ್ರ್ಯಾಪ್) ಅಸ್ತ್ರವಾಗಿ ಬಳಸಿಕೊಳ್ಳುವ ಹೀನಾತಿಹೀನ ಚಾಳಿ ಕರ್ನಾಟಕದಲ್ಲಿ ಹೆಚ್ಚುತ್ತಿರುವುದು ರಾಜಕಾರಣದಲ್ಲಿ ಮೌಲ್ಯಗಳು ಪಾತಾಳಕ್ಕೆ ಕುಸಿದಿರುವುದಕ್ಕೆ ಸಾಕ್ಷಿ. ಉನ್ನತ ಸಂಸದೀಯ ಪರಂಪರೆಯನ್ನು ಹೊಂದಿದ್ದ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿತ್ತು. ಅದಕ್ಕೆ ಇತ್ತೀಚಿನ ವರ್ಷಗಳಲ್ಲಿ ಪದೇ ಪದೇ ಕುಂದಾಗುತ್ತಲೇ ಇದೆ. ರಾಜ್ಯದಲ್ಲಿ ಸಚಿವರೊಬ್ಬರ ವಿರುದ್ಧವೇ ಈ ಅಸ್ತ್ರ ಬಳಸಲಾಗಿದೆ ಎಂಬ ವಿಚಾರ ಈಚೆಗೆ ವಿಧಾನ ಸಭೆಯಲ್ಲೇ

ಬಹಿರಂಗವಾಗಿ, ಕೋಲಾಹಲ ಸೃಷ್ಟಿಸಿದೆ. ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರು ಸದನದಲ್ಲೇ ಈ ವಿಚಾರವನ್ನು ದೃಢಪಡಿಸಿದ್ದಾರೆ. ಮಧುಬಲೆ ಪ್ರಕರಣವು 2013-18ರ ಅವಧಿಯಲ್ಲಿನ ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿ ಸಚಿವರೊಬ್ಬರ ರಾಜೀನಾಮೆಗೆ ಕಾರಣವಾಯಿತು. ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಸರ್ಕಾರವನ್ನು ಕೆಡವಲು ಕಾರಣರಾದ ಹಲವು ಶಾಸಕರು ಕೆಲವು ದಿನಗಳ ಮಟ್ಟಿಗೆ ಮುಂಬೈನಲ್ಲಿ ವಾಸ್ತವ್ಯ ಹೂಡಿದ್ದರು. ಆ ವೇಳೆ ಚಿತ್ರೀಕರಿಸಲಾಗಿದೆ ಎನ್ನಲಾದ ವೀಡಿಯೋ, ಇರುವ ಪೆನ್‌ಡ್ರೈವ್‌ಗಳನ್ನು ಕೆಲವು ನಾಯಕರು ತಮ್ಮ ಬಳಿ ಇರಿಸಿಕೊಂಡಿದ್ದಾರೆ ಎಂಬ ವದಂತಿಯು ರಾಜಕೀಯ ವಲಯದಲ್ಲಿ ಹಬ್ಬಿತ್ತು. ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರದಲ್ಲಿ ಪ್ರಭಾವಿ ಸಚಿವರೊಬ್ಬರ ಪದಚ್ಯುತಿಗೂ ಕಾರಣವಾಗಿದ್ದು ಇದೇ ಅಸ್ತ್ರ. ತಮ್ಮ ಮಾನಕ್ಕೆ ಹಾನಿ ತರುವ ವಿಡಿಯೊಗಳನ್ನು ಪ್ರಸಾರ ಮಾಡಬಾರದು ಎಂದು ರಾಜ್ಯದ 20ಕ್ಕೂ ಹೆಚ್ಚು ಜನಪ್ರತಿನಿಧಿಗಳು ನ್ಯಾಯಾಲಯಗಳಿಂದ ಪ್ರತಿಬಂಧಕಾಜ್ಞೆ ತಂದಿರುವುದು ಈ ಹಾವಳಿ ವಿಕೋಪಕ್ಕೆ ಹೋಗಿರುವುದನ್ನು ಸೂಚಿಸುತ್ತದೆ.

**’ನಾನೊಬ್ಬನೇ ಅಲ್ಲ. ರಾಜ್ಯ ಹಾಗೂ ಕೇಂದ್ರದ ಎಲ್ಲಾ ಪಕ್ಷಗಳ ನಾಯಕರೂ ಸೇರಿದಂತೆ 48 ಮಂದಿ ಮೇಲೆ ಈ ಅಸ್ತ್ರ ಬಳಸಿ, ಸಿ.ಡಿ. ಮಾಡಿಟ್ಟುಕೊಳ್ಳಲಾಗಿದೆ. ರಾಜ್ಯವು ಸಿ.ಡಿ., ಪೆನ್‌ಡ್ರೈವ್ ಕಾರ್ಖಾನೆಯಾಗಿದೆ ಎಂದು ಬಹಳ ಜನ ಹೇಳುತ್ತಿದ್ದಾರೆ’ ಎಂದು ಸಚಿವರೇ ಹೇಳಿರುವುದು ಕಂಪನಗಳನ್ನು ಎಬ್ಬಿಸಿದೆ. ಮಧುಬಲೆಯ ಸೂತ್ರಧಾರಿಗಳು ಯಾರೇ ಆಗಿರಲಿ ಅಂತಹವರ ಮುಖವಾಡ ಕಳಚಬೇಕು. ರಾಜಕೀಯ ಲಾಭಕ್ಕಾಗಿ ರಾಜ್ಯದಲ್ಲಿ ಹನಿಟ್ರ್ಯಾಪ್ ಪ್ರಕರಣಗಳು ಪದೇ ಪದೇ ಸದ್ದು ಮಾಡುತ್ತಿವೆ.**

ಸಿರಿವಂತರನ್ನು ಮಧುಬಲೆಗೆ ಕೆಡವಿ ಸುಲಿಗೆ ಮಾಡುವ ಪ್ರಕರಣಗಳು ಬಹಳ ವರ್ಷಗಳಿಂದಲೂ ನಡೆಯುತ್ತಿದ್ದವು. ಇತ್ತೀಚಿನ ವರ್ಷಗಳಲ್ಲಿ ಅಧಿಕಾರಸ್ಥ ರಾಜಕಾರಣಿಗಳು ಮತ್ತು ಪ್ರಭಾವಿ ಅಧಿಕಾರಿಗಳನ್ನು ಇಂತಹ ಕುತಂತ್ರದ ಮೂಲಕ ತಮ್ಮ ಹಿಡಿತದಲ್ಲಿರಿಸಿಕೊಂಡು ಲಾಭ ಪಡೆಯುವ ಜಾಲಗಳೂ ಸಕ್ರಿಯವಾಗಿವೆ. ಎದುರಾಳಿಗಳನ್ನು ಮಣಿಸಿ ಅಧಿಕಾರ ಹಿಡಿಯುವುದಕ್ಕೂ ಈ ಅಸ್ತ್ರ ಬಳಕೆಯಾಗುತ್ತಿದೆ ಎಂಬ ಆರೋಪ ಈಗ ಬಲವಾಗಿದೆ. ಇಂತಹ ಪ್ರಕರಣಗಳಲ್ಲಿ ಸಿಲುಕಿದವರ ಚಾರಿತ್ರ್ಯ ಹನನವಷ್ಟೇ ಆಗುವುದಿಲ್ಲ. ಅವರು ಬಾಹ್ಯ ಶಕ್ತಿಗಳ ಒತ್ತಡಕ್ಕೆ ಮಣಿದು ನೀತಿ ನಿರ್ಧಾರಗಳಲ್ಲಿ ರಾಜಿ ಮಾಡಿಕೊಳ್ಳುವ, ಆಡಳಿತದಲ್ಲಿನ ರಹಸ್ಯಗಳನ್ನು ಸೋರಿಕೆ ಮಾಡುವ ಅಧಿಕಾರ ದುರ್ಬಳಕೆ ಮಾಡಿಕೊಂಡು ನಿರ್ದಿಷ್ಟ ವ್ಯಕ್ತಿಗಳಿಗೆ ಲಾಭ ಮಾಡಿಕೊಡುವಂತಹ ತೀರ್ಮಾನಗಳನ್ನು ಕೈಗೊಳ್ಳುವುದಕ್ಕೂ ಎಡೆಮಾಡುತ್ತದೆ. ಮಧುಬಲೆಗೆ ಸಿಲುಕಿಸಿ ಲಾಭ ಪಡೆಯುವ ಸಂಚು ಅಕ್ಷಮ್ಯ, ಸಾರ್ವಜನಿಕ ಜೀವನದಲ್ಲಿ ಇರುವವರ ಮೇಲೂ ಈ ವಿಷಯದಲ್ಲಿ ಹೆಚ್ಚು ಜವಾಬ್ದಾರಿಗಳಿರುತ್ತವೆ. ಯಾರೋ ಹೆಣೆದ ಇಂತಹ ಸಂಚಿಗೆ ಬಲಿ ಆಗದಂತೆ ಜಾಗರೂಕರಾಗಿ ಇರಬೇಕು. ಆಗ, ವೀಡಿಯೋ, ಫೋಟೊ ಪ್ರಸಾರ ಮಾಡದಂತೆ ಆದೇಶ ಕೋರಿ ನ್ಯಾಯಾಲಯದ ಮೆಟ್ಟಿಲೇರುವುದು. ಕುಟುಂಬ, ಪಕ್ಷ, ಸರ್ಕಾರವನ್ನು ಮುಜುಗರಕ್ಕೆ ಸಿಲುಕಿಸುವುದೂ ತಪ್ಪುತ್ತದೆ. ಒತ್ತಡಕ್ಕೆ ಮಣಿಯದೆ ಅಧಿಕಾರ ಚಲಾಯಿಸುವ ಸ್ವಾತಂತ್ರ್ಯವೂ ತಾನಾಗಿಯೇ ದೊರಕುತ್ತದೆ. ವಿಧಾನಮಂಡಲದ ಈ ಬಾರಿಯ ಕಲಾಪದಲ್ಲಿ ಜನಹಿತಕ್ಕೆ ಸಂಬಂಧಿಸಿದ ವಿಚಾರಗಳಿಗಿಂತಲೂ ಹೆಚ್ಚಾಗಿ ಮಧುಬಲೆಯಂತಹ ವ್ಯಕ್ತಿ ನೆಲೆಯ ವಿಷಯಗಳು ಚರ್ಚೆ, ಧರಣಿ, ಗದ್ದಲಕ್ಕೆ ಕಾರಣವಾದವು. ರಾಜ್ಯದಲ್ಲಿ ಅಧಿಕಾರಸ್ಥರನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವುದಕ್ಕಾಗಿಯೇ ತಂತ್ರ ಹೂಡಿ ಹನಿಟ್ರ್ಯಾಪ್ ಮಾಡುವಂತಹ ದೊಡ್ಡ ಜಾಲವೇ ಇದೆ ಎಂಬುದನ್ನು ವಿಧಾನಸಭೆಯ ಕೆಲವು ಸದಸ್ಯರು ಸದನದಲ್ಲೇ ಬಹಿರಂಗಪಡಿಸಿದ್ದಾರೆ. ಸಚಿವ ರಾಜಣ್ಣ ಮಾತ್ರವಲ್ಲ, ವಿಧಾನ ಪರಿಷತ್‌ನ ಸದಸ್ಯರೂ ಆಗಿರುವ ಅವರ ಮಗ ರಾಜೇಂದ್ರ, ಅವರನ್ನೂ ಮಧುಬಲೆಗೆ ಕೆಡವುವ ಪ್ರಯತ್ನ ನಡೆದಿತ್ತು ಎಂಬುದನ್ನು ಅವರೇ ಈಗ ಹೊರಗೆಡವಿದ್ದಾರೆ. ಈ ಕುರಿತ ಬಲವಾದ ಸಾಕ್ಷ್ಯಗಳೂ ತಮ್ಮ ಬಳಿ ಇವೆ ಎಂದಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೂ ಕೆಲವು ದಿನಗಳ ಹಿಂದೆಯೇ ವಿಷಯ ಬಂದಿತ್ತು. ಸಿದ್ದರಾಮಯ್ಯ ಅವರ ಪರವಾಗಿ ಬಲವಾಗಿ ಧ್ವನಿ ಎತ್ತಿರುವುದಕ್ಕಾಗಿಯೇ ರಾಜಕೀಯವಾಗಿ ರಾಜಣ್ಣ ಅವರನ್ನು ಮಣಿಸಲು ಈ ಅಸ್ತ್ರ ಹೂಡಲಾಗಿತ್ತು ಎಂದು ಅವರ ಸಂಪುಟದ ಕೆಲವು ಸದಸ್ಯರು ಹೇಳಿಕೆ ನೀಡಿದ್ದಾರೆ. ಇಂತಹ ಗಂಭೀರ ಪ್ರಕರಣದ ಕುರಿತು ರಾಜಣ್ಣ ಮತ್ತು ಅವರ ಮಗ ನೇರವಾಗಿ ಪೊಲೀಸರಿಗೆ ದೂರು ನೀಡಿ, ತನಿಖೆಗೆ ಮನವಿ ಮಾಡುವ ಅವಕಾಶ ಇತ್ತು. ಆದರೂ ಅವರು ವಿಷಯ ಬಹಿರಂಗಪಡಿಸುವುದಕ್ಕೆ ವಿಧಾನಮಂಡಲದ ಅಧಿವೇಶನವನ್ನು ಬಳಸಿಕೊಂಡಿದ್ದಾರೆ. ರಾಜಕೀಯವಾಗಿ ಎದುರಾಳಿಗಳಿಗೆ ಸಂದೇಶ ರವಾನಿಸುವುದು ಅವರ ಉದ್ದೇಶ ಆಗಿರಬಹುದು. ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ದೂರು ಸಲ್ಲಿಸುವುದಾಗಿ ರಾಜಣ್ಣ ಅವರ ಕುಟುಂಬದ ಸದಸ್ಯರು ಹೇಳಿದ್ದಾರೆ. ಈ ವಿಚಾರದಲ್ಲಿ ಮತ್ತಷ್ಟು ವಿಳಂಬ ಮಾಡಬಾರದು. ಪ್ರಕರಣದ ಕುರಿತು ಉನ್ನತ ಮಟ್ಟದ ತನಿಖೆಗೆ ಆದೇಶಿಸುವ ದೃಢ ನಿಲುವನ್ನು ಮುಖ್ಯಮಂತ್ರಿಯವರು ತೆಗೆದುಕೊಳ್ಳಬೇಕು. ಮಧುಬಲೆಯ ಹಿಂದಿರುವ ಜಾಲವನ್ನು ಸಮಗ್ರವಾಗಿ ಪತ್ತೆಹಚ್ಚಿ, ಸಂಚುಕೋರರು, ಕಾರ್ಯಾಚರಣೆ ನಡೆಸುವವರ ವಿರುದ್ಧ ಕಾನೂನಿನ ಅಡಿಯಲ್ಲಿ ಕಠಿಣ ಕ್ರಮ ಜರುಗಿಸಬೇಕು. ಆ ಮೂಲಕ ದೇಶದಲ್ಲಿ ರಾಜ್ಯದ ಗೌರವವನ್ನು ಕಾಪಾಡುವ ಕೆಲಸ ಮಾಡಬೇಕು.

# ರಾಮಾಯಣ



## ಶ್ರೀರಾಮನು ಸೀತಾದೇವಿಗೆ ವನದ ಕಷ್ಟಗಳನ್ನು ಹೇಳಿದ್ದು ಆ ಬಳಿಕ

• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

ಈ ಪ್ರಕಾರವಾಗಿ ಸಾವಿರ ವರುಷಗಳಾದರೂ ನಿನ್ನ ಸಂಗಡ ಇರುವೆನಲ್ಲದೆ ನಿನ್ನನ್ನು ಬಿಟ್ಟು ಸ್ವರ್ಗಭೋಗವನ್ನಾದರೂ ಅನುಭವಿಸಿಕೊಂಡಿರಲಾರೆನು. ನಿನ್ನೊಡನೆ ಅತ್ಯಂತ ಭೀಕರವಾದ ಅರಣ್ಯದಲ್ಲಿರುವೆನಲ್ಲದೆ ನಿನ್ನನ್ನು ಬಿಟ್ಟಿರಲಾರೆನು! ಶ್ರೀರಾಮ್ಮ ನೀನು ಬಿಟ್ಟು ಹೋದರೆ ನನಗೆ ದೇಹತ್ಯಾಗವೇ ನಿಶ್ಚಿತ. ಆದ್ದರಿಂದ ನನ್ನ ಮಾತನ್ನು ಅಂಗೀಕರಿಸು ಎಂದು ನುಡಿದಳು. ಧರ್ಮರಹಸ್ಯವನ್ನು ಬಲ್ಲ ಶ್ರೀರಾಮನು ಸೀತಾದೇವಿಯು ವನದಲ್ಲಿ ಸಂಚರಿಸುವುದು ಬಹು ದುರ್ಘಟವೆಂದು ವಿಚಾರಿಸಿ ಆ ದೇವಿಯನ್ನು ತನ್ನೊಡನೆ ಕರೆದುಕೊಂಡುಹೋಗುವುದಕ್ಕೆ ಮನಸ್ಸಿಲ್ಲದೆ ಆಕೆಯ ಕಣ್ಣೀರನ್ನು ತೊಡೆದು ಸಂತವಿಟ್ಟನು. ಆಮೇಲೆ ಆಕೆಯನ್ನು ಕುರಿತು ಜಾನಕಿ, ನೀನು ಪ್ರಸಿದ್ಧವಾದ ವಂಶದಲ್ಲಿ ಜನಿಸಿದವಳು. ಸಮಸ್ತ ಧರ್ಮರಹಸ್ಯಗಳನ್ನೂ ಕ್ಷತ್ರಿಯ ಧರ್ಮವನ್ನೂ ಬಲ್ಲವಳು. ಆದಕಾರಣ ನೀನು ವನಕ್ಕೆ ಬರಬೇಕೆಂಬ ಬುದ್ಧಿಯನ್ನು ಬಿಟ್ಟು ಇಲ್ಲಿಯೇ ಸಮಸ್ತ ಧರ್ಮಗಳನ್ನೂ ಆಚರಿಸಿಕೊಂಡು ನಾನು ಹೇಳಿದ ಹಾಗೆ ಸುಖದಿಂದಿರು. ವನದಲ್ಲಿ ಬಹು ಉಪದ್ರವಗಳುಂಟಾಗುವುವು. ನಾನು ನಿನಗೆ ಹಿತವಾಗಿ ಹೇಳುತ್ತೇನೆಯೇ ಹೊರತು ಬೇರೇನೂ ಇಲ್ಲ. ಅಲ್ಲಿ ಪರ್ವತಗಳು ಮೊದಲಾದವು ಬಹಳವಾಗಿರುವುವು. ಮಹಾಭಯಂಕರವಾಗಿ ಗರ್ಜಿಸುವ ಸಿಂಹಗಳ ಕೋಲಾಹಲಧ್ವನಿಗಳು ಕೇಳಲ್ಪಡುವುವು.

ನಿರ್ಜನಪ್ರದೇಶಗಳಲ್ಲಿ ಸೊಕ್ಕಿದ ಮೃಗಗಳು ಮನುಷ್ಯರನ್ನು ಕಂಡರೆ ಎದುರಾಗಿ ಅಟ್ಟಿಸಿಕೊಂಡು ಬರುವುವು. ಮೊಸಳೆ ನೀರಾನೆ ಮೊದಲಾದ ಜಲಚರಪ್ರಾಣಿಗಳಿಂದ ಪರಿಪೂರ್ಣವಾಗಿ ಬಹಳವಾದ ಕೆಸರುಳ್ಳ ಅನೇಕ ನದಿಗಳುಂಟು. ಎಲ್ಲಿ ನೋಡಿದರೂ ಸೊಕ್ಕಿದ ಆನೆಯಹಿಂಡುಗಳು ಸಂಚರಿಸುತ್ತಿರುವುವು. ಮಾರ್ಗದಲ್ಲಿ ಮುಳ್ಳುಗಳು ಬಹಳವಾಗಿರುವುವು. ಅಲ್ಲಲ್ಲಿ ಕಾಡುಕೋಳಿಗಳ ಭಯಂಕರವಾದ ಧ್ವನಿಗಳು ಕೇಳಿಸುವುವು. ಕೆಲವು ಸ್ಥಳಗಳಲ್ಲಿ ಉದಕವಿಲ್ಲದೆ ಸಂಚರಿಸುವುದಕ್ಕೆ ದುರ್ಘಟ ವಾಗಿರುವುದು. ಸಾಯಂಕಾಲದಲ್ಲಿ ಎಲ್ಲಿ ನಿಂತರೂ ಅಲ್ಲಿರುವ ವೃಕ್ಷಗಳ ಸೊಪ್ಪುಗಳನ್ನು ಮುರಿದು ಹಾಸಿಗೆಯಾಗಿ ಮಾಡಿಕೊಂಡು ರಾತ್ರಿಯನ್ನು ಕಳೆಯಬೇಕು. ವೃಕ್ಷಗಳಿಂದ ಉದುರಿದ ಫಲಗಳನ್ನು ಆಹಾರವಾಗಿ ಮಾಡಿಕೊಂಡು ಹಗಲಿರುಳೂ ಸಂತೋಷವಾಗಿರಬೇಕು. ಒಂದೊಂದು ಸ್ಥಳದಲ್ಲಿ ವರ್ಣಫಲಾದಿಗಳು ದೊರಕದಿದ್ದರೆ ಉಪವಾಸವನ್ನು ಮಾಡಬೇಕು. ವನದಲ್ಲಿ ವ್ರತನಿಮಿತ್ತವಾಗಿ ಜಡೆಗಳನ್ನು ಧರಿಸಿ ನಾರುಬಟ್ಟೆಗಳನ್ನುಟ್ಟುಕೊಂಡಿರಬೇಕು. ಪ್ರತಿದಿನವೂ ನಾರುಬಟ್ಟೆಯನ್ನುಉಟ್ಟುಕೊಂಡು ಕಂದ ಮೂಲ ಫಲಾಹಾರಗಳಿಂದ ದೇವತಾರ್ಚನೆ ಪಿತೃ ಸಂತರ್ಪಣೆಗಳನ್ನು ಮಾಡಿ ಬಂದ ಅತಿಥಿಗಳಿಗೆ ಸತ್ಕಾರಗಳನ್ನು ಮಾಡಬೇಕು. ಪ್ರಾತಃಕಾಲ ಮಧ್ಯಾಹ್ನಕಾಲ ಸಂಧ್ಯಾಕಾಲವೆಂಬ ಮೂರು ಕಾಲಗಳಲ್ಲಿಯೂ ಸ್ನಾನವನ್ನು ಮಾಡಿ ಅತ್ಯಂತ ನಿಯಮದಿಂದಿರಬೇಕು.

ಮುಂದುವರಿಯುವುದು...

# ಪ್ರಣತಿ - ಸುಂದರ ಕವನ ಗುಚ್ಛ



ವಿಶ್ವಾಸ್.ಡಿ.ಗೌಡ
ಉದಯವಾಹಿನಿ, ವಿಶೇಷ




**ಗುರುಭಕ್ತಿ ತುಂಬಿರುವ ಬೆಳಕು**

ಪ್ರಣತಿ ಕವನ ಗುಚ್ಛ ಇದು ಶ್ರೀಮತಿ ಪ್ರೇಮ ಪ್ರಶಾಂತ್ ಅವರ ಕವನ ಸಂಕಲನ. ಈ ಕೃತಿಗೆ ಶ್ರವಣಬೆಳಗೊಳದ ಲೇಖಕಿಯಾದ ಜಯಂತಿ ಚಂದ್ರಶೇಖರ್ ಅವರು ಮುನ್ನುಡಿಯನ್ನು ಬರೆದಿದ್ದಾರೆ. ಹಾಸನದ ಸ್ಪಂದನ ಶ್ರೀ ಪ್ರಕಾಶನ ಅವರಿಂದ ಪ್ರಕಟಗೊಂಡಿದೆ.

**ಕೃತಿಯಲ್ಲಿರುವ ಮಾಹಿತಿಗಳು:** ಈ ಪ್ರಣತಿ ಕವನ ಗುಚ್ಛದಲ್ಲಿ ಸುಮಾರು 72 ಕವನಗಳಿವೆ.

ಕವಯಿತ್ರಿ ತನ್ನ ಸುತ್ತಲಿನ ಸುಂದರ ಪ್ರಕೃತಿ ಹಾಗೂ ನಮ್ಮ ದೇಶದ ಹೆಮ್ಮೆಯ ನಾಯಕರನ್ನು ಕುರಿತು ಕವನಗಳನ್ನು ರಚಿಸಿದ್ದಾರೆ. ತಮ್ಮ ಮಗಳಾದ ಪ್ರಣತಿ ಕುರಿತು ಸುಂದರ ಕವನ ರಚಿಸಿದ್ದಾರೆ. ಸೌಂದರ್ಯಕ್ಕೆ ಮಾರುಹೋದ ಕವಿಹೃದಯ ಸಹಜವಾಗಿ ಈ ಅಖಂಡ ಭೂ ಮಾತೆಗೆ ಮಣಿದು ವಸುಂಧರೆಯ ಒಲವಿಗೆ ಸ್ಪಂದಿಸುತ್ತಾ ಸಕಲವನ್ನೂ ಹೊತ್ತಿರುವೆ ಸಹನಾ ಮೂರ್ತಿ ತ್ಯಾಗದ ಪ್ರತೀಕ ನೀ ಧರಿತ್ರಿ, ಎಂದು ಗುಣಗಾನ ಮಾಡುತ್ತಾ ತಮ್ಮಲ್ಲಿರುವ ನಿಸರ್ಗ ಪ್ರೇಮವನ್ನು ಹೊರಹಾಕಿದ್ದಾರೆ.

ಮೊದಲೇ ಹೇಳಿದಂತೆ ಈ ಕವಿಮನಸ್ಸು ತನ್ನ ಮೊದಲ ತೊದಲುಲಿತಗಳಲ್ಲಿ ತನ್ನೊಳಗಿನ ಭಾವನೆಗಳನ್ನು ಕವನಗಳೆಂಬ ಬರಹರೂಪದಲ್ಲಿ ಬಿತ್ತರಿಸು ಪ್ರಯತ್ನಿಸಿರುವ ಪರಿ ಏನೇ ಆದರೂ, ಬದುಕಿನ ಎಲ್ಲಾ ಸ್ತರಗಳ ಕುರಿತಾ ವಿಚಾರ ಸಂಪತ್ತು, ಅವುಗಳ ಬಗ್ಗೆ ಇರುವ ಕಾಳಜಿ, ಮಹತ್ವದ ಜೊತೆಗೆ ಮಮತೆ ಪ್ರೀತಿ ವಾತ್ಸಲ್ಯ ಸ್ನೇಹ ಹೀಗೆ ಎಲ್ಲಾ ಭಾವಬಂಧುರಗಳಿಗೆ ನವಿರಾಗಿ ಸ್ಪಂದಿಸುತ್ತಿ ಕವನಗಳನ್ನು ರಚಿಸಿರುವುದು ಮೆಚ್ಚತಕ್ಕದ್ದು. ದೇಶಭಕ್ತಿ ಸಾರುವ ಹೆಮ್ಮೆಯ ಧ್ವಜ, ಗುರುಭಕ್ತಿ ತುಂಬಿರುವ ಬೆಳಕು. ಮಾತಾಪಿತೃ ಪ್ರೇಮದ ಜನ್ಮದಾತರು, ವಯೋವೃದ್ಧರ ಕುರಿತಾದ 'ಬಾಳ ಮುಸಂಜೆ ಹೀಗೆ ಇನ್ನೂ ಹಲವಾರು ವಿಶಿಷ್ಟ ವಿಚಾರಗಳನ್ನು ಆಯ್ದುಕೊಂಡು ಕವನಗಳನ್ನು ರಚಿಸಿರುವುದು ವಿಶೇಷವಾಗಿದೆ.

ಈ ಕವನ ಸಂಕಲನದಲ್ಲಿನ ಬಹುಪಾಲು ಕವನಗಳನ್ನು ಗಮನಿಸಿದಾಗ ವಾಚ್ಯ ಅನಿಸುವುದರ ಜೊತೆಗೆ ಇದೇ ವಿಚಾರಧಾರೆಗಳಿಗೆ ಗದ್ಯರೂಪ ಕಟ್ಟಿದ್ದೇ ಅದಲ್ಲಿ ಅತ್ಯುತ್ತಮ ಲೇಖನ, ಕಥನ, ಸಬಂಧಗಳು ರಚನೆಯಾಗುವುದರಲ್ಲಿ ಸಂದೇಹವೇ ಇರುವುದಿಲ್ಲ, ಏಕೆಂದರೆ ಪ್ರೇಮಾರವರು ಬರೆದಿರುವ ಕೆಲವು ಕಥೆಗಳು, ಲೇಖನಗಳನ್ನು ಓದಿರುವ ನನಗೆ ಅವರು ಗದ್ಯದಷ್ಟು ಪರಿಣಾಮಕಾರಿಯಾಗಿ ಕವನಗಳನ್ನು ಕಟ್ಟಿಕೊಡುವಲ್ಲಿ ಇನ್ನೂ ಮಾಗಬೇಕಿದೆ, ಅದಕ್ಕಾಗಿ ಸಾಕಷ್ಟು ಅಧ್ಯಯನ ಮಾಡಬೇಕಿದೆ. ಈ ನಿಟ್ಟಿನಲ್ಲಿ ಕಾವ್ಯಾತ್ಮಕವಾದ ಕೃತಿಗಳನ್ನು ಓದುವ ಮುಖಾಂತರ ಮುಂದಿನ ದಿನಗಳಲ್ಲಿ ಉತ್ತಮ ಸೃಜನಶೀಲ ಕಾವ್ಯ ಇವರ ಬರಹದಲ್ಲಿ ಉದಯಿಸಲಿ ಎಂದು ಆಶಿಸುತ್ತಾ, ಇನ್ನು ಮುಂದೆ ಇವರಿಂದ ಅತ್ಯುತ್ತಮ ಕವನಗಳು ಬರೆಯಲ್ಪಟ್ಟು ಉತ್ತಮ ಸಾಹಿತ್ಯ ಕೃತಿಗಳು ಹೊರಬರಲಿ ಎಂಬ ಹಾರೈಸುವೆ.

# ಹೂ ಬಿಡುವ ಕಾಲ ಯುಗದ ಆದಿ ಕಾಲ

ದಟ್ಟಡವೀಯ
ನಡುವೆ
ದುಂಡನೆ ಮಲ್ಲಿಗೆ
ಜಾಜಿ ಸಂಪಿಗೆ
ಹೊಂಗೆ ಬೇವಿನ
ಗಿಡಗಳ ಸಾಲು ಸಾಲು
ಎಲ್ಲೆಡೆ ಸೂಸಿಹುದು
ಕಂಪು ಕಂಪು
ನಲಿದಾಡಿ
ನರ್ತಿಸಿಸುವ ನವಿಲುಗಳು
ಝೇಂಕರಿಸಿ
ಮಕರಂದ ಹೀರುವ ದುಂಬಿಗಳು
ಸುವಾಸನೆ ಸ್ವಾದಿಸಲು
ಸುಯ್ಗುಡುವ ಸುಳಿಗಾಳಿ
ಭೂ ಒಡಲ ಗರ್ಭಕೆ ಮಳೆಯ ಸಿಂಚನ
ಚಿಸಿಲೊಡೆವ ಪರ್ವಕಾಲ
ಪಸರಿಸುವ
ಬೇರು ಬೀಜಕೆ
ಪಕ್ಷಿಗಳ ಕಲರವ
ತುತ್ತು ಕೊಡುವ ತಾಯಿಗೆ
ನಲಿವ ಮರಿಗಳು
ರೆಕ್ಕೆ ಬಿಚ್ಚುವುದ ನೋಡುವ ಸಂಭ್ರಮ
ವೃಕ್ಷ ರಾಜನ
ನಲಿವು, ವರುಷ
ಕಳೆದ ಹುಟ್ಟು ಹಬ್ಬದ
ನೆನಪು, ಹೊಸ ಚಿಗುರು
ಹಳೇ ಬೇರು ಕೂಡಿರಲು
ಹೊಸ ಸೊಗಡು
ಕಾದಿಹುದು ನೀಡಲು
ಹೊಸ ವರುಷದ
ಹೊನಲು
ಬೇವು ಬೆಲ್ಲವ
ಸವಿಯಲು
ಕಹಿ ಸಿಹಿಗಳ ನೆನಹು
ಮರೆತರೆ ಮರೆತೇನು
ಕಹಿಯ ನೆನಪುಗಳ
ನೆನೆದರೆ ನೆನೆದೇನು
ಸಿಹಿಯ ಸೊಬಗನು
ಬಾ ಯುಗಾದಿಯೇ
ಯುಗದ ಆದಿಯೇ
ಮನು ಕುಲದ
ಕಷ್ಟವ ನೀಗಿಸು ಬಾ

ರಚನೆ: ಗುರಾನಿ



# 7ನೇ ವೇತನ ಆಯೋಗದ ಪರಿಷ್ಕೃತ ವೇತನ ಬಿಡುಗಡೆಗೆ ಒತ್ತಾಯ

• ಉದಯವಾಹಿನಿ,ಬೆಂಗಳೂರು

ಮಹಾನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣಪಂಚಾಯಿತಿ ಸೇರಿ ನಗರದ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಸೇರಿ ಎಲ್ಲಾ ಖಾಯಂ ನೌಕರರಿಗೆ 7ನೇ ವೇತನ ಆಯೋಗದ ಪರಿಷ್ಕೃತ ವೇತನವನ್ನು ಸರ್ಕಾರದಿಂದ ಬಿಡುಗಡೆ ಮಾಡಬೇಕೆಂದು ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘ, ಸಿಎಂ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದೆ. ನೌಕರರಿಗೆ ಹೆಚ್ಚುವರಿ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡದೆ ಆಯಾ ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ಮೂಲಗಳಿಂದ ಭರಿಸುವಂತೆ ಸುತ್ತೋಲೆ ಹೊರಡಿಸಲಾಗಿದೆ. 2023ರ ಏಪ್ರಿಲ್‌ನಿಂದ 2024ರ ಜುಲೈವರೆಗೆ ಪಾವತಿಸಬೇಕಿದ್ದ ಮಧ್ಯಂತರ ಪರಿಹಾರವನ್ನೂ ಕೂಡ ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ನಿಧಿಯಿಂದ ಭರಿಸುವಂತೆ ಸೂಚಿಸಲಾಗಿದೆ. ಬಹುತೇಕ ಸ್ಥಳೀಯ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲ ಎಂದು ಸಂದ ಅಧ್ಯಕ್ಷ ಎ.ಅಮೃತ್‌ರಾಜ್ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.



1194ನೇ ಸಾಲಿಗಿಂತ ಮುಂಚೆ ಆಕ್ಟ್ರಾಯ್ ವ್ಯವಸ್ಥೆ ರದ್ದುಗೊಂಡ ವೇಳೆ ಪೌರಕಾರ್ಮಿಕರೂ ಸೇರಿ ಎಲ್ಲಾ ಖಾಯಂ ನೌಕರರಿಗೂ ವೇತನ ಸೇರಿ ಇತರೆ ಸೌಲಭ್ಯಗಳನ್ನು ಪಾವತಿಸಲು ಎಸ್‌ಎಫ್‌ಸಿ ಅಡಿ ವೇತನ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡುವ ಪದ್ಧತಿಯನ್ನು ಜಾರಿಗೆ ತರಲಾಗಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಶೇ.10ರಷ್ಟು ವೇತನವನ್ನು ಹಾಗೂ 21 ದಿನಗಳ ವಿಶೇಷ ರಜಾ ನಗದೀಕರಣ ಸೌಲಭ್ಯವನ್ನು ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ಮೂಲದಿಂದ ಭರಿಸಲು ಸರ್ಕಾರವು ಸೂಚಿಸಿದೆ. ಬಹುತೇಕ ನಗರ ಸ್ಥಳೀಯ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲ ಕಾರಣ ಈ ಸೂಚನೆ ಪಾಲಿಸಲು ಸಾಧ್ಯವಿಲ್ಲ ಎಂದರು. ಸ್ಥಳೀಯ ಸಂಸ್ಥೆಗಳಲ್ಲಿ ಎಸ್‌ಎಫ್‌ಸಿ ಅನುದಾನದಲ್ಲಿಯೂ ಗಣನೀಯ ಇಳಿಕೆಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಘನ ತ್ಯಾಜ್ಯ, ಉದ್ಯಾನ ನಿರ್ವಹಣೆ, ಹೊರಗುತ್ತಿಗೆ ಸೇರಿ ಇತ್ಯಾದಿ ಮೂಲ ಸೌಕರ್ಯಗಳ ವೆಚ್ಚವೂ ಜಾಸ್ತಿಯಾಗಿದೆ. ಸ್ವಂತ ಮೂಲಗಳಲ್ಲಿ ಸಂಗ್ರಹವಾಗುವ ತೆರಿಗೆ, ನೀರಿನ ದರ ಸೇರಿ ಇತ್ಯಾದಗಳಿಂದ ವೆಚ್ಚಗಳನ್ನು ಭರಿಸಲೂ ಸಹ ಪರದಾಡುವ ಪರಿಸ್ಥಿತಿ ಇದೆ. ಹೀಗಿರುವಾಗ, ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ಮೂಲಗಳಿಂದ ವೇತನ ವೆಚ್ಚ ಭರಿಸುವಂತೆ ಹೊರಡಿಸಿರುವ ಸುತ್ತೋಲೆಯನ್ನು ಸರ್ಕಾರ ಹಿಂಪಡೆಯಬೇಕು ಎಂದು ಅಮೃತ್‌ರಾಜ್ ಆಗ್ರಹಿಸಿದರು.

**ಸರ್ಕಾರಕ್ಕೆ ಪ್ರತಿಭಟನೆ ಎಚ್ಚರಿಕೆ**

**ಸಾರ್ವಜನಿಕರಿಗೆ ಒದಗಿಸುವ ತುರ್ತು, ಅಗತ್ಯ ಸೇವೆಗಳಡಿ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರದ ಇತರೆ ಇಲಾಖೆಗಳಗಿಂತ ಹೆಚ್ಚಿನ ಕಾರ್ಯದೊತ್ತದದಲ್ಲಿ ನೌಕರರು ಇದ್ದಾರೆ. ಕಲ್ಯಾಣ, ಜನೋಪಯೋಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ನೌಕರರು ಮುಂಚೂಣಿಯಲ್ಲಿದ್ದಾರೆ. ಆದರೆ, ವೇತನ ಮತ್ತು ಸೌಲಭ್ಯ ವಿಚಾರದಲ್ಲಿ ಸರ್ಕಾರ, ಮಲತಾಯಿ ಧೋರಣೆ ತೋರುತ್ತಿದೆ. ಜೊತೆಗೆ, ರಾಜ್ಯ ಮಹಾನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಾಮವಳಿಯ ಕರಡು ತಿದ್ದುಪಡಿಯಾಗಿಲ್ಲ. ಹಾಗಾಗಿ, ನಮ್ಮ ಸಮಸ್ಯೆಗಳಿಗೆ ಪರಿಹಾರ ಸಿಗದಿದ್ದರೆ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳ ಅಧಿಕಾರಿಗಳು, ನೌಕರರು ಸೇರಿ ವಿವಿಧ ಸಂಘಟನೆಗಳು ಒಟ್ಟುಗೂಡಿಸಿ ಆಡಳಿತ ಚಟುವಟಿಕೆ ಕಾರ್ಯವನ್ನು ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಲಾಗುವುದು ಎಂದು ಸರ್ಕಾರಕ್ಕೆ ಅಮೃತ್‌ರಾಜ್ ಎಚ್ಚರಿಕೆ ನೀಡಿದ್ದಾರೆ.**

**ಏ.10ಕ್ಕೆ ಸಭೆ:** 7ನೇ ವೇತನ ಜಾರಿಗೆ ತರುವಲ್ಲಿ ಸರ್ಕಾರ ವಿಳಂಭ ಧೋರಣೆ ಖಂಡಿಸಿ ಮುಂದಿನ ತೀರ್ಮಾನ ತೆಗೆದುಕೊಳ್ಳುವ ಬಗ್ಗೆ ಚರ್ಚಿಸಲು ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘ, ಏ.10ರ ಬೆಳಗ್ಗೆ 10.30ಕ್ಕೆ ಬೆಂಗಳೂರಿನ ಬಿಬಿಎಂಪಿ ಅಧಿಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಬಸವ ಭವನದಲ್ಲಿ ಪುರಸಭೆ, ನಗರಸಭೆ, ಪಟ್ಟಣ ಪಂಚಾಯಿತಿ ಸೇರಿ ಇತರೆ ಸಂಘಟನೆಗಳ ಜೊತೆ ಸಭೆ ಆಯೋಜಿಸಿದೆ. ಹೆಚ್ಚಿನ ಸಂಖ್ಯೆಯಲ್ಲಿ ನೌಕರರು ಆಗಮಿಸಿ ವಿವಿಧ ಸಲಹೆಗಳನ್ನು ನೀಡುವಂತೆ ಸಂಘದ ಅಧ್ಯಕ್ಷ ಎ.ಅಮೃತ್‌ರಾಜ್ ಪ್ರಕಟಣೆ ಹೊರಡಿಸಿದ್ದಾರೆ.

# ತುಳಸಿಯನ್ನು ಈ ರೀತಿ ಫೇಸ್‌ಪ್ಯಾಕ್ ಮಾಡಿ

ತುಳಸಿಯನ್ನು ಪವಿತ್ರವೆಂದು ಪೂಜಿಸಲ್ಪಡುತ್ತದೆ. ಇದು ಕೇವಲ ಪೂಜಿಸುವುದು ಮಾತ್ರವಲ್ಲದೆ ಇದರಲ್ಲಿ ಅನೇಕ ಔಷಧೀಯ ಗುಣಗಳಿವೆ. ತುಳಸಿಯನ್ನು ಎಲ್ಲಾ ಕಡೆಯಲ್ಲಿಯೂ ಸಾಮಾನ್ಯವಾಗಿ ಬಳಸಲಾಗುತ್ತದೆ. ಅದರಂತೆ, ತ್ವಚೆಯ ಆರೈಕೆಯಲ್ಲಿಯೂ ಇದು ಅತ್ಯಂತ ಪ್ರಯೋಜನಕಾರಿಯೆನಿಸಿದೆ. ತ್ವಚೆಯನ್ನು ಸುಂದರಗೊಳಿಸುವಲ್ಲಿ ತುಳಸಿಯನ್ನು ಯಾವ ರೀತಿಯಾಗಿ ಉಪಯೋಗಿಸಬಹುದು ನೋಡೋಣ. ಹಿಂದುಗಳಲ್ಲಿ ಪವಿತ್ರವೆಂದು ಪೂಜಿಸಲ್ಪಡುವ ತುಳಸಿಯು ತನ್ನ ಔಷಧೀಯ ಗುಣಗಳಿಂದಲೂ ಪ್ರಸಿದ್ದಿಯಾಗಿದೆ. ಆಯುರ್ವೇದದಲ್ಲಿ ಇದಕ್ಕೆ ಮಹತ್ವದ ಸ್ಥಾನವಿದೆ.



**ಹಚ್ಚಿ ನಿಮ್ಮ ತ್ವಚೆಯ ಸೌಂದರ್ಯ ಹೆಚ್ಚಿಸಿ!**

ನ್ಯಾಷನಲ್ ಲೈಬ್ರರಿ ಆಫ್ ಮೆಡಿಸಿನ್ ಪ್ರಕಾರ, ತುಳಸಿಯು ಚರ್ಮದ ಹಲವಾರು ಸಮಸ್ಯೆಗಳ ವಿರುದ್ಧ ಕೆಲಸ ಮಾಡುತ್ತದೆ. ತುಳಸಿಯು ಬ್ಯಾಕ್ಟೀರಿಯಾ ವಿರೋಧಿ ಉರಿಯೂತ ನಿವಾರಕ ಮತ್ತು ಉತ್ಕರ್ಷಣ ನಿರೋಧಕ ಗುಣಗಳನ್ನು ಹೊಂದಿದ್ದು, ಇದು ಚರ್ಮದ ಸಮಸ್ಯೆಗಳ ವಿರುದ್ಧ ಅತ್ಯುತ್ತಮ ಚಿಕಿತ್ಸೆಯನ್ನು ನೀಡುವಲ್ಲಿ ಉಪಯೋಗಕಾರಿಯಾಗಿದೆ. ಮೊಡವೆ, ಒಣಚರ್ಮ ಅಥವಾ ಯಾವುದೇ ಇತರ ಚರ್ಮದ ಸಮಸ್ಯೆಗಳನ್ನು ಎದುರಿಸುತ್ತಿದ್ದರೆ, ನಿಮ್ಮ ಚರ್ಮದ ಆರೈಕೆ ದಿನಚರಿಯಲ್ಲಿ ತುಳಸಿಯನ್ನು ಸೇರಿಸಿಕೊಳ್ಳುವುದರಿಂದ ಅವುಗಳನ್ನು ಪರಿಣಾಮಕಾರಿಯಾಗಿ ಚಿಕಿತ್ಸೆ ನೀಡಲು ನಿಮಗೆ ಸಹಾಯವಾಗುತ್ತದೆ.

**ತುಳಸಿ ಫೇಸ್ ಟೋನರ್:** ಮೇಕಪ್ ಮಾಡುವ ಮೊದಲು ಮತ್ತು ಮೇಕಪ್ ತೆಗೆದ ನಂತರ ತುಳಸಿ ಅತ್ಯುತ್ತಮ ಫೇಸ್ ಟೋನರ್ ಆಗಿ ಕೆಲಸ ಮಾಡುತ್ತದೆ. ಮನೆಯಲ್ಲಿ ತುಳಸಿ ಟೋನರ್ ಅನ್ನು ಹೇಗೆ ತಯಾರಿಸಬಹುದು ಎಂಬುದು ಇಲ್ಲಿದೆ:

**ಹಂತ 1:** ಕೆಲವು ತುಳಸಿ ಎಲೆಗಳನ್ನು ಗಿಡದಿಂದ ಕಿತ್ತುಕೊಳ್ಳಿ.
**ಹಂತ 2:** ಈಗ ಒಂದು ಕಪ್ ನೀರನ್ನು ಕುದಿಸಿ ಅದಕ್ಕೆ ತುಳಸಿ ಎಲೆಗಳನ್ನು ಸೇರಿಸಿ. **ಹಂತ 3 :** ನೀರನ್ನು ಸ್ವಲ್ಪ ತಣ್ಣಗಾಗಲು ಬಿಡಿ ಮತ್ತು ನಂತರ ಎಲೆಗಳನ್ನು ಸೋಸಿ.
ಹಂತ 4: ದ್ರವವನ್ನು ಸ್ಪ್ರೇ ಬಾಟಲಿಯಲ್ಲಿ ತುಂಬಿಸಿ ಮೇಕಪ್ ತೆಗೆಯುವ ಮೊದಲು ಅಥವಾ ನಂತರ ನಿಮ್ಮ ಮುಖ ಮತ್ತು ಕುತ್ತಿಗೆಗೆ ಹಚ್ಚಿ.

**ತುಳಸಿ ಮತ್ತು ನಿಂಬೆಯ ಫೇಸ್ ಪ್ಯಾಕ್**

**ತುಳಸಿಯನ್ನು ನಿಂಬೆಯೊಂದಿಗೆ ಬೆರೆಸಿ ಫೇಸ್ ಪ್ಯಾಕ್ ಆಗಿ ಬಳಸಬಹುದು. ಫೇಸ್ ಪ್ಯಾಕ್ ಹೀಗೆ ಮಾಡಿ**
**ಹಂತ 1 : ಒಂದು ಟೇಬಲ್ ಸ್ಪೂನ್ ತುಳಸಿ ಪುಡಿಯನ್ನು ಒಂದು ಬೌಲ್ ನಲ್ಲಿ ತೆಗೆದುಕೊಳ್ಳಿ**



**ಹಂತ 2: ಇದಕ್ಕೆ ಒಂದು ಟೇಬಲ್ ಸ್ಪೂನ್ ನಷ್ಟು ತಾಜಾ ನಿಂಬೆ ರಸವನ್ನು ಅದಕ್ಕೆ ಬೆರೆಸಿ.**
**ಹಂತ 3 : ಈ ಸಾಮಗ್ರಿಗಳನ್ನು ಚೆನ್ನಾಗಿ ಮಿಶ್ರಣಮಾಡಿ**
**ಹಂತ 4: ಈ ಫೇಸ್ ಪ್ಯಾಕ್ ಅನ್ನು ನಿಮ್ಮ ಮುಖ ಮತ್ತು ಕತ್ತಿನ ಭಾಗಗಳಿಗೆ ಸಮನಾಗಿ ಹಚ್ಚಿ 10-15 ನಿಮಿಷಗಳ ಕಾಲ ಹಾಗೆ ಒಣಗಲು ಬಿಡಿ**

# ನಾರಾಯಣ ಹೆಲ್ತ್ ಸಿಟಿಯಲ್ಲಿ ಸಂಪೂರ್ಣ ಹಿಮ್ಮಡಿ ಬದಲಿ ಶಸ್ತ್ರಚಿಕಿತ್ಸೆ ಯಶಸ್ವಿ

## ಯಶಸ್ವಿಯಾಗಿ ಶಸ್ತ್ರಚಿಕಿತ್ಸೆಗೊಳಗಾದ ರೋಗಿಯ ಹೆಸರು ಜಸಿಂತಾ ಆಗ್ನೆಸ್ ಮಸ್ಕರೇನ್ಹಸ್

• ಉದಯವಾಹಿನಿ,ಬೆಂಗಳೂರು

ನಾರಾಯಣ ಹೆಲ್ತ್ ಸಿಟಿ ಬೆಂಗಳೂರಿನಲ್ಲಿ ಇದೇ ಮೊದಲ ಬಾರಿಗೆ ಹೊಸ ಪೀಳಿಗೆಯ ಮೊಬೈಲ್ ಬೇರಿಂಗ್ ಸಂಪೂರ್ಣ ಹಿಮ್ಮಡಿ ಬದಲಿ (TAR - ಟೋಟಲ್ ಆಂಕಲ್ ರಿಪ್ಲೇಸ್ಮೆಂಟ್) ಶಸ್ತ್ರ ಚಿಕಿತ್ಸೆಯನ್ನು ಯಶಸ್ವಿಯಾಗಿ ನಿರ್ವಹಿಸಿದೆ. ಇದು ಹಿಮ್ಮಡದ ಸಂಧಿವಾತದಿಂದ ಬಳಲುತ್ತಿರುವ ರೋಗಿಗಳಿಗೆ ಹೊಸ ಭರವಸೆಯನ್ನು ನೀಡಿದೆ. ಬೆಂಗಳೂರಿನ ನಾರಾಯಣ ಹೆಲ್ತ್ ಸಿಟಿಯಲ್ಲಿ ಮೂಳೆ ಶಸ್ತ್ರಚಿಕಿತ್ಸಕ ಮತ್ತು ಪಾದ ಮತ್ತು ಹಿಮ್ಮಡಿ ತಜ್ಞ ಡಾ. ಶೇಖರ್ ಮುದ್ರಾಮಯ್ಯ ನೇತೃತ್ವದಲ್ಲಿ ನಡೆದ ಈ ಶಸ್ತ್ರಚಿಕಿತ್ಸೆಯಿಂದ ಹಲವು ವರ್ಷಗಳಿಂದ ತೀವ್ರವಾದ ನೋವು ಮತ್ತು ಹೆಜ್ಜೆ ಹಾಕಲು ಪರದಾಡುತ್ತಿದ್ದ 64 ವರ್ಷದ ಮಹಿಳೆಯೊಬ್ಬರು ಸಂಪೂರ್ಣವಾಗಿ ಗುಣಮುಖರಾಗಿ ದೈನಂದಿನ ಜೀವನ ನಡೆಸುತ್ತಿದ್ದಾರೆ.

ಈ ನವೀನ ಚಿಕಿತ್ಸಾ ವಿಧಾನವು ಮೂಳೆಚಿಕಿತ್ಸಾ ಆರೈಕೆಯಲ್ಲಿ ಹೊಸ ಶಕೆ ಆಗಿದೆ, ಒಂದು ಕಾಲದಲ್ಲಿ ಭಾರತದಲ್ಲಿ ಅಪರೂಪವೆಂದು ಪರಿಗಣಿಸಲಾಗಿದ್ದ ಈ ಸುಧಾರಿತ ಚಿಕಿತ್ಸೆ ಈಗ ಇಲ್ಲಿ ಯಶಸ್ವಿಯಾಗಿದೆ ಮತ್ತು ರೋಗಿಗಳು ನೋವು ರಹಿತ ಚಲನೆ ಮತ್ತು ಸುಧಾರಿತ ಜೀವನ ನಡೆಸಲು ನಡೆಸಬಹುದೆಂದು ಈ ಶಸ್ತ್ರಚಿಕಿತ್ಸೆ ಸಾಬೀತುಪಡಿಸಿದೆ.


ಉದಯವಾಹಿನಿ ಚಿತ್ರ

ಆದಾಗ್ಯೂ, ಭಾರತದಲ್ಲಿ ಈ ಶಸ್ತ್ರಚಿಕಿತ್ಸೆಯನ್ನು ನಿರ್ವಹಿಸಲು ಸಾಕಷ್ಟು ಸವಾಲುಗಳಿವೆ. ಶಸ್ತ್ರಚಿಕಿತ್ಸೆಗೆ ಅಗತ್ಯವಾದ ವಿಶೇಷ ಇಂಪ್ಲಾಂಟ್‌ಗಳು ಸ್ಥಳೀಯವಾಗಿ ಲಭ್ಯವಿಲ್ಲ, ಭಾರತದ ಔಷಧ ನಿಯಂತ್ರಣ ಪ್ರಾಧಿಕಾರದಿಂದ ಅಗತ್ಯ ಅನುಮೋದನೆಗಳನ್ನು ಪಡೆದ ನಂತರ ಅಮೆರಿಕ ಮತ್ತು ನೆದರ್‌ಲ್ಯಾಂಡ್ಸ್‌ನಿಂದ ಪಡೆಯಬೇಕಾಯಿತು. ಈ ಅಡೆತಡೆಗಳ ಹೊರತಾಗಿಯೂ, ನಾರಾಯಣ ಹೆಲ್ತ್ ಸಿಟಿಯ ತಂಡವು ಈ ಮಹತ್ವದ ಕಾರ್ಯವಿಧಾನಕ್ಕೆ ಎಲ್ಲಾ ವೂ ಸಿದ್ಧವಾಗಿದೆ ಎಂದು ಖಚಿತಪಡಿಸಿಕೊಂಡಿತು. ಶಸ್ತ್ರಚಿಕಿತ್ಸೆಗೆ ಒಳಗಾದ ಮಹಿಳೆ ಒಂದು ದಿನದೊಳಗೆ, ಸಹಾಯದೊಂದಿಗೆ ನಡೆಯಲು ಪ್ರಾರಂಭಿಸಿದರು. ಎರಡು ವಾರಗಳ ನಂತರ, ಅವರ ಶಸ್ತ್ರಚಿಕಿತ್ಸೆಯ ಗಾಯವು ಸಂಪೂರ್ಣವಾಗಿವಾಸಿಯಾಯಿತು. ಆರು ವಾರಗಳಲ್ಲಿ, ಅವರು ಸ್ವತಂತ್ರವಾಗಿ ನಡೆಯಲು ಪ್ರಾರಂಭಿಸಿದರು.




- **ಬೆಂಗಳೂರಿನಲ್ಲಿ ವೈದ್ಯಕೀಯ ಪ್ರಥಮ ಮೈಲಿಗಲ್ಲು: ನಾರಾಯಣ ಹೆಲ್ತ್ ಸಿಟಿಯ ಈ ಶಸ್ತ್ರಚಿಕಿತ್ಸೆಯಿಂದ ನೋವು ರಹಿತವಾಗಿ ಮತ್ತೆ ಹೆಜ್ಜೆ ಹಾಕಿದ 64 ವರ್ಷದ ಮಹಿಳೆ**
- **ಭಾರತೀಯ ಮೂಳೆಚಿಕಿತ್ಸೆ ಆರೈಕೆಯಲ್ಲಿ ಮಹತ್ತರ ಮೈಲಿಗಲ್ಲು.**
- **ಯಶಸ್ವಿಯಾಗಿ ಶಸ್ತ್ರಚಿಕಿತ್ಸೆಗೊಳಗಾದ ರೋಗಿಯ ಹೆಸರು ಜಸಿಂತಾ ಆಗ್ನೆಸ್ ಮಸ್ಕರೇನ್ಹಸ್.**

ಡಾ. ಶೇಖರ್ ಮುದ್ರಾಮಯ್ಯ, ‘ಮೊಣಕಾಲು ಅಥವಾ ಸೊಂಟದ ಸಂಧಿವಾತದಂತೆ, ಇಮ್ಮಡಿ ಸಂಧಿವಾತದ ಬಗ್ಗೆ ಜನರಿಗೆ ವ್ಯಾಪಕವಾಗಿ ತಿಳಿದಿಲ್ಲದಿರಬಹುದು. ಇಲ್ಲಿಯವರೆಗೆ, ಭಾರತದಲ್ಲಿ ಈ ಸಂಧಿವಾತದಿಂದ ಬಳಲುತ್ತಿರುವ ಹೆಚ್ಚಿನ ರೋಗಿಗಳು ಆಂಕಲ್ ಫ್ಯೂಷನ್ ಎಂಬ ಶಸ್ತ್ರಚಿಕಿತ್ಸೆಗೆ ತೃಪ್ತರಾಗಬೇಕಾಗಿತ್ತು, ಇದು ನೋವನ್ನು ನಿವಾರಿಸುತ್ತದೆ ಆದರೆ ಕಾಲಿನ ಚಲನೆಯನ್ನುಕಡಿಮೆ ಮಾಡುತ್ತದೆ. ಈ ಹೊಸ ಪೀಳಿಗೆಯ ಮೊಬೈಲ್ ಬೇರಿಂಗ್ TAR ಶಸ್ತ್ರಚಿಕಿತ್ಸೆ ಮೂಲಕ ಬೆಂಗಳೂರಿನಲ್ಲಿಯೇ ರೋಗಿಯ ಚಲನೆಯನ್ನು ಸಂರಕ್ಷಿಸುವ ಮೂಲಕ ನೋವಿಲ್ಲದೆ, ನಡೆಯಲು ಸಾಧ್ಯ ಎಂಬುದನ್ನು ಸಾಬೀತುಪಡಿಸಿದ್ದೇವೆ. ಈ ಸುಧಾರಿತ ಇಂಪ್ಲಾಂಟ್‌ಗಳು ಲಭ್ಯವಾಗುವದರಿಂದ, ಇನ್ನೂ ಅನೇಕ ರೋಗಿಗಳು ಬದುಕು ಬದಲಾಯಿಸುವ ಈ ಶಸ್ತ್ರಚಿಕಿತ್ಸೆ ಪ್ರಯೋಜನ ಪಡೆಯಬಹುದು’ ಎಂದರು.

ಶಸ್ತ್ರಚಿಕಿತ್ಸೆಯ ನಂತರ, ಅವರು ತಮ್ಮ ಸಾಮಾನ್ಯ ಸ್ಥಿತಿಗೆ ಮರಳಿದ್ದಾರೆ. ನೋವುರಹಿತ ಜೀವನ ನಡೆಸುತ್ತಿದ್ದು ಮತ್ತು ದೈನಂದಿನ ಕಾರ್ಯಗಳಲ್ಲಿ ಸಕ್ರಿಯರಾಗಿದ್ದಾರೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 03:00 ರಿಂದ 04:30 |
| ಗುಳಿಕ ಕಾಲ | ಮಧ್ಯಾಹ್ನ | 12:00 ರಿಂದ 01:30 |
| ಯಮಗಂಡ ಕಾಲ | ಬೆಳಿಗ್ಗೆ | 09:00 ರಿಂದ 10:30 |

**ಮೇಷ** ಪ್ರವಾಸ-ಪಾರ್ಟಿಗಳು ಮತ್ತು ಆನಂದ ವಿಹಾರಗಳು ಇಂದು ನಿಮ್ಮನ್ನು ಉತ್ತಮ ಮೂಡ್‌ನಲ್ಲಿಡುತ್ತವೆ. ನೀವು ವಿವಾಹಿತರಾಗಿದ್ದರೆ ನಿಮ್ಮ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಿ.

**ವೃಷಭ** ಪ್ರೀತಿಯ ಸಂಗೀತವನ್ನು ಯಾವಾಗಲೂ ಅದರಲ್ಲೇ ಮುಳುಗಿರುವವರು ಕೇಳಬಹುದು. ಇದು ನೀವು ಈ ಪ್ರಪಂಚದ ಎಲ್ಲಾ ಹಾಡುಗಳನ್ನು ಮರೆಯುವಂತೆ ಮಾಡುತ್ತದೆ.

**ಮಿಥುನ** ನಿಮ್ಮ ಹೆತ್ತವರ ಆರೋಗ್ಯದ ಬಗೆಗೆ ಹೆಚ್ಚುವರಿ ಗಮನ ಮತ್ತು ಎಚ್ಚರಿಕೆ ಅಗತ್ಯವಿದೆ. ಪ್ರೀತಿಯ ಜೀವನ ಇಂದು ನಿಜವಾಗಿಯೂ ಸುಂದರವಾಗಿ ಅರಳುತ್ತದೆ. ನಿಮ್ಮ ವಿಶ್ವಾಸ ಬೆಳೆಯುತ್ತಿದೆ.

**ಕರ್ಕಾಟಕ** ಧ್ಯಾನ ಪರಿಹಾರ ತರುತ್ತದೆ. ವ್ಯಾಪರದಲ್ಲಿ ಪ್ರಯೋಜನ ಇಂದು ಅನೇಕ ವ್ಯಾಪಾರಿಗಳ ಮುಖದ ಮೇಲೆ ಸಂತೋಷವನ್ನು ತರಬಹುದು. ನಿಮ್ಮ ಸಂಗಾತಿ ಬೆಂಬಲ ನೀಡುತ್ತಾರೆ ಹಾಗೂ ಸಹಾಯ ಮಾಡುತ್ತಾರೆ.

**ಸಿಂಹ** ಉತ್ತಮ ಜೀವನಕ್ಕಾಗಿ ನಿಮ್ಮ ಆರೋಗ್ಯ ಮತ್ತು ಒಟ್ಟಾರೆ ವ್ಯಕ್ತಿತ್ವವನ್ನು ಸುಧಾರಿಸಲು ಪ್ರಯತ್ನಿಸಿ. ನೀವು ಇಂದು ಗಣನೀಯ ಪ್ರಮಾಣದ ಹಣವನ್ನು ಸಹ ಹೊಂದಿರುತ್ತೀರಿ ಮತ್ತು ಅದರೊಂದಿಗೆ ಮನಸ್ಸಿನ ಶಾಂತಿ ಇರುತ್ತದೆ.

**ಕನ್ಯಾ** ಯಾವುದೇ ಅನುಭವದ ವ್ಯಕ್ತಿಯ ಸಲಹೆ ಇಲ್ಲದೆ, ನಿಮಗೆ ಆರ್ಥಿಕ ನಷ್ಟವಾಗುವ ಯಾವುದೇ ಕೆಲಸವನ್ನು ಮಾಡಬೇಡಿ. ಇತರರ ವ್ಯವಹಾರಗಳಲ್ಲಿ ನಿಮ್ಮ ಮೂಗುತೂರಿಸುವಿಕೆಯನ್ನು ಇಂದು ತಡೆಯಬೇಕು.

**ತುಲಾ** ಆರೋಗ್ಯ ವಿಷಯಗಳಲ್ಲಿ ನಿಮ್ಮ ಬಗ್ಗೆ ನೀವೇ ನಿರ್ಲಕ್ಷ್ಯ ಮಾಡದಂತೆ ಎಚ್ಚರಿಕೆ ವಹಿಸಿ. ಮನೆಯ ಸಣ್ಣ ವಸ್ತುಗಳ ಮೇಲೆ ನಿಮ್ಮ ಸಾಕಷ್ಟು ಹಣ ಹಾಳಾಗಬಹುದು, ಇದರ ಕಾರಣದಿಂದ ನೀವು ಮಾನಸಿಕ ಒತ್ತಡಗೊಳಗಾಗಬಹುದು.

**ವೃಶ್ಚಿಕ** ಅನಂತ ಜೀವನದ ಉತ್ಕೃಷ್ಟ ವೈಭವವನ್ನು ಆನಂದಿಸಲು ನಿಮ್ಮ ಜೀವನವನ್ನು ಹೆಚ್ಚು ಭವ್ಯಗೊಳಿಸಿ. ಚಿಂತೆಯ ಅನುಪಸ್ಥಿತಿ ಈ ದಿಕ್ಕಿನಲ್ಲಿ ಮೊದಲ ಹೆಜ್ಜೆ. ಜೀವನದಲ್ಲಿ ಹಣದ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದಿಲ್ಲ.

**ಧನಸ್ಸು** ಅನಾವಶ್ಯಕವಾಗಿ ವಾದ ಮಾಡಿ ನಿಮ್ಮ ಶಕ್ತಿಯನ್ನು ವ್ಯರ್ಥ ಮಾಡಬೇಡಿ. ನೀವು ಒಂದು ವಾದದಿಂದ ಏನನ್ನೂ ಪಡೆಯದಿದ್ದರೂ ಏನಾದರೂ ಕಳೆದುಕೊಳ್ಳುತ್ತೀರೆಂದು ನೆನಪಿಟ್ಟುಕೊಳ್ಳಿ.

**ಮಕರ** ಒತ್ತಡದ ದಿನದ ಹೊರತಾಗಿಯೂ ಆರೋಗ್ಯ ಪರಿಪೂರ್ಣವಾಗಿರುತ್ತದೆ. ನಿಮ್ಮ ಜೀವನ ಸಂಗಾತಿಯೊಂದಿಗೆ ಹಣದ ಯಾವುದೇ ವಿಷಯದ ಬಗ್ಗೆ ಇಂದು ನಿಮ್ಮ ಜಗಳವಾಗಬಹುದು.

**ಕುಂಭ** ಕುಟುಂಬದ ಸದಸ್ಯರೊಂದಿಗೆ ವಿಶ್ರಾಂತಿಯ ಕ್ಷಣಗಳನ್ನು ಕಳೆಯಿರಿ. ನಿಮ್ಮ ಧೈರ್ಯ ಪ್ರೀತಿಯನ್ನು ಗೆಲ್ಲಬಹುದು. ಪ್ರಮುಖ ವ್ಯಾಪಾರ ಸಮಾಲೋಚನೆಯ ಬಗ್ಗೆ ಮಾತನಾಡುವಾಗ ನಿಮ್ಮ ಭಾವನೆಗಳನ್ನು ನಿಯಂತ್ರಣದಲ್ಲಿಡಿ.

**ಮೀನ** ಪಾರ್ಟಿ ನೀಡಲು ಯೋಜಿಸುತ್ತಿದ್ದಲ್ಲಿ ನಿಮ್ಮ ಎಲ್ಲಾ ಒಳ್ಳೆಯ ಸ್ನೇಹಿತರನ್ನು ಆಮಂತ್ರಿಸಿ. ನಿಮ್ಮನ್ನು ಅಸ್ತುಷ್ಟಗೊಳಿಸುವ ಬಹಳಷ್ಟು ಜನರಿರುತ್ತಾರೆ. ಪ್ರೀತಿಪಾತ್ರರು ನಿಮ್ಮನ್ನು ಸಂತೋಷವಾಗಿರಿಸಲು ಕೆಲಸಗಳನ್ನು ಮಾಡುತ್ತಾರೆ.

## ಕಿರು ನಾಟಕ ಪ್ರಥಮ ರಾಜ್ಯ ಮಟ್ಟಕ್ಕೆ ಆಯ್ಕೆ

• ಉದಯವಾಹಿನಿ ಗದಗ

ಸರಕಾರಿ ನೌಕರರರ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು ಕೆ ಎಚ್ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ದಿನಾಂಕ 22ಹಾಗೂ 23ಮಾರ್ಚದಂದು ನೆರವೇರಿದವು ಇದರಲ್ಲಿ ಭಾಗವಹಿಸಿದ ಮುಂಡರಗಿ ತಾಲ್ಲೂಕಿನ ಸರಕಾರಿ ನೌಕರರ ದಾರ್ಶನಿಕ ಕಲಾ ತಂಡದಿಂದ ಕಿರುನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಗಳಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಯಿತು,

ಸ.ಹಿ.ಪ್ರಾ. ಶಾಲೆ ಮಲ್ಲಿಕಾರ್ಜುನಪುರದ ಮುಖ್ಯ ಗುರುಗಳಾದ ಶರಣಪ್ಪ ಕಲಾಲರವರು ರಚಿಸಿ ನಿರ್ದೇಶನ ಮಾಡಿದ ಗುರುವಾಜ್ಞೆ ಮೀರಿದ ಭಕ್ತ ಎಂಬ ಪೌರಾಣಿಕ ಕಿರುನಾಟಕ ನಿರ್ಣಾಯಕರ ಹಾಗೂ ನೆರೆದ ಪ್ರೇಕ್ಷಕರ ಮನ ಗೆದ್ದಿತು, ಈ ನಾಟಕದಲ್ಲಿ ಶ್ರೀ ರಾಮನ ಪಾತ್ರದದಲ್ಲಿ ವಿಶ್ವನಾಥ ಉಳ್ಳಾಗಡ್ಡಿ, ಶುಕ್ರಾಚಾರ್ಯರ ಪಾತ್ರದಲ್ಲಿ ಶಾಂತಪ್ಪ ಅರಿಶಿಣದ, ಜಾಂಬವಂತನ ಪಾತ್ರದಲ್ಲಿ ಬಸೇಗೌಡರು,ಸಲಕ್ಷ್ಮಣನ ಪಾತ್ರದಲ್ಲಿ ನಾಗರಾಜ ಹಳ್ಳಿ ರಾವಣನ ಪಾತ್ರದಲ್ಲಿ ಶ್ರೀ ಈರಪ್ಪ ಸೊರಟೂರ, ಮಂಡೋದರಿಯ ಪಾತ್ರದಲ್ಲಿ ಕು. ಕ್ಲೇರಾ, ಸುಗ್ರೀವನ ಪಾತ್ರದಲ್ಲಿ ಮಹಾಂತೇಶ, ಹನುಮಂತನ ಪಾತ್ರದಲ್ಲಿ ನಿಡಗುಂದಿ, ಸೀತೆಯ ಪಾತ್ರದಲ್ಲಿ ಶ್ರೀಮತಿ ಮುಕ್ತಾ,


ಉದಯವಾಹಿನಿ ಚಿತ್ರ

ಅಭಿನಯಿಸಿದರು. ಪ್ರಶಸ್ತಿ ಪ್ರದಾನವನ್ನು ಡಾ ಶರಣು ಗೋಗೇರಿ, ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಗದಗ ಹಾಗೂ ರವಿ ಎಲ್ ಗುಂಜೀಕರ ರಾಜ್ಯ ಹಿರಿಯ ಉಪಾಧ್ಯಕ್ಷರು ಹಾಗೂ ಜಿಲ್ಲಾ ಅಧ್ಯಕ್ಷರು ರಾಜ್ಯ ಸರಕಾರಿ ನೌಕರರ ಸಂಘ ಗದಗರವರು ವಿತರಿಸಿದರು.

ಪ್ರಸ್ತುತ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿ ಇರಬೇಕಾದ ಶಿಸ್ತು,ಶ್ರದ್ಧೆ, ತಾಳ್ಮೆ ಮತ್ತು ಅಚಲ ನಂಬಿಕೆಗೆ ಪ್ರೇರಣೆ ನೀಡಬಲ್ಲ ಕಿರುನಾಟಕ ಪ್ರದರ್ಶಿಸಿದ್ದಕ್ಕಾಗಿ ಮುಂಡರಗಿ ತಾಲ್ಲೂಕಿನ ಸರಕಾರಿ ನೌಕರರ ಸಂಘದ ಅಧ್ಯಕ್ಷರಾದ ನಾಗರಾಜ ಹಳ್ಳಿಕೇರಿಯವರು ಇಡೀ ತಂಡವನ್ನು ಅಭಿನಂದಿಸಿದರು.

### ಬಸವಾದಿ ಶರಣರು ರಚಿಸಿದ ವಚನಗಳು ಎಲ್ಲಾ ಕ್ಷೇತ್ರಗಳಿಗೂ ಅನ್ವಯಿಸುತ್ತವೆ

## ಜಾಗತಿಕ ಸಮಸ್ಯೆಗಳಿಗೆ ಬಸವ ತತ್ವವೇ ಪರಿಹಾರ: ರಹಿಂಖಾನ್

• ಉದಯವಾಹಿನಿ ಬೀದರ

ಜಾಗತಿಕ ಸಮಸ್ಯೆಗಳಿಗೆ ಬಸವ ತತ್ವವೇ ಪರಿಹಾರವಾಗಿದೆ. ಬಸವಾದಿ ಶರಣರು ರಚಿಸಿದ ವಚನಗಳು ಎಲ್ಲಾ ಕ್ಷೇತ್ರಗಳಿಗೂ ಅನ್ವಯಿಸುತ್ತವೆ. ಎಲ್ಲಾ ಧರ್ಮಗಳಲ್ಲೂ ದೇವರು ಒಬ್ಬನೆ ಎಂಬ ನಂಬಿಕೆಯಿದೆ. ಪರಸ್ಪರ ಸಾಮರಸ್ಯದಿಂದ ಬದುಕುವುದು ಇಂದಿನ ಅವಶ್ಯಕತೆಯಿದೆ ಎಂದು ಪೌರಾಡಳಿತ ಮತ್ತು ಹಜ್ ಸಚಿವ ರಹಿಂಖಾನ್ ತಿಳಿಸಿದರು. ನಗರದ ಪಾಪನಾಶ ಗೇಟ್ ಸಮೀಪದ ಸ್ವಾಮಿ ಸಮರ್ಥ ಕಲ್ಯಾಣ ಮಂಟಪದಲ್ಲಿ ರಾಷ್ಟ್ರೀಯ ಬಸವ ದಳ, ಲಿಂಗಾಯತ ಧರ್ಮ ಮಹಾಸಭಾ, ಅಕ್ಕನಾಗಲಾಂಬಿಕಾ ಮಹಿಳಾ ಗಣ ಹಾಗೂ ಲಿಂಗಾಯತ ಸಮಾಜದ ವತಿಯಿಂದ ಜರುಗಿದ ಲಿಂಗಾಯತ ಧರ್ಮದ ಮಹಾದಂಡನಾಯಕರ ಸ್ಮರಣೋತ್ಸವದ ಸಮಾರೋಪ ಸಮಾರಂಭವನ್ನುದ್ದೇಶಿಸಿ ಮಾತನಾಡಿದರು.

ದಿವ್ಯ ಸಾನಿಧ್ಯ ವಹಿಸಿದ್ದ ಪೂಜ್ಯ ಶ್ರೀ ಜಗದ್ಗುರು ಡಾ. ಚನ್ನಬಸವಾನಂದ ಸ್ವಾಮೀಜಿ ಮಾತನಾಡಿ ಬೀದರ ಜಿಲ್ಲೆ ಇದು ರಾಷ್ಟ್ರೀಯ ಬಸವ ದಳದ ತವರೂರು ಎಂದು ಮಾತೆ ಮಹಾದೇವಿಯವರು ಯಾವಾಗಲೂ ಹೇಳುತ್ತಿದ್ದರು.

ಇಂತಹ ದಳವನ್ನು ಮತ್ತೆ ದೇಶದಾದ್ಯಂತ ಸಂಘಟಿಸುವುದು ನಮ್ಮ ಗುರಿಯಾಗಬೇಕು. ಪರಸ್ಪರ ವೈಮನಸ್ಸು, ಭಿನ್ನಾಭಿಪ್ರಾಯ ಮತ್ತು


ಉದಯವಾಹಿನಿ ಚಿತ್ರ

> ಪೂಜ್ಯ ಮಾತೆ ಮಹಾದೇವಿಯವರು ಬದುಕಿದ್ದಾಗ ಅವರು ನೀಡಿದ ಸಲಹೆಗಳು ಇಂದಿಗೂ ನನಗೆ ನೆನಪಿದೆ. ಬಸವ ತತ್ವವನ್ನು ಅತ್ಯಂತ ಉತ್ತುಂಗ ಶಿಖರಕ್ಕೆ ಕೊಂಡೊಯ್ದ ಕೀರ್ತಿ ಅವರಿಗೆ ಸಲ್ಲುತ್ತದೆ. ಬೀದರ ನಗರದಲ್ಲಿ ರಾಷ್ಟ್ರೀಯ ಬಸವ ದಳವನ್ನು ಗಟ್ಟಿಯಾಗಿ ನೆಲೆಯೂರಲು ಮಾತಾಜಿ ಕಾರಣರಾಗಿದ್ದಾರೆ. ಅವರ ಮಾರ್ಗದಲ್ಲಿ ಪೂಜ್ಯ ಚನ್ನಬಸವಾನಂದ ಸ್ವಾಮೀಜಿ ಹಾಗೂ ಶರಣರೆಲ್ಲರೂ ಸಾಗುತ್ತಿರುವುದು. ಗುರುವಿನ ಋಣ ತೀರಿಸಲು ಇಂತಹ ಅರ್ಥಪೂರ್ಣ ಕಾರ್ಯಕ್ರಮ ಆಯೋಜಿಸಿರುವುದು ಸಂತಸ ತಂದಿದೆ -ಸಚಿವ ರಹಿಂಖಾನ್

ಸಾಮಾಜಿಕ ಜಾಲತಾಣಗಳಲ್ಲಿ ಮನಸ್ಸುಗಳು ಒಡೆಯುವ ಬರಹಗಳನ್ನು ಬರೆಯಲು ಯಾರೂ ಆಸ್ಪದ ಕೊಡಬಾರದು. ಸಂಘಟನೆಯ ಕಡೆಗೆ ಗಮನ ಹರಿಸಬೇಕೆಂದು ತಿಳಿಸಿದರು.

ಏಳನೆಯ ಮಹಾದಂಡನಾಯಕರ ಸ್ಮರಣೋತ್ಸವ ಗಂಗಾವತಿಯಲ್ಲಿ ದಳದ ವತಿಯಿಂದ ಆಯೋಜಿಸಲು ಒಪ್ಪಿಕೊಂಡಿದ್ದಾರೆ. ಅವರಿಗೆ ಧ್ವಜ ಹಸ್ತಾಂತರ ಮಾಡಲಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಹಾಗೂ ಸ್ವಾಗತ ಸಮಿತಿಯ ಅಧ್ಯಕ್ಷರಾದ ಡಾ. ಶೈಲೇಂದ್ರ ಬೆಲ್ದಾಳೆ ವಹಿಸಿದ್ದರು. ಮೆರವಣಿಗೆಯಲ್ಲಿ ಸಂಸದ ಸಾಗರ ಖಂಡ್ರೆಯವರು ಪಾಲ್ಗೊಂಡಿದ್ದರು. ಯುವಕರ ಜೊತೆ ಭರ್ಜರಿ ಹೆಜ್ಜೆ ಹಾಕಿದರು.

ಧಾರವಾಡ ಸುಜಾತಾ ಯರಗಟ್ಟಿ ಅವರಿಗೆ ಬಸವಾತ್ಮಜೆ ಪ್ರಶಸ್ತಿ ಹಾಗೂ ಖಿವಟಕೊಪ್ಪದ ರಾಷ್ಟ್ರೀಯ ಬಸವ ದಳದ ಹಿರಿಯ ಶರಣ ಅಶೋಕ ನಾವಿ ಅವರನ್ನು ಲಿಂಗಾನಂದ ಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

> ಮಾತೆ ಮಹಾದೇವಿಯವರು ಬೀದರನಲ್ಲಿ ಪ್ರವಚನ ಮಾಡುವ ಸಂದರ್ಭದಲ್ಲಿ ನಾನೂ ಕೂಡಾ ಕೆಲಕಾಲ ಕಾರ್ಯಕರ್ತನಾಗಿ ದುಡಿದಿದ್ದೆ. ಅವರ ಅಭಿನಂದನಾ ಸಮಾರಂಭ ಬೀದರನಲ್ಲಿ ನೆರವೇರಿಸಿ ಋಣ ತೀರಿಸುವ ಅವಕಾಶ ನನಗೂ ಸಿಕ್ಕಿದ್ದು ಸೌಭಾಗ್ಯ. ಬಸವ ತತ್ವವನ್ನು ವಿಶ್ವದಾದ್ಯಂತ ಪಸರಿಸಲು ಎಲ್ಲರೂ ಒಗ್ಗೂಡಿ ಸಾಗುವ ಅವಶ್ಯಕತೆ
> -ಬಾಬು, ಭಾರತೀಯ ಬಸವ ಬಳಗದ ರಾಜ್ಯಾಧ್ಯಕ್ಷ

ಮಂಡ್ಯದ ಶಿವು ಜನ್ನ ಹಾಗೂ ದೇವದುರ್ಗದ ಪುಟಾಣಿ ವಿನಾಯಕ ಗಾಯನ ಸಭಿಕರ ಮನಗೆಲ್ಲುವಂತೆ ಮಾಡಿತು. ಗಾಂಧಿನಗರದ ಪುಟಾಣಿ ಮಕ್ಕಳು ವಚನ ನೃತ್ಯ ನಡೆಸಿಕೊಟ್ಟರು.

ಸಮ್ಮುಖ ವಹಿಸಿದ್ದ ಪೂಜ್ಯ ಶ್ರೀ ಮಾತೆ ಸತ್ಯಾದೇವಿಯವರು ಆಶೀರ್ವಚನ ಮಾಡಿದರು.

## ಮನೆಯವರಂತೆ ನಟಿಸಿ ವೃದ್ಧೆಯ ಚಿನ್ನಾಭರಣ ಕದ್ದೊಯ್ದ ಕಳ್ಳ

• ಉದಯವಾಹಿನಿ ಕುಂದಾಪುರ

ಮನೆಯಲ್ಲಿ ಯಾರೂ ಇಲ್ಲದ ವೇಳೆ ಬಾಗಿಲು ಮುರಿದು ಒಳಪ್ರವೇಶಿಸಿದ ಕಳ್ಳನೋರ್ವ ವೃದ್ಧೆಯೊಂದಿಗೆ ಮನೆಯವರಂತೆ ಮಾತನಾಡಿ ಆಕೆಯ ಚಿನ್ನಾಭರಣ ಕದ್ದು ಪರಾರಿಯಾದ ಘಟನೆ ಕೋಟ ಪೊಲೀಸ್ ಠಾಣೆ ವ್ಯಾಪ್ತಿಯ ಮಣೂರಿನಲ್ಲಿ ನಡೆದಿದೆ.

ರುದ್ರಮ್ಮ(92) ಚಿನ್ನ ಕಳೆದುಕೊಂಡಿರುವ ವೃದ್ಧೆ ಮನೆಯವರೆಲ್ಲ ಸ್ಥಳೀಯ ಕೊಟ್ಟೂರು ದೇಗುಲದ ಜಾತ್ರೆಗೆಂದು ತೆರಳಿದ್ದರು. ಈ ವೇಳೆ ಮನೆಯಲ್ಲಿ ರುದ್ರಮ್ಮ ಒಬ್ಬರೇ ಮನೆಯಲ್ಲಿ ಇದ್ದರು.

ದಿನನಿತ್ಯದಂತೆ ಅವರು ಮಲಗುವಾಗ ತಾನು ಧರಿಸಿದ್ದ ಚಿನ್ನದ ಸರವನ್ನು ಮಂಚದ ಮೇಲೆ ಕಳಚಿಟ್ಟಿದ್ದರು. ಜಾತ್ರೆಗೆ ತೆರಳಿದ್ದ ಅವರ ಅಳಿಯ ಶ್ರೀಧರ್ ಅವರು ದಿಢೀರನೇ ಮನೆಗೆ ಬಂದಿದ್ದು, ಈ ವೇಳೆ ಮನೆಯ ಬಾಗಿಲು ಒಡೆದಿರುವುದು ಕಂಡುಬಂದಿದೆ. ಈ ಬಗ್ಗೆ ರುದ್ರಮ್ಮರನ್ನು ಶ್ರೀಧರ್ ಅವರು ವಿಚಾರಿಸಿದಾಗ ಯಾರೋ ಹುಡುಗ ಬಂದಿದ್ದ. ನನಗೆ ದೃಷ್ಟಿ ದೋಷವಿರುವುದರಿಂದ ಯಾರೆಂದು ತಿಳಿಯಲಿಲ್ಲ.

ನಾನು ನೀವೇ ಬಂದಿರಬಹುದು ಎಂದು ಜಾತ್ರೆ ಮುಗಿಯಿತಾ? ಹೇಗಾಯಿತು ಎಂದು ಆತನಲ್ಲಿ ಕೇಳಿದ್ದೆ. ಆತನೂ ಮನೆಯವರಂತೆಯೇ ಮಾತನಾಡಿದ್ದ ಎಂದು ತಿಳಿಸಿದ್ದರು. ಆಗ ಅನುಮಾನಗೊಂಡ ಶ್ರೀಧರ್ ಅವರು ಪರಿಶೀಲಿಸಿದಾಗ 30 ಗ್ರಾಂ ತೂಕದ ಚಿನ್ನದ ಸರ ಕಳವಾಗಿರುವುದು ತಿಳಿದು ಬಂದಿದೆ.

## ಶ್ರೀ ಶರಣಬಸವೇಶ್ವರ ಜಾತ್ರಾ ಮಹೋತ್ಸವ, ಉಚ್ಚಾಯ, 18 ಜೋಡಿ ಸಾಮೂಹಿಕ ವಿವಾಹಗಳು

• ಉದಯವಾಹಿನಿ ಕಾರಟಗಿ

ತಾಲ್ಲೂಕಿನ ಸೋಮನಾಳ ಶ್ರೀ ಶರಣಬಸವೇಶ್ವರ ಜಾತ್ರಾ ಮಹೋತ್ಸವ,ಉಚ್ಚಾಯ, 18 ಜೋಡಿ ಸಾಮೂಹಿಕ ವಿವಾಹಗಳು ಸಂಭ್ರಮ ಸಡಗರದಿಂದ ಜರುಗಿದವು. ಬೆಳಿಗ್ಗೆಯಿಂದಲೇ ತ್ರಿವಿಧ ದಾಸೋಹಿ ಶ್ರೀ ಶರಣಬಸವೇಶ್ವರ ಅವರಿಗೆ ದೇವಸ್ಥಾನದ ಪ್ರಧಾನ ಅರ್ಚಕರಿಂದ ಅಭಿಷೇಕ ಅಲಂಕಾರ ಅಷ್ಟೋತ್ತರ ನಾಮಾವಳಿ ಹೂವಿನ ಅಲಂಕಾರ ನೂರಾರು ಭಕ್ತಾದಿಗಳಿಂದ ಕಾಯಿ ಕರ್ಪೂರ ನೈವೇದ್ಯ ಸಮರ್ಪಿಸಲಾಯಿತು .

ನಂತರ ಸ್ಥಳೀಯ ಸೋಮನಾಳ ಗ್ರಾಮದ ದಲಿತ ವಿಮೋಚನಾ ಸೇನೆಯ ಪ್ರಧಾನ ಕಾರ್ಯದರ್ಶಿ ಶರಣಪ್ಪ ವಣಗೇರಿ ಅವರ ಸಹೋದರಿ ಉಷಾ ವಣಗೇರಿ ಜೊತೆ ವೀರೇಶ್ ಕೊನ್ನಾಪುರ ಸೇರಿದಂತೆ 18 ಜೋಡಿಗಳಿಗೆ ಸಾಮೂಹಿಕ ವಿವಾಹ ದಲ್ಲಿ ದಿವ್ಯ ಸಾನಿಧ್ಯವಹಿಸಿದ ಹೆಬ್ಬಾಳ ಮಠದ ಶ್ರೀ ಶ್ರೀನಾಗ ಭೂಷಣ ಶಿವಾಚಾರ್ಯ ಮಹಾಸ್ವಾಮಿಗಳು ನವವಧು-ವರರಿಗೆ ಆಶೀರ್ವಚನ ನೀಡಿ ಮಾತನಾಡಿ ಬಡತನದಿಂದ ಕುಟುಂಬ ನಿರ್ವಹಣೆ ದುಸ್ತರವಾಗಿರುವ ದುಬಾರಿ ಯುಗದಲ್ಲಿ ದುಂದುವೆಚ್ಚಕ್ಕೆ ಕಡಿವಾಣ ಹಾಕುವ ಸಾಮೂಹಿಕ ವಿವಾಹಗಳು ಹೆಣ್ಣು ಹೆತ್ತವರ ಕುಟುಂಬಗಳ ಪಾಲಿಗೆ ವರದಾನವಾಗಿವೆ. ಎಂದರು.

ನಿತ್ಯ ಬದುಕಿನಲ್ಲಿ ಸಮಸ್ಯೆಗಳು.ಎದುರಾದಾಗ


ಉದಯವಾಹಿನಿ ಚಿತ್ರ

ತಾಳ್ಮೆ ಹೊಂದಾಣಿಕೆಯಿಂದ ಒಬ್ಬರನೊಬ್ಬರು ಅರಿತು ಜೀವನ ಸಾಗಿಸಬೇಕು. ಅರಿತು ಬಾಳಿದರೆ ಅದೇ ಸ್ವರ್ಗ ಸುಖ . ವರದಕ್ಷಿಣೆಯಂಥ ಪಿಡುಗು ಇನ್ನು ಜೀವಂತವಾಗಿದೆ. ಸಾಮೂಹಿಕ ವಿವಾಹಗಳಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಕಷ್ಟಗಳು ಕಡಿಮೆಯಾಗಿ ನೆಮ್ಮದಿ ದೊರೆತಂತಾಗುತ್ತದೆ ಎಂದರು. ಬಳಿಕ ಸಂಜೆ ಹಸಿರು ತೋರಣಗಳಿಂದ ಬಣ್ಣ ಬಣ್ಣದ ಹೂಗಳಿಂದ ಸಿಂಗರಿಸಿದ ಶ್ರೀ ಶರಣಬಸವೇಶ್ವರ ಉಚ್ಚಾಯಕ್ಕೆ ಊರಿನ ಗುರು ಹಿರಿಯರು ಮತ್ತು ಜನಪ್ರತಿನಿಧಿಗಳಿಂದ ಹಾಗೂ ಹೆಬ್ಬಾಳ ಮಠದ ಶ್ರೀ ನಾಗಭೂಷಣ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಉಚ್ಚಾಯಕ್ಕೆ ವಿಶೇಷ ಪೂಜೆ ಸಲ್ಲಿಸಿ ಚಾಲನೆ ನೀಡಲಾಯಿತು.

ಭಕ್ತಗಳಿಂದ ತಮ್ಮ ಹರಕೆಗಳನ್ನು ಹೊತ್ತು ಉತ್ತತ್ತಿ ಬಾಳೆಹಣ್ಣು ಉಚ್ಚಾಯ ಕ್ಕೆ ಸಮರ್ಪಿಸಿ ಶ್ರೀ ಶರಣಬಸವೇಶ್ವರ ಕೃಪಾಶೀರ್ವಾದಕ್ಕೆ ಪಾತ್ರರಾದರು.

ಬಳಿಕ ನವದಂಪತಿಗಳ ಅರತಕ್ಷತೆ ಕಾರ್ಯಕ್ರಮಕ್ಕೆ ಸಚಿವರ ಪುತ್ರ ಶಶಾಂತ ತಂಗಡಗಿ, ಮೌನೇಶ್ ಧಡೇಸುಗೂರು, ಸೋಮನಾಥ್ ದೊಡ್ಡಮನೆ, ಜಿಲ್ಲಾಧ್ಯಕ್ಷ ಜಮಾದಗ್ನಿ ಚೌಡಕಿ, ಮುಖಂಡ ಗಾಳೆಶ, ಮೈಲಾಪುರ ಗ್ರಾಪಂ ಅಧ್ಯಕ್ಷ ವೀರೇಶ್ ತಳವಾರ್, ದುರ್ಗಪ್ಪ, ಟಿಪಿ ಬಸವರಾಜ್ ತಳವಾರ್, ಯಮನೂರು ಶಿಕ್ಷಕ, ಹನುಮಂತಪ್ಪ ಚಲವಾದಿ, ಸಣ್ಣೆಪ್ಪ ಸಾಹುಕಾರ, ಜಗದೀಶ್ ಹಾಸಗಲ್, ನಾಗರಾಜ್ ವಣಗೇರಿ, ಚಿದಾನಂದಪ್ಪ ಪೂಜಾರಿ, ಮುತ್ತು ಬಳಗಾನೂರು ಗ್ರಾಪಂ,ಸದಸ್ಯ ಹನುಮಂತಪ್ಪ ಕಲ್ಗುಡಿ, ಮುದುಕಪ್ಪ ಕಪಾಟ, ಶಂಕ್ರಮ್ಮ, ಬಸಪ್ಪ,, ಮರಿಯಪ್ಪ ವಣಗೇರಿ, ಬಸಮ್ಮ ವೀರಪುರ ನಿಂಗಮ್ಮ ವೀರಪುರ ಮರಿಯಪ್ಪ ಪೂಜಾರಿ ಹನುಮಂತ ಕೊನ್ನಾಪುರ, ಸಗರಮ್ಮ ದುರ್ಗಮ್ಮ ಕಲ್ಗುಡಿ, ಮರಿಯಮ್ಮ ಗೂಡೂರು, ಹನುಮಂತ ಬಳಗಾನೂರು, ಶಿವೂ ಗುಡೂರು, ಹುಲುಗಪ್ಪ ಗೋನಾಳ್, ಮತ್ತಿತರರಿದ್ದರು.

## ನಾರಾಯಣಪುರ ಕಾಲುವೆಗಳಿಗೆ ನೀರು ಬಂದ್

### ಪ್ರತಿಭಟನೆ ಕೈಬಿಡುವಂತೆ ರೈತರಲ್ಲಿ ಮನವಿ

• ಉದಯವಾಹಿನಿ ಯಾದಗಿರಿ

ಸರ್ಕಾರವು ನಾರಾಯಣಪುರ ಕಾಲುವೆಗಳಿಗೆ ಮಾರ್ಚ್ 25 ರಿಂದ ನೀರು ಬಂದ್ ಮಾಡಿದ ನಿರ್ಧಾರವನ್ನು ಖಂಡಿಸಿ, ಕರ್ನಾಟಕ ರಾಜ್ಯ ರೈತ ಸಂಘ ರೈತ ಸೇನೆ ವತಿಯಿಂದ ಹತ್ತಿಗುಡೂರ್ ಬಳಿಯ ದೇವದುರ್ಗ ಕ್ರಾಸ್ ಹತ್ತಿರ ರಸ್ತೆ ತಡೆಯಲು ಪ್ರತಿಭಟನೆ ನಡೆಸುವುದನ್ನು ಕೈಬಿಡಲು ಅಪರ ಜಿಲ್ಲಾಧಿಕಾರಿಗಳಾದ ಶರಣಬಸಪ್ಪ ಕೋಟೆಪ್ಪಗೋಳ ಅವರು ರೈತ ಮುಖಂಡರಲ್ಲಿ ಮನವಿ ಮಾಡಿದ್ದಾರೆ.

ಈ ಕುರಿತು ಚರ್ಚಿಸಲು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ರಾಜ್ಯ ರೈತ ಸಂಘ, ರೈತ ಸೇನೆ ಮುಖಂಡರೊಂದಿಗೆ ಸಭೆ ನಡೆಸಿ ಅವರು ಮನವಿ ಮಾಡಿದರು.

ರಾಜ್ಯ ಸರ್ಕಾರವು ನಾರಾಯಣಪುರ ಕಾಲುವೆಗಳಿಗೆ ಮಾರ್ಚ್ 25 ರಿಂದ ನೀರು ಬಿಡದಿರುವ ಕ್ರಮವನ್ನು ಕೈಗೊಂಡಿದ್ದು ,ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ, ಬೇಸಿಗೆ ಕಾಲದಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಅಭಾವವನ್ನು ತಪ್ಪಿಸಲು ಸರ್ಕಾರ ಈ


ಉದಯವಾಹಿನಿ ಚಿತ್ರ

ನಿರ್ಣಯವನ್ನು ಕೈಗೊಂಡಿದೆ. ಸಾರ್ವಜನಿಕರ ಹಾಗೂ ಜಾನುವಾರುಗಳ ಹಿತ ದೃಷ್ಟಿಯಿಂದ ಕೈಗೊಳ್ಳಲಾದ ಈ ನಿರ್ಣಯದ ವಿರುದ್ಧವಾಗಿ ಪ್ರತಿಭಟನೆಯನ್ನು ನಡೆಸದಿರಲು ಹಾಗೂ ಪ್ರತಿಭಟನೆ ಕೈಬಿಡುವಂತೆ ಅವರು ಮನವಿ ಮಾಡಿದ್ದಾರೆ.

ಸಭೆಯಲ್ಲಿ ರಾಜ್ಯ ರೈತ ಸಂಘ, ರೈತ ಸೇನೆಯ ರಾಜ್ಯ ಉಪಾಧ್ಯಕ್ಷರಾದ ಲಕ್ಷ್ಮಿಕಾಂತ್ ಪಾಟೀಲ್ ಸೇರಿದಂತೆ ಇತರೆ ಪದಾಧಿಕಾರಿಗಳು ಉಪಸ್ಥಿತರಿದ್ದು, ಈ ಕುರಿತು ಚರ್ಚಿಸಲಾಗಿ, ರೈತ ಮುಖಂಡರು ನೀರು ಬಿಡುವವರೆಗೂ ಪ್ರತಿಭಟನೆಯನ್ನು ಮುಂದುವರಿಸಲಾಗುವುದೆಂದು ಸಭೆಗೆ ತಿಳಿಸಿದರು ಎಂದು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಿವತೀರ್ಥ ಭವನದ ಭೂಮಿಪೂಜೆ

• ಉದಯವಾಹಿನಿ, ಕಲಬುರಗಿ

ಒಂದು ಚಿಕ್ಕ ಕೇಂದ್ರದಿಂದ ಪ್ರಾರಂಭಗೊಂಡ ಈ ಅಧ್ಯಾತ್ಮಿಕ ಚಳುವಳಿ ಕಲಬುರ್ಗಿ ಜಿಲ್ಲೆಯಲ್ಲಿ ಮಾತ್ರವಲ್ಲ ಪಕ್ಕದ ತೆಲಂಗಾಣಾ,ಲಾತೂರ ಜಿಲ್ಲೆಗಳಲ್ಲಿ ಪಸರಿಸಿ ಸಾವಿರಾರು ಜನರ ಜೀವನ ಪರಿವರ್ತನೆಮಾಡುತ್ತಿದೆ. ಇವತ್ತು ಕಾಳಗಿಯಲ್ಲಿ ನೂತನ ಕೇಂದ್ರಕ್ಕಾಗಿ ಭೂಮಿ ಪೂಜೆಮಾಡಲು ಹೆಮ್ಮೆಯಾಗಿದೆ ಎಂದು ಕರ್ನಾಟಕವಿಧಾನ ಪರಿಷತ್ತಿನ ಸದಸ್ಯ ಜಗದೇವ ಗುತ್ತೆದಾರ ನುಡಿದರು.

ಕೆಲ ವರ್ಷಗಳ ಹಿಂದೆ ಇಲ್ಲಿ ಸೇವೆ ಮಾಡಿದ್ದೇವೆ ಆದರೆ ಮನೆ ಸರಿಯಾಗಿ ಸಿಗದೆ ಇರುವದರಿಂದ ನಾವು ನಮ್ಮದೆ ಜಾಗದಲ್ಲಿ ಬೃಹತ್ ಶಿವತೀರ್ಥ ಭವನದ ಭೂಮಿಪೂಜೆ ನೆರವೇರಿಸಿದ್ದೇವೆ. ಅಲ್ಲದೆ ಬರುವ 6-8 ತಿಂಗಳಲ್ಲಿ ಜನರಿಗಾಗಿ ಸುಂದರ ಭವನವನ್ನು ನಿರ್ಮಿಸುತ್ತೇವೆ ಎಂದು ಗುಲಬರ್ಗಾ ಉಪ ವಲಯದ ಮುಖ್ಯಸ್ಥೆ ಬಿ ಕೆ ವಿಜಯದೀದಿಯರು ನುಡಿದರು. ಡಿವೈಎಸ್ ಪಿ ಶರಣವಸವ ಹೀರಾ ಹಾಗೂ ಬ್ರಹ್ಮಾಕುಮಾರಿಸಮಾಜಸೇವಾ ಪ್ರಭಾಗದ ರಾಷ್ಟ್ರೀಯ ಉಪಾಧ್ಯಕ್ಷರಾದ ರಾಜಯೋಗಿ ಪ್ರೇಮರವರು ಮಾತನಾಡಿದರು.


ಉದಯವಾಹಿನಿ ಚಿತ್ರ

## ಉಚಿತ ಆರೋಗ್ಯ ತಪಾಸಣೆ ಶಿಬಿರ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ಕೊರವಿ ದೊಡ್ಡ ತಾಂಡಾದಲ್ಲಿ ಹಮ್ಮಿಕೊಂಡ ಕಾಳಿಕಾದೇವಿಯ 14ನೇ ಜಾತ್ರಾ ಮಹೋತ್ಸವದಲ್ಲಿ ನೇರೆಯ ತೆಲಂಗಾಣ ರಾಜ್ಯದ ತಾಂಡೂರನ ವಿನಾಯಕ ಸುಪರ್ ಸ್ವೇಷಾಲೀಟಿ ಆಸ್ಪತ್ರೆಯ ಸಂಸ್ಥಾಪಕ ವಿಠ್ಠಲ ನಾಯಕ ವೈದ್ಯರ ತಂಡದೊಂದಿಗೆ ಸಿಬ್ಬಂದಿ ವರ್ಗದವರು ಆಗಮಿಸಿ ಕಾಳಿಕಾದೇವಿಯ ಜಾತ್ರೆಯಲ್ಲಿ ಆಗಮಿಸಿ ಭಕ್ತರಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವು ಕಾಳಿಕಾದೇವಿಯ ಮಠದ ಪೀಠಾಧಿಪತಿಗಳಾದ ವಿಠ್ಠಲ ಮಹಾರಾಜರು ಉದ್ಘಾಟನೆ ಮಾಡಿದರು.

ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ ಸುಮಾರು 200ಜನರು ಬಿ.ಪಿ,ಶೂಗರ್,ಜ್ವರ,ಕೆಮ್ಮು,ನೆಗಡಿ,


ಉದಯವಾಹಿನಿ ಚಿತ್ರ

ಸೇರಿದಂತೆ ಮಹಿಳೆಯರು ಸಹ ಆರೋಗ್ಯ ತಪಾಸಣೆಯ ಸದುಪಯೋಗ ಪಡೆದುಕೊಂಡರು ಎಂದು ಉಚಿತ ಆರೋಗ್ಯ ತಪಾಸಣೆ ನೇತೃತ್ವ ವಹಿಸಿದ್ದ ಡಾ.ತುಕ್ಕರಾಮ ಪವ್ವಾರ ತಿಳಿಸಿದ್ದಾರೆ.

ತಪಾಸಣೆ ನಡೆಸಿದ ವೈದ್ಯರು ಡಾ.ಮಾಲಾಶ್ರೀ , ಡಾ.ಆಕಾಂಕ್ಷಿ,ಡಾ.ಸಂತೋಷ ರಾಠೋಡ್,ಶಾರದಾ ಚಿಂಚೋಳಿ ಸೇರಿದಂತೆ ಸಿಬ್ಬಂದಿ ವರ್ಗದವರು ಇದ್ದರು.

## ನಿಜಶರಣ ಅಂಬಿಗರ ಚೌಡಯ್ಯನವರ 45ನೇ ಅದ್ಧೂರಿ ರಥೋತ್ಸವ

• ಉದಯವಾಹಿನಿ ಯಾದಗಿರಿ

ಜಿಲ್ಲೆಯ ವಡಗೇರಾ ತಾಲ್ಲೂಕಿನ ಹಿರೇ ತುಮಕೂರು ಗ್ರಾಮದಲ್ಲಿ ನಿಜ ಶರಣ ಅಂಬಿಗರ ಚೌಡಯ್ಯ ನವರ 45ನೇ ವರ್ಷದ ರಥೋತ್ಸವ ಬಹು ವಿಜೃಂಭಣೆಯಿಂದ ನಿಜಶರಣ ಅಂಬಿಗರ ಚೌಡಯ್ಯನವರ ವಚನಗಳ ಪಠಣದೊಂದಿಗೆ ಸಹಸ್ರಾರು ಜನರ ಮಧ್ಯೆ ರಥೋತ್ಸವ ಜರಗಿತು.

ಬೆಳಿಗ್ಗೆ ನಿಜ ಶರಣ ಅಂಬಿಗರ ಚೌಡಯ್ಯನ ಭಾವಚಿತ್ರ ಪಲ್ಲಕ್ಕಿಯಲ್ಲಿಟ್ಟಿಕೊಂಡು ಭಾಜಿ, ಭಜಂತ್ರಿ ಮೂಲಕ ಗಂಗಸ್ನಾನಕ್ಕೆ ಹೋಗಿ ನಂತರ ಶಿವಲಿಂಗಕ್ಕೆ ವಿಶೇಷ ರುದ್ರಾ ಭಿಷೇಕ ಹಾಗೂ ಅಂಬಿಗರ ಚೌಡಯ್ಯನವರ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಲಾಯಿತು.ಅಲಂಕೃತ ರಥವನ್ನು ಅಂಬಿಗರ ಚೌಡಯ್ಯನವರ ವಚನಗಳನ್ನು ಪಠಿಸುತ್ತ


ಉದಯವಾಹಿನಿ ಚಿತ್ರ

ಭಕ್ತಾದಿಗಳು ರಥ ಎಳೆದಿದ್ದು ವಿಶೇಷವಾಗಿತ್ತು. ಕಾರ್ಯಕ್ರಮದಲ್ಲಿ ಶ್ರೀ ರಾಜಗುರು ಸ್ವಾಮಿ ವೇದ ವ್ಯಾಸ ಪೀಠ ಕಕಳ್ಳಿ , ಉಮೇಶ ಕೆ ಮುನ್ನಾಳ ಅಖಿಲ ಭಾರತೀಯ ಕೋಲಿ ಸಮಾಜದ ರಾಜ್ಯ ಸಂಘಟನಾ ಕಾರ್ಯದರ್ಶಿ ಭಾಗವಿಸಿದರು. ದೇವಿಂದ್ರಪ್ಪ, ಚೌಡಯ್ಯ, ಯಂಕಪ್ಪ, ಶಿವಪ್ಪ, ಸೈದಪ್ಪ, ಚನ್ನಪ್ಪ ವೆಂಕಟೇಶ, ಬಸ್ಸು, ಮೋನೇಶ, ಬಸವರಾಜ, ಮಲ್ಲಯ್ಯ ಸಾಬಣ್ಣ ಶರಣು, ಶ್ರೀನಿವಾಸ, ನಿಂಗಪ್ಪ, ವೆಂಕಟೇಶ, ದೇವಪ್ಪ, ಲಕ್ಷ್ಮೀರಡ್ಡಿ ಹೊನ್ನಪ್ಪ

> ರಾಜ್ಯದಲ್ಲೇ 45ನೇ ವರ್ಷದ ನಿಜಶರಣ ಅಂಬಿಗರ ಚೌಡಯ್ಯನವರ ರಥೋತ್ಸವ ಮತ್ತು ಬೃಹತ್ ಆಕಾರ ದೇವಸ್ಥಾನ ಮಾಡಿರಿವುದು. ಸಮಾಜದ ಒಳ್ಳೆ ಬೆಳವಣಿಗೆ ಮತ್ತು ಶ್ಲಾಘನಿಯ ಎಂದು ಶ್ರೀ ರಾಜಗುರು ಸ್ವಾಮಿಜಿ ವೇದ ವ್ಯಾಸ ಪೀಠ ಕರ್ಕಳ್ಳಿ ಅಭಿಪ್ರಾಯಪಟ್ಟರು.

ಬಸವರಾಜ ಚಿನ್ನು ಪ್ರಭು, ಗಂಗಪ್ಪ, ಮೌನೇಶ ಸೇರಿದಂತೆ ಅನೇಕು ಭಾಗವಹಿಸಿದರು ಮತ್ತು ಅಂಬಿಗರ ಚೌಡಯ್ಯ ಸಂಘದ ಪಧಾಧಿಕಾರಿಗಳು ಹಾಗೂ ಮಹಿಳೆಯರು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿ ಅದ್ದೂರಿ ರಥೋತ್ಸವಕ್ಕೆ ಸಾಕ್ಷಿಯಾದರು.

### ಪುತ್ತೂರಿಗೆ ಬಜೆಟ್‌ನಲ್ಲಿ ಮೆಡಿಕಲ್ ಕಾಲೇಜು ಘೋಷಣೆಯಾದ ಮರುದಿನವೇ ಬೆಂಗಳೂರಿನ ಕೇಂದ್ರ ಕಚೇರಿಯಿಂದ ಆದೇಶ

## ಅಧಿಕಾರಿಗಳಿಂದ ಜಾಗ ಪರಿಶೀಲನೆ: ಸೇಡಿಯಾಪುನಲ್ಲೇ ಹೊಸ ಆಸ್ಪತ್ರೆ

• ಉದಯವಾಹಿನಿ ಪುತ್ತೂರು

ಪುತ್ತೂರಿಗೆ ಬಜೆಟ್‌ನಲ್ಲಿ ಮೆಡಿಕಲ್ ಕಾಲೇಜು ಘೋಷಣೆಯಾದ ಮರುದಿನವೇ ಬೆಂಗಳೂರಿನ ನಮ್ಮ ಕೇಂದ್ರ ಕಚೇರಿಯಿಂದ ಆದೇಶ ಬಂದಿದೆ. ಈ ಹಿನ್ನಲೆಯಲ್ಲಿ ಸೇಡಿಯಾಪು ಬಳಿಯ 40 ಎಕರೆ ಪ್ರದೇಶವನ್ನು ಜಿಪಿಎಸ್ ಮೂಲಕ ಪರಿಶೀಲನೆ ನಡೆಸಲಿದ್ದೇವೆ. ಪ್ರಥಮ ಹಂತದಲ್ಲಿ 25ಸಾವಿರದಿಂದ 30 ಸಾವಿರ ಚದರ ಮೀಟರ್ ವ್ಯಾಪ್ತಿಯಲ್ಲಿ ಮೊದಲ ಹಂತದ ಅಭಿವೃದ್ಧಿ ಕಾರ್ಯನಡೆಯಲಿದೆ. 300ಬೆಡ್ ಹಾಗೂ 250 ವಿದ್ಯಾರ್ಥಿಗಳ ವ್ಯವಸ್ಥೆಗೆ ಪೂರಕವಾಗಿ ನಡೆಯಲಿದೆ. ಪ್ರಸ್ತುತ ನಾವು ವರದಿ ತಯಾರಿಸಿ ಸರ್ಕಾರಕ್ಕೆ ನೀಡಲಿದ್ದೇವೆ ಎಂದು ಆರೋಗ್ಯ ಇಲಾಖೆಯ ಉಪವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಗುರುಪ್ರಸಾದ್ ತಿಳಿಸಿದರು.

ಭಾನುವಾರ ಪುತ್ತೂರು ಸೇಡಿಯಾಪು ಬಳಿಯಲ್ಲಿ ಮೆಡಿಕಲ್ ಕಾಲೇಜಿಗೆ ಕಾಯ್ದಿರಿಸಿದ ಜಾಗದ ಪರಿಶೀಲನೆ ಸಂದರ್ಭ ಶಾಸಕ ಅಶೋಕ್ ರೈ ಅಧ್ಯಕ್ಷತೆಯಲ್ಲಿ ನಡೆದ ಸಂವಹನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪ್ರಸ್ತುತ ಇರುವ ತಾಲ್ಲೂಕು ಆಸ್ಪತ್ರೆಯ ಕಟ್ಟಡಗಳು ಹಳೆಯದಾಗಿವೆ. 4ಸಾವಿರ ಚದರ ಮೀನಷ್ಟು ಚಿಕ್ಕ ಜಾಗದಲ್ಲಿರುವ ಜಾಗದಲ್ಲಿ ಐಪಿಎಚ್‌ಎಸ್ ಹಾಗೂ ಸುಸಜ್ಜಿತ ಆಸ್ಪತ್ರೆ ನಿರ್ಮಾಣ ಅಸಾಧ್ಯವಾಗಿದೆ. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದ ಗೈಡ್‌ಲೆನ್ಸ್ ಪ್ರಕಾರ ಇಲ್ಲಿ ಮಾಡಲು ಸಾಧ್ಯವೇ ಇಲ್ಲ. ಹಾಗಾಗಿ ಸೇಡಿಯಾಪು ಬಳಿಯ ಹೊಸ ಜಾಗದಲ್ಲೇ ಆಸ್ಪತ್ರೆಗೆ ಪ್ರಸ್ತಾವನೆ ಸಲ್ಲಿಸಲಾಗುವುದು. ಇಲ್ಲಿನ ಪ್ರಾಕೃತಿಕ ಪರಿಸರವನ್ನು ಆದಷ್ಟು ಉಳಿಸಿಕೊಂಡು ಆಸ್ಪತ್ರೆಯ ನಿರ್ಮಾಣಕ್ಕೆ ಚಿಂತನೆ ಮಾಡಲಾಗುವುದು ಎಂದು ಅವರು ಹೇಳಿದರು.

ಶಕುಂತಳಾ ಶೆಟ್ಟಿ ಅವರು ಮಾತನಾಡಿ,ಪುತ್ತೂರಿಗೆ ಮೆಡಿಕಲ್ ಕಾಲೇಜು ತರಲು ದೊಡ್ಡ ಮಟ್ಟದ ಶ್ರಮ ಪಟ್ಟಿರುವ ಶಾಸಕ ಅಶೋಕ್ ರೈ ಹಾಗೂ ನಮ್ಮ ಬೇಡಿಕೆಗೆ ಅಸ್ತು ಅಂದಿರುವ ಮುಖ್ಯಮಂತ್ರಿಯವರಿಗೆ ಅಭಿನಂದನೆಗಳು. ಸೇಡಿಯಾಪು ಮೆಡಿಕಲ್ ಕಾಲೇಜಿಗೆ ಸೂಕ್ತ ಜಾಗ. ಎಲ್ಲಾ ಭಾಗಗಳಿಂದಲೂ ಇಲ್ಲಿಗೆ ರಸ್ತೆ ಸಂಪರ್ಕಗಳಿವೆ. ಇಲ್ಲಿ 300 ಬೆಡ್ ಆಸ್ಪತ್ರೆಯಾದರೆ 4 ತಾಲ್ಲೂಕುಗಳ ಜನತೆಗೂ ಅನುಕೂಲವಾಗಲಿದೆ ಎಂದರು.

ಪುತ್ತೂರು ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್, ಪೂಡಾ ಅಧ್ಯಕ್ಷ ಅಮಲ ರಾಮಚಂದ್ರ, ಕೋಡಿಂಬಾಡಿ ಗ್ರಾಪಂ ಉಪಾಧ್ಯಕ್ಷ ಜಯಪ್ರಕಾಶ್ ಬದಿನಾರು, ಎಂಎಸ್ ಮಹಮ್ಮದ್, ವರ್ತಕ ಸಂಘದ ಪ್ರಧಾನ ಕಾರ್ಯದರ್ಶಿ ಮನೋಜ್, ತಾಲ್ಲೂಕು ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಆಶಾಜ್ಯೋತಿ ಮತ್ತಿತರರು ಮಾತನಾಡಿದರು.


ಉದಯವಾಹಿನಿ ಚಿತ್ರ

> ಮೆಡಿಕಲ್ ಕಾಲೇಜು ಜಿಲ್ಲಾ ಮಟ್ಟಕ್ಕೆ ಮಾತ್ರ ಬರುವುದು. ತಾಲ್ಲೂಕು ಕೇಂದ್ರಕ್ಕೆ ಯಾವತ್ತೂ ಬರುವುದಿಲ್ಲ ಎಂಬ ಮಾತುಗಳು ಸಾಕಷ್ಟು ಕೇಳಿಬಂದಿದ್ದವು. ಆದರೆ ಸತತ ಪ್ರಯತ್ನಕ್ಕೆ ಬಜೆಟಿನಲ್ಲಿ ಬೆಲೆ ಬಂದಿದೆ. ಟೀಕೆಗಳು ಸಹಜ ಆದರೆ ಈ ಟೀಕೆಗಳಿಗೆ ನಾನು ಕೆಲಸದ ಮೂಲಕವೇ ಉತ್ತರ ನೀಡುತ್ತೇನೆ. ಪ್ರಸ್ತುತ ಇಲ್ಲಿಗೆ ಆಗಮಿಸಿರುವ ಆರೋಗ್ಯ ಇಲಾಖೆಯ ಇಂಜಿಯರ್‌ಗಳು ಸರ್ಕಾರದ ಸೂಚನೆ ಮೇರೆಗೆ ಬಂದಿದ್ದಾರೆ. ಗೊಂದಲ ಸೃಷ್ಟಿಸಿದವರಿಗೆ ಅತೀ ಶೀಘ್ರದಲ್ಲಿ ಉತ್ತರ ದೊರೆಯಲಿದೆ. ಮುಂದಿನ ವಾರ ಆರ್ಕಿಟೆಕ್‌ಗಳು ಬರಲಿದ್ದಾರೆ. ಡಿಪಿಆರ್ ಮಾಡಿ ಮಾಸ್ಟರ್ ಪ್ಲಾನ್ ತಯಾರಿಸಿ ಸರ್ಕಾರಕ್ಕೆ ಸಲ್ಲಿಸುವ ಕಾರ್ಯ ನಡೆಯಲಿದೆ. 20 ಎಕರೆ ಪ್ರದೇಶ ಮೆಡಿಕಲ್ ಕಾಲೇಜಿಗೆ ಬೇಕಾಗುತ್ತದೆ. ಉಳಿದ ಜಾಗದಲ್ಲಿ ಮುಂದೆ ಆರ್ಯುವೇದಿಕ್ ಕಾಲೇಜು, ನರ್ಸಿಂಗ್ ಕಾಲೇಜು ಕೂಡಾ ಮಾಡಲು ಅನುಕೂಲವಾಗಬಹುದು. ಮೆಡಿಕಲ್-ಎನಿಮಲ್ ಹಬ್ ಮಾಡುವ ಚಿಂತನೆಯೂ ಇದೆ ಎಂದ ಅವರು ಮುಖ್ಯಮಂತ್ರಿಯವರನ್ನು ಕರೆದು ಶಿಲಾನ್ಯಾಸ ಮಾಡಲಾಗುವುದು -ಅಶೋಕ್ ರೈ

> ಈ ಗುಡ್ಡದಲ್ಲಿ ಸಾಕಷ್ಟು ನೇರಳೆ ಮರಗಳಿವೆ. 100 ಹೆಚ್ಚು ವರ್ಷ ಆಯುಷ್ಯದ ಮಾವಿನ ಮರಗಳಿವೆ. ಇವುಗಳನ್ನು ಉಳಿಸುವ ಕೆಲಸವಾಗಬೇಕು. ಅಲ್ಲಲ್ಲಿ ನೀರಿನ ಸೆಲೆಗಳಿವೆ. ಹಾಗಾಗಿ ಭೂ ಅಗೆತ ಕಡಿಮೆ ಮಾಡಬೇಕು. ರಾಷ್ಟ್ರೀಯ ಹೆದ್ದಾರಿಯ ಪರ್ನೆಯಿಂದ ರಸ್ತೆ ಸಂಪರ್ಕ ಇದೆ. ಪುತ್ತೂರು ಕೇಂದ್ರದಿಂದ ಬನ್ನೂರು ಮೂಲಕ ಇಲ್ಲಿಗೆ ಕೇವಲ 3 ಕಿಮೀ ದೂರ ಮಾತ್ರ ಇದೆ. ಕೋಡಿಂಬಾಡಿಯಿಂದಲೂ ರಸ್ತೆ ವ್ಯವಸ್ಥೆಗೆ ಅನುಕೂಲ ಇದೆ
> -ವಿಶ್ವಪ್ರಸಾದ್ ಸೇಡಿಯಾಪು, ಮೆಡಿಕಲ್ ಕಾಲೇಜಿಗೆ ಸ್ಥಳದಾನಿ

## ಡಾಕ್ಟರ್, ಬಾಬು ಜಗಜೀವನ್ ರಾಮ್ ರವರ - ಪ್ರತಿಮೆ ಲೋಕಾರ್ಪಣೆ

• ಉದಯವಾಹಿನಿ ಇಂಡಿ



ಇಂಡಿ ಪಟ್ಟಣದ ಸಮೀಪವಿರುವ ದೇವರ ಹಿಪ್ಪರಗಿ ಪಟ್ಟಣದಲ್ಲಿ ಎಪ್ರಿಲ್ 6. ರಂದು ಹಸಿರು ಕ್ರಾಂತಿಯ ಹರಿಕಾರ ಡಾಕ್ಟರ್, ಬಾಬು ಜಗಜೀವನ್ ರಾಮ್ ರವರ ಜಯಂತಿ ಹಾಗೂ ಡಾ, ಬಾಬು ಜಗಜೀವನ ರಾಮ್ ರವರ ಪ್ರತಿಮೆ ಲೋಕಾರ್ಪಣೆ ಸಮಾರಂಭ ನಡೆಯಲಿದೆ. ಚಿತ್ರದುರ್ಗ ಬಸವಮೂರ್ತಿ ಮಾದರ ಚೆನ್ನಯ್ಯ ಸ್ವಾಮೀಜಿ, ಹುಲಜಂತಿ ಮಾಳಿಂಗರಾಯ ಮಹಾರಾಜರು, ದೇವರ ಹಿಪ್ಪರಗಿ ಮತ್ತು ಜಾಲವಾದ ಗದ್ದಗಿಮಠ ಮಡಿವಾಳ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸುವರು.

ದೇವರ ಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ್ ಅಧ್ಯಕ್ಷತೆ ವಹಿಸಲಿದ್ದು. ಜ್ಯೋತಿ ಬೆಳಗಿಸುವವರು ಅಬಕಾರಿ ಸಚಿವರು ಹಾಗೂ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರಾದ ಆರ್.ಬಿ ತಿಮ್ಮಾಪುರ. ಹಾಗೂ ಮಾಜಿ ಸಚಿವರು ಸಮಾಜ ಕಲ್ಯಾಣ ಇಲಾಖೆಯ ಎಚ್. ಆಂಜನೇಯ. ಬೃಹತ್ ಕೈಗಾರಿಕೆ ಸಚಿವರು ಹಾಗೂ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವರಾದ ಎಂ.ಬಿ ಪಾಟೀಲ್ ಮತ್ತು ಮಾಜಿ ಕೇಂದ್ರ ಸಚಿವರು ಹಾಗೂ ಹಾಲಿ ಸಂಸದರು ವಿಜಯಪುರ ರಮೇಶ ಜಿಗಜಿಣಗಿ ಉದ್ಘಾಟನೆ ನೆರವೇರಿಸುವರು.

ಜಾಂಭವ ಯುವ ಸೇನಾ ರಾಜ್ಯಾಧ್ಯಕ್ಷರಾದ ಡಾಕ್ಟರ್, ರಮೇಶ್ ಚಕ್ರವರ್ತಿ ಆಗಮಿಸಲಿದ್ದಾರೆ. ಎಂದು ಡಾಕ್ಟರ್ ಬಾಬು ಜಗಜೀವನ್ ರಾಮ್ ಯುವಕ ಸಂಘದ ಅಧ್ಯಕ್ಷರಾದ ರಾಹುಲ್ ದೊಡಮನಿ ಹಾಗೂ ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶಿಂಧೆಗೆ ಅವಮಾನ: ಹಾಸ್ಯ ನಟನ ವಿರುದ್ಧ ಎಫ್‌ಐಆರ್



**ಮುಂಬೈ:** ಮಹಾರಾಷ್ಟ್ರ ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪದ ಮೇಲೆ ಹಾಸ್ಯನಟ ಕುನಾಲ್ ಕಮ್ರಾ ವಿರುದ್ಧ ಮುಂಬೈ ಪೊಲೀಸರು ಎಫ್ ಐಆರ್ ದಾಖಲಿಸಿದ್ದಾರೆ. ಮಾತ್ರವಲ್ಲ ತಡರಾತ್ರಿ, ಶಿವಸೇನೆ ಸದಸ್ಯರು ಖಾರ್ ಹ್ಯಾಬಿಟಾಟ್ ಕಾಮಿಡಿ ಕ್ಲಬ್ ಮೇಲೆ ದಾಳಿ ಮಾಡಿ ಹಾನಿ ಮಾಡಿದರು. ಅಲ್ಲಿ ಶಿಂಧೆ' ವಿರುದ್ಧ ಗದ್ದರ್ ನಿಂದನೆಯೊಂದಿಗೆ ಕಮ್ರಾ ಅವರ ಪ್ರದರ್ಶನವನ್ನು ಚಿತ್ರೀಕರಿಸಲಾಯಿತು. ಜೊತೆಗೆ ಕ್ಲಬ್ ಇರುವ ಹೋಟೆಲ್ ಅನ್ನು ಹಾನಿಗೊಳಿಸಲಾಯಿತು.

ಕಮ್ರಾ ಅವರ ಪ್ರದರ್ಶನ ನಡೆದ ಹ್ಯಾಬಿಟೇಟ್, ವಿವಾದಾತ್ಮಕ ಇಂಡಿಯಾಸ್ ಗಾಟ್ ಲೇಟೆಂಟ್ ಪ್ರದರ್ಶನವನ್ನು ಚಿತ್ರೀಕರಿಸಿದ ಅದೇ ಸ್ಥಳವಾಗಿದೆ. ಶಿಂಧೆ ವಿರುದ್ಧ ಕಮ್ರಾ ಮಾನಹಾನಿಕರ ಪದಗಳನ್ನು ಬಳಸಿದ್ದಾರೆ ಎಂದು ತೋರಿಸುವ ವೀಡಿಯೊ ವೈರಲ್ ಆದ ನಂತರ, ಶಿವಸೇನೆ ಶಾಸಕ ಮುರ್ಜಿ ಪಟೇಲ್ ಪೊಲೀಸರಿಗೆ ದೂರು ನೀಡಿದ್ದಾರೆ.

ದೂರಿನ ಆಧಾರದ ಮೇಲೆ, 353 (1) (ಬಿ) (ಸಾರ್ವಜನಿಕ ಕಿಡಿಗೇಡಿತನಕ್ಕೆ ಅನುಕೂಲವಾಗುವ ಹೇಳಿಕೆಗಳು) ಮತ್ತು 356 (2) ಸೇರಿದಂತೆ ವಿವಿಧ ಭಾರತೀಯ ನ್ಯಾಯ ಸಂಹಿತಾ ಕ್ರಮಗಳ ಅಡಿಯಲ್ಲಿ ಕಮ್ರಾ ವಿರುದ್ಧ ಇಂದು ಮುಂಜಾನೆ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಎಂಐಡಿಸಿ ಪೊಲೀಸ್ ಠಾಣೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

### ಕೆಲ ದೇಶಗಳನ್ನು ಹೊರತುಪಡಿಸಿ ಉಳಿದ ರಾಷ್ಟ್ರಗಳ ಮೇಲೆ ವ್ಯಾಪಕ ಸುಂಕ

# ಏಪ್ರಿಲ್ 2ಕ್ಕೆ ಅಮೆರಿಕ ವಿಮೋಚನೆ, ಜಾಗತಿಕ ತಲ್ಲಣ ಗ್ಯಾರಂಟಿ




**ವಾಷಿಂಗ್ಟನ್ ಡಿಸಿ:** ಡೊನಾಲ್ಡ್ ಟ್ರಂಪ್ ಅಮೆರಿಕ ಅಧ್ಯಕ್ಷರಾದ ಮೇಲೆ ವಿಶ್ವದ ದೊಡ್ಡಣ್ಣ ಅಮೆರಿಕದಲ್ಲಿ ಭಾರೀ ಬದಲಾವಣೆಗಳು ಆಗುತ್ತಿವೆ. ಈಗ ಅದರ ಸ್ವಾತಂತ್ರ್ಯ ದಿನವನ್ನು ಕೂಡ ಬದಲಾಯಿಸಲು ಟ್ರಂಪ್ ಮುಂದಾದಂತೆ ಕಾಣುತ್ತಿದೆ. ಏಪ್ರಿಲ್ 2ರಿಂದ ಪರಸ್ಪರ ಸುಂಕ ವಿಧಿಸುವುದಾಗಿ ಈಗಾಗಲೇ ಘೋಷಿಸಿರುವ ಟ್ರಂಪ್, ಏಪ್ರಿಲ್ ಎರಡೇ ಅಮೆರಿಕದ ವಿಮೋಚನಾ ದಿನ ಆಗಲಿದೆ ಎಂದು ಘೋಷಿಸಿದ್ದಾರೆ. ಅದಲ್ಲದೇ ತಮ್ಮ ಕ್ರಮಗಳಿಂದ ಭಾರೀ ಆದಾಯ ಅಮೆರಿಕಕ್ಕೆ ಹರಿದು ಬರಲಿದೆ ಎಂದು ಹೇಳಿದ್ದಾರೆ.

ಅದಲ್ಲದೇ ಕೆಲ ದೇಶಗಳನ್ನು ಹೊರ ತುಪಡಿಸಿ ಉಳಿದ ರಾಷ್ಟ್ರಗಳ ಮೇಲೆ ವ್ಯಾಪಕವಾದ ಸುಂಕವನ್ನು ವಿಧಿಸುವ ಸಾಧ್ಯತೆ ಕೂಡ ಇದ್ದು, ಏಪ್ರಿಲ್ 2 ರಿಂದ ಜಗತ್ತಲ್ಲಿ ಮತ್ತಷ್ಟು ತಲ್ಲಣ ಉಂಟಾಗಲಿದೆ ಎಂದು ಹೇಳಲಾಗಿದೆ.

ಹೌದು, ಒವಲ್ ಕಚೇರಿಯಲ್ಲಿ ಮಾತನಾಡಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಏಪ್ರಿಲ್ 2 ಅಮೆರಿಕಕ್ಕೆ ವಿಮೋಚನಾ ದಿನವಾಗಲಿದೆ. ಕೇವಲ ಶತ್ರು ರಾಷ್ಟ್ರಗಳಲ್ಲದೇ, ಮಿತ್ರ ರಾಷ್ಟ್ರಗಳು ಸೇರಿ ಜಗತ್ತಿನ ಪ್ರತಿಯೊಂದು ದೇಶವು ನಮ್ಮಿಂದ ಕಸಿದುಕೊಂಡಿದೆ ಎಂದು ಹೇಳಿದ್ದಾರೆ. ಅದಲ್ಲದೇ ಪರಸ್ಪರ ಸುಂಕ ಕ್ರಮದಿಂದ ಹತ್ತಾರು ಶತಕೋಟಿ ಆದಾಯ ಅಮೆರಿಕಕ್ಕೆ ಬರಲಿದೆ ಎಂದು ತಿಳಿಸಿದರು.

ಅದಲ್ಲದೇ ಪರಸ್ಪರ ಸುಂಕದ ವಿಚಾರದಲ್ಲಿ ಕೆಲವು ಬದಲಾವಣೆಗಳಾಗಬಹುದು ಎಂದು ಟ್ರಂಪ್ ಹೇಳಿರುವುದು ಕುತೂಹಲ ಕೆರಳಿಸಿದೆ. ಆದರೆ, ಸುಂಕದ ವಿಚಾರದಲ್ಲಿ ನಾನು ಯಾವುದೇ ಬದಲಾವಣೆ ಮಾಡಲ್ಲ, ಫ್ಲೆಕ್ಸಿಬಲ್ ಎನ್ನುವುದು ಕೂಡ ಮಹತ್ವದ ಪದ ಆಗಿದ್ದು, ಕೆಲವು ಬಾರಿ ಸುಂಕದ ವಿಚಾರದಲ್ಲಿ ನಾವು ಫ್ಲೆಕ್ಸಿಬಲ್ ಆಗಿರುತ್ತೇವೆ. ಆದರೆ, ಸಾಮಾನ್ಯವಾಗಿ ಸುಂಕವೂ ಪರಸ್ಪರ ರೀತಿಯಲ್ಲಿಯೇ ಇರುತ್ತದೆ ಎಂದು ಹೇಳುವ ಮೂಲಕ ಜಗತ್ತನ್ನು ಕೌತುಕದ ಕಡೆ ಟ್ರಂಪ್ ತಳ್ಳಿದ್ದಾರೆ. ಇನ್ನು, ಅಮೆರಿಕದ ಮೇಲೆ ಸುಂಕ ವಿಧಿಸದಿರುವ ರಾಷ್ಟ್ರಗಳು ಹಾಗೂ ಅಮೆರಿಕದ ವ್ಯಾಪಾರ ಹೆಚ್ಚಿರುವ ದೇಶಗಳಿಗೆ ಮಾತ್ರ ಪರಸ್ಪರ ಸುಂಕವನ್ನು ಡೊನಾಲ್ಡ್ ಟ್ರಂಪ್ ವಿಧಿಸಲ್ಲ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ. ಅದಲ್ಲದೇ ಟ್ರಂಪ್ ಆಡಳಿತದಲ್ಲಿ ಅನೇಕ ನೀತಿಗಳು ಪ್ರಕ್ರಿಯೆಯಲ್ಲಿದ್ದು, ಪರಿಸ್ಥಿತಿ ಅಸ್ಥಿರವಾಗಿಯೇ ಇದೆ. ಇನ್ನೂ ಯಾವುದಕ್ಕೂ ಸ್ಪಷ್ಟನೆ ಸಿಕ್ಕಿಲ್ಲ. ಪ್ರೆಸಿಡೆಂಟ್ ಅಧಿಕೃತವಾಗಿ ಘೋಷಿಸುವವರೆಗೂ ಯಾವುದು ಫೈನಲ್ ಆಗಲ್ಲ ಎಂದು ಮೂಲಗಳು ತಿಳಿಸಿವೆ. ಕೆಲವು ಬದಲಾವಣೆಗಳಾಗುವ ನಿರೀಕ್ಷೆ ಇದೆ.

### 800 ಬಿಲಿಯನ್ ಡಾಲರ್ ವಸ್ತುಗಳ ಮೇಲೆ ಸುಂಕ

**ಇನ್ನು, ಟ್ರಂಪ್ ತಾವೂ ಅಮೆರಿಕ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಮೊದಲ ಎರಡು ತಿಂಗಳಲ್ಲಿ ವಿವಿಧ ರಾಷ್ಟ್ರಗಳ ಮೇಲೆ ಭಾರೀ ಸುಂಕ ವಿಧಿಸಿದ್ದಾರೆ. ಅದರಲ್ಲೂ ಚೀನಾ, ಮೆಕ್ಸಿಕೋ ಮತ್ತು ಕೆನಡಾದಿಂದ ಆಮದು ಮಾಡಿಕೊಳ್ಳುವ ಸುಮಾರು 800 ಬಿಲಿಯನ್ ಡಾಲರ್ ಮೌಲ್ಯದ ವಸ್ತುಗಳ ಮೇಲೆ ಸುಂಕವನ್ನು ಹೆಚ್ಚಿಸಿದ್ದಾರೆ. ಇದು ಅಮೆರಿಕಕ್ಕೆ ಭಾರೀ ಆದಾಯವನ್ನು ತಂದುಕೊಟ್ಟಿದೆ. ಆದರೆ, ಇದರಿಂದ ಜಾಗತಿಕ ಷೇರು ಮಾರುಕಟ್ಟೆಯಲ್ಲಿ ತಲ್ಲಣ ಉಂಟಾಗಿತ್ತು. ಅದಲ್ಲದೇ ಅಮೆರಿಕ ಆರ್ಥಿಕ ಹಿಂಜರಿತಕ್ಕೆ ಜಾರುವ ಆತಂಕ ಕೂಡ ಎದುರಾಗಿದೆ. ಟ್ರಂಪ್ ಸುಂಕದ ಏಟಿಗೆ ಚೀನಾ, ಕೆನಡಾ ಸೇರಿ ವಿವಿಧ ದೇಶಗಳು ಪ್ರತೀಕಾರದ ಸುಂಕ ವಿಧಿಸುತ್ತಿರುವುದು ಕೂಡ ವಿಶ್ವದ ದೊಡ್ಡಣ್ಣಗೆ ಆಘಾತ ನೀಡಿದಂತಾಗಿದೆ. ಅದಲ್ಲದೇ ಡೊನಾಲ್ಡ್ ಟ್ರಂಪ್ ಅವರ ಪರಸ್ಪರ ಸುಂಕದ ನೀತಿ ಹಲವು ಮಿತ್ರರಾಷ್ಟ್ರಗಳ ಕಣ್ಣು ಕೆಂಪಗೆ ಮಾಡಲಿದ್ದು, ಅಮೆರಿಕದ ಜೊತೆಗಿನ ಸಂಬಂಧ ಬಿಗಡಾಯಿಸುವ ಸಾಧ್ಯತೆ ಇದೆ.**

### ಎರಡು ಮಾದರಿಯಲ್ಲಿ ಪರಸ್ಪರ ಸುಂಕ ಜಾರಿ



**ಡೊನಾಲ್ಡ್ ಟ್ರಂಪ್ ಅವರು ಎರಡು ವಿಧಾನದಲ್ಲಿ ಪರಸ್ಪರ ಸುಂಕದ ನೀತಿಯನ್ನು ಜಾರಿಗೆ ತರುತ್ತಾರೆ ಎಂದು ಹೇಳಲಾಗುತ್ತಿದೆ. ಹೆಚ್ಚಿನ ಸುಂಕ ಹಾಗೂ ಕಡಿಮೆ ಸುಂಕದ ದೇಶಗಳು ಎಂದು ಡಿವೈಡ್ ಮಾಡುವ ಸಾಧ್ಯತೆ ಇದೆ. ಡೊನಾಲ್ಡ್ ಟ್ರಂಪ್ ಹೆಚ್ಚಿನ ಸುಂಕ ವಿಧಾನದ ಅಡಿಯಲ್ಲಿ ಯಾವ ದೇಶಗಳನ್ನು ಸೇರಿಸುತ್ತಾರೆ ಎಂಬುದು ಇನ್ನು ಸ್ಪಷ್ಟವಾಗಿಲ್ಲ. ಆದರೆ, ಈಗಾಗಲೇ ಯುರೋಪಿಯನ್ ಯುನಿಯನ್, ಮೆಕ್ಸಿಕೋ, ಜಪಾನ್, ದಕ್ಷಿಣ ಕೊರಿಯಾ, ಕೆನಡಾ, ಭಾರತ ಹಾಗೂ ಚೀನಾ ಸೇರಿ ಕೆಲ ದೇಶಗಳ ವಿರುದ್ಧ ಸುಂಕದ ವಿಚಾರದಲ್ಲಿ ಪದೇ ಪದೇ ವಾಗ್ದಾಳಿ ನಡೆಸಿದ್ದಾರೆ. ಈ ಹಿನ್ನೆಲೆ ಈ ರಾಷ್ಟ್ರಗಳ ಮೇಲೆ ಹೆಚ್ಚಿನ ಸುಂಕ ವಿಧಿಸುವ ನಿರೀಕ್ಷೆ ಇದೆ ಎನ್ನಲಾಗಿದೆ.**

## ಮಿನಿ ನ್ಯೂಸ್

### ಮುಂಬೈನ ಬಹುಮಹಡಿ ಕಟ್ಟಡದಲ್ಲಿ ಅಗ್ನಿ ಅವಘಡ, ಒಬ್ಬ ಸಾವು

**ಮುಂಬೈ:** ನಗರದ ವಿದ್ಯಾವಿಹಾರ್ ಪ್ರದೇಶದಲ್ಲಿನ 13 ಅಂತಸ್ತಿನ ವಸತಿ ಕಟ್ಟಡದಲ್ಲಿ ಬೆಳಿಗ್ಗೆ ಬೆಂಕಿ ಕಾಣಿಸಿಕೊಂಡು ಭದ್ರತಾ ಸಿಬ್ಬಂದಿಯೊಬ್ಬರು ಸಾವನ್ನಪ್ಪಿದ್ದಾರೆ. ವಿದ್ಯಾವಿಹಾರ್ ನಿಲ್ದಾಣದ ಎದುರಿನ ನಾಥನಿ ರಸ್ತೆಯಲ್ಲಿರುವ ತಕ್ಷಶಿಲಾ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿಯಲ್ಲಿ ಬೆಳಗಿನ ಜಾವ 4.35ಕ್ಕೆ ಬೆಂಕಿ ಕಾಣಿಸಿಕೊಂಡಿದೆ ಎಂದು ಅಗ್ನಿಶಾಮಕ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕಟ್ಟಡದ ಮೊದಲ ಮತ್ತು ಎರಡನೇ ಮಹಡಿಯಲ್ಲಿನ ಐದು ಫ್ಲಾಟ್ಗಳಲ್ಲಿ ವಿದ್ಯುತ್ ಅಳವಡಿಕೆಗಳು, ಗೃಹೋಪಯೋಗಿ ವಸ್ತುಗಳು, ಮರದ ಪೀಠೋಪಕರಣಗಳು, ಎಸಿ. ಮತ್ತು ಬಟ್ಟೆಗಳಿಗೆ ಬೆಂಕಿ ತಗುಲಿದೆ ಎಂದು ಅವರು ಹೇಳಿದರು. 15 ರಿಂದ 20 ಜನರನ್ನು ಸುರಕ್ಷಿತವಾಗಿ ರಕ್ಷಿಸಲಾಗಿದೆ ಮತ್ತು ಇಬ್ಬರು ಸೆಕ್ಯುರಿಟಿ ಗಾರ್ಡ್‌ಗಳು ಗಾಯಗೊಂಡಿದ್ದು, ಅವರನ್ನು ರಾಜವಾಡಿ ಆಸ್ಪತ್ರೆಗೆ ಕಳುಹಿಸಲಾಗಿದ್ದು, ಅವರಲ್ಲಿ ಒಬ್ಬರಾದ ಉದಯ್ ಗಂಗನ್ (43) ಮೃತಪಟ್ಟಿದ್ದಾರೆ ಎಂದು ಘೋಷಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸತತ ಪ್ರಯತ್ನದಿಮದ ಬೆಳಿಗ್ಗೆ 7.33 ರ ಹೊತ್ತಿಗೆ ನಿಯಂತ್ರಣಕ್ಕೆ ತರಲಾಯಿತು ಎಂದು ಅಧಿಕಾರಿ ಸೇರಿಸಲಾಗಿದೆ. ಬೆಂಕಿಗೆ ಕಾರಣ ಇನ್ನೂ ತಿಳಿದುಬಂದಿಲ್ಲ ತನಿಖೆ ಮುಂದುವರೆದಿದೆ ಎಂದು ಹೇಳಿದರು.

## ಏ.28ಕ್ಕೆ ಕೆನಡಾ ಸಂಸತ್‌ಗೆ ಅವಧಿಪೂರ್ವ ಚುನಾವಣೆ: ಕಾರ್ನಿ ಘೋಷಣೆ

- ಏ.28 ಕ್ಕೆ ಕೆನಡಾ ಸಂಸತ್‌ಗೆ ಅವಧಿಪೂರ್ವ ಚುನಾವಣೆ
- ಡೊನಾಲ್ಡ್ ಟ್ರಂಪ್ ನೂತನ ಸುಂಕ ನೀತಿಗಳ ಘೋಷಣೆಗಳಿಂದ ಆರ್ಥಿಕತೆಗೆ ಬೆದರಿಕೆ
- ಪ್ರಧಾನಿ ಕಾರ್ನಿ ಅವರು ಕೆನಡಾದ ನಾಗರಿಕರ ವಿಶ್ವಾಸಗಳಿಸಲು ಐದು ವಾರಗಳು ಉಳಿದಿವೆ
- ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ



**ಒಟ್ಟಾವಾ:** ಕೆನಡಾದ ಪ್ರಧಾನಿಯಾಗಿ ಜಸ್ಟಿನ್ ಟ್ರುಡೊ ಅವರ ನಂತರ ಅಧಿಕಾರ ವಹಿಸಿಕೊಂಡ ಮಾರ್ಕ್ ಕಾರ್ನಿ ಅವರು ಏಪ್ರಿಲ್ 28 ರಂದು ದಿಢೀರ್ ಚುನಾವಣೆಯನ್ನು ಕರೆದಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೂತನ ಸುಂಕ ನೀತಿಗಳ ಘೋಷಣೆಗಳಿಂದ ಆರ್ಥಿಕತೆಗೆ ಎದುರಾಗಿರುವ ಬೆದರಿಕೆಯನ್ನು ಎದುರಿಸಲು ಪ್ರಬಲ ಜನಾದೇಶವನ್ನು ಕೋರಿದ್ದಾರೆ. ಟ್ರಂಪ್ ಅವರ ಸುಂಕ ನೀತಿಗಳನ್ನು ಕೆನಡಾ ಎದುರಿಸುವ ಅಗತ್ಯವಿದೆ. ಅಂತಹ ನಿರ್ಣಾಯಕ ಕ್ಷಣಗಳಲ್ಲಿ ದೇಶವನ್ನು ಯಾರು ಮುನ್ನಡೆಸಬೇಕು ಎಂಬುದರ ಕುರಿತು ಕೆನಡಿಯನ್ನರು ನಿರ್ಧರಿಸಬೇಕು ಎಂದು ಕಾರ್ನಿ ಹೇಳಿದರು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇತೃತ್ವದ ಸರಕಾರದ ಸುಂಕ ಹೆಚ್ಚಳ ಹಾಗೂ ಕೆನಡಾ ಭೂ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುವ ಟ್ರಂಪ್ ಆಡಳಿತ ಬೆದರಿಕೆಯ ಸವಾಲು ಕೆನಡಾಗೆ ಎದುರಾಗಿದೆ. ಈ ಹಿನ್ನಲೆಯಲ್ಲಿ ಹೊಸ ಜನಾದೇಶ ಪಡೆಯಲು ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಮುಂದಾಗಿದ್ದಾರೆ. ಅವರು ಸಂಸತ್‌ಗೆ ಅವಧಿ ಪೂರ್ವ ಚುನಾವಣೆ ನಡೆಸುವ ಘೋಷಣೆ ಮಾಡಿದ್ದಾರೆ.

ಸಂಸತ್ ವಿಸರ್ಜಿಸಿರುವ ಲಿಬರಲ್ ಪಕ್ಷದ ಮುಖ್ಯಸ್ಥರಾಗಿರುವ ಪ್ರಧಾನಿ ಮಾರ್ಕ್ ಕಾರ್ನಿ, ಆರು ತಿಂಗಳು ಮೊದಲೇ ಅಂದರೆ ಏಪ್ರಿಲ್ 28 ಕ್ಕೆ ಸಂಸತ್‌ಗೆ ಚುನಾವಣೆ ನಡೆಯಲಿದೆ ಎಂದು ಪ್ರಕಟಿಸಿದ್ದಾರೆ. ಗವರ್ನರ್ ಜನರಲ್ (ಬ್ರಿಟನ್ ದೊರೆ ಚಾರ್ಲ್ಸ್ ಪ್ರತಿನಿಧಿ) ಅವರನ್ನು ಭೇಟಿಯಾದ ಪ್ರಧಾನಿ ಕಾರ್ನಿ, ಸಂಸತ್ ವಿಸರ್ಜನೆಗೆ ಮನವಿ ಸಲ್ಲಿಸಿದರು.

ಚುನಾವಣೆ ನಡೆಸಲು ಪ್ರಕ್ರಿಯೆಯನ್ನು ಆರಂಭಿಸಲು ಚುನಾವಣಾ ಆಯೋಗಕ್ಕೆ ಸೂಚನೆ ನೀಡಿದರು. ಅಮೆರಿಕ ಅಧ್ಯಕ್ಷ ಟ್ರಂಪ್ ಅವರ ನ್ಯಾಯಸಮ್ಮತವಲ್ಲದ ವ್ಯಾಪಾರ ಕ್ರಮಗಳು, ಸುಂಕ ನೀತಿಗಳಿಂದ ನಾವು ನಮ್ಮ ಜೀವಿತಾವಧಿಯ ಅತ್ಯಂತ ಮಹತ್ವದ ಬಿಕ್ಕಟ್ಟನ್ನು ಎದುರಿಸುತ್ತಿದ್ದೇವೆ ಎಂದು ಪ್ರಧಾನಿ ಮಾರ್ಕ್ ಕಾರ್ನಿ ಹೇಳಿದ್ದಾರೆ. ಕೆನಡಾವನ್ನು ಸುರಕ್ಷಿತಗೊಳಿಸಲು, ಕೆನಡಾದಲ್ಲಿ ಹೂಡಿಕೆ ಮಾಡಲು, ಕೆನಡಾವನ್ನು ನಿರ್ಮಿಸಲು, ಕೆನಡಾವನ್ನು ಒಗ್ಗೂಡಿಸಲು ನಾವು ಇನ್ನಷ್ಟು ಕೆಲಸಗಳನ್ನು ಮಾಡಬೇಕಿದೆ.

ಅದಕ್ಕಾಗಿಯೇ ನಾನು ನನ್ನ ಸಹ ಕೆನಡಿಯನ್ನರಿಂದ ಬಲವಾದ ಸಕಾರಾತ್ಮಕ ಜನಾದೇಶವನ್ನು ಕೇಳುತ್ತಿದ್ದೇನೆ. ನಾನು ಗವರ್ನರ್ ಜನರಲ್ ಅವರನ್ನು ಸಂಸತ್ತನ್ನು ವಿಸರ್ಜಿಸಿ ಏಪ್ರಿಲ್ 28 ಕ್ಕೆ ಚುನಾವಣೆ ನಡೆಸುವಂತೆ ವಿನಂತಿಸಿದ್ದೇನೆ, ಮತ್ತು ಅವರು ಅದಕ್ಕೆ ಸಮ್ಮತಿಸಿದ್ದಾರೆ ಎಂದರು.

## ಬುಲೆಟ್ ರೈಲು ಯೋಜನೆ ಸ್ಥಳದಲ್ಲಿ ಅಪಘಾತ



**ಅಹಮದಾಬಾದ್:** ಅಹಮದಾಬಾದ್ ಬಳಿಯ ಬುಲೆಟ್ ರೈಲು ಯೋಜನೆಯ ಸ್ಥಳದಲ್ಲಿ ನಿರ್ಮಾಣಕ್ಕೆ ಬಳಸಲಾದ ಸೆಗ್ಮೆಂಟಲ್ ಲಾಂಚಿಂಗ್ ಗ್ಯಾಂಟ್ರಿ ಆಕಸ್ಮಿಕವಾಗಿ ಸ್ಕಿಡ್ ಆಗಿ ಪಕ್ಕದ ರೈಲು ಮಾರ್ಗದ ಮೇಲೆ ಪರಿಣಾಮ ಬೀರಿದ್ದು, ಹಲವಾರು ರೈಲುಗಳ ಸಂಚಾರಕ್ಕೆ ಅಡ್ಡಿಯುಂಟಾಗಿದೆ.

ವತ್ವಾದಲ್ಲಿ ಕಳೆದ ರಾತ್ರಿ 11 ಗಂಟೆ ಸುಮಾರಿಗೆ ನಡೆದ ಈ ಘಟನೆಯಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಅಥವಾ ನಿರ್ಮಿಸಿದ ರಚನೆಗೆ ಯಾವುದೇ ಹಾನಿ ಉಂಟಾಗಿಲ್ಲ ಎಂದು ರಾಷ್ಟ್ರೀಯ ಹೈಸ್ಪೀಡ್ ರೈಲು ನಿಗಮ ತಿಳಿಸಿದೆ. ಆದಾಗ್ಯೂ, ಘಟನೆಯು ರೈಲು ಸಂಚಾರದ ಮೇಲೆ ಪರಿಣಾಮ ಬೀರಿತು, ಕನಿಷ್ಠ 25 ರೈಲುಗಳನ್ನು ರದ್ದುಗೊಳಿಸಲಾಯಿತು, ಆರು ಮಾರ್ಗಗಳನ್ನು ಬೇರೆ ಕಡೆ ತಿರುಗಿಸಲಾಗಿದೆ ಎಂದು ಅಹಮದಾಬಾದ್ ರೈಲ್ವೆ ವಿಭಾಗದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

**ಹಲವು ರೈಲುಗಳು ರದ್ದು**

ಸಂಚಾರಕ್ಕೆ ಅನುಕೂಲವಾಗುವಂತೆ ರೈಲು ಮಾರ್ಗದ ಮೇಲೆ ಬಿದ್ದರು ಇಂಜಿನ್ ಹೆವಿ ಡ್ಯೂಟಿ ಕ್ರೇನ್‌ಗಳ ಸಹಾಯದಿಂದ ಪುನಃಸ್ಥಾಪನೆಗೆ ಪ್ರಯತ್ನಗಳು ನಡೆಯುತ್ತಿವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಹಮದಾಬಾದ್ ಬಳಿಯ ವತ್ವಾದಲ್ಲಿ ವಯಡಕ್ಟ್ ನಿರ್ಮಾಣಕ್ಕಾಗಿ ಬಳಸಲಾದ ಸೆಂಟಲ್ ಲಾಂಚಿಂಗ್ ಗ್ಯಾಂಟ್ರಿಯೊಂದು ಕಾಂಕ್ರೀಟ್ ಗರ್ಡರ್ ಉಡಾವಣೆಯನ್ನು ಪೂರ್ಣಗೊಳಿಸಿದ ನಂತರ ಹಿಂತೆಗೆದುಕೊಳ್ಳುತ್ತಿದ್ದಾಗ ಅದು ಆಕಸ್ಮಿಕವಾಗಿ ತನ್ನ ಜಾರಿತು ಸುತ್ತಮುತ್ತಲಿನ ಹಳಿಯ ಮೇಲೆ ರೈಲು ಸಂಚಾರ ನಿಲ್ಲಿಸಲಾಯಿತು.

ಹಿರಿಯ ಅಧಿಕಾರಿಗಳು ಈಗಾಗಲೇ ಸ್ಥಳದಲ್ಲಿ ಪೊಲೀಸ್ ಮತ್ತು ಅಗ್ನಿಶಾಮಕ ಸೇವೆಗಳ ಅಧಿಕಾರಿಗಳು ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಯಾವುದೇ ಸಾವುನೋವುಗಳು ವರದಿಯಾಗಿಲ್ಲ. ನಿರ್ಮಿಸಿದ ರಚನೆಗೆ ಯಾವುದೇ ಹಾನಿಯಾಗಿಲ್ಲ ಎಂದು ಅದು ಹೇಳಿದೆ.

### ರಾಯಗಢ ಕೋಟೆಯಲ್ಲಿ ಶ್ವಾನ ಸ್ಮಾರಕ ತೆರವಿಗೆ ರಾಜಮನೆತನ ಒತ್ತಾಯ

• **ಉದಯವಾಹಿನಿ ಮಹಾರಾಷ್ಟ್ರ**

ರಾಯಗಢ ಕೋಟೆಯಲ್ಲಿರುವ ಛತ್ರಪತಿ ಶಿವಾಜಿ ಮಹಾರಾಜರ ಸಮಾಧಿ ಬಳಿ ಇರುವ ಶ್ವಾನ ಸ್ಮಾರಕವನ್ನು ತೆರವುಗೊಳಿಸುವಂತೆ ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರನ್ನು ಮಾಜಿ ರಾಜ್ಯಸಭಾ ಸದಸ್ಯ ಮತ್ತು ಕೊಲ್ಹಾಪುರ ರಾಜಮನೆತನದ ವಂಶಸ್ಥ ಸಂಭಾಜಿರಾಜೆ ಛತ್ರಪತಿ ಒತ್ತಾಯಿಸಿದ್ದಾರೆ.

ಈ ಸಂಬಂಧ ಮಾರ್ಚ್ 22ರಂದು ಅವರು ಪತ್ರ ಬರೆದಿದ್ದು, ಈ ವರ್ಷದ ಮೇ 31ಕ್ಕೂ ಮುನ್ನಾ ಶ್ವಾನ ಸ್ಮಾರಕವನ್ನು ತೆರವುಗೊಳಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ. 17ನೇ ಶತಮಾನದಲ್ಲಿ ಛತ್ರಪತಿ ಶಿವಾಜಿ ಮಹಾರಾಜರು ತನ್ನ ರಾಜಧಾನಿಯಾಗಿ ಮಾಡಿಕೊಂಡಿದ್ದ ರಾಯಗಢ ಕೋಟೆಯಲ್ಲಿ ವಾಘ್ಯಾ ಎಂಬ ಶ್ವಾನದ ಸ್ಮಾರಕವನ್ನು ನಿರ್ಮಿಸಲಾಗಿತ್ತು. ಆದರೆ, ಶಿವಾಜಿ ಮಹಾರಾಜರ ಮುದ್ದಿನ ಶ್ವಾನ ವಾಘ್ಯಾಗೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯಗಳಿಲ್ಲ. ಅಂತಹ ಯಾವುದೇ ಪುರಾವೆಗಳಿಲ್ಲದ ಕಾರಣ ಇದು ಪಾರಂಪರಿಕ ಕೋಟೆಯಾಗಿ ಸಂರಕ್ಷಿಸಲಾಗಿರುವ ಕೋಟೆಯ ಮೇಲಿನ ಅತಿಕ್ರಮಣವಾಗಿದೆ ಎಂದು ಅವರು ಹೇಳಿದ್ದಾರೆ.

### ಅತ್ಯಾಚಾರ ಯತ್ನ, ಚಲಿಸುತ್ತಿದ್ದ ರೈಲಿನಿಂದ ಜಿಗಿದ ಮಹಿಳೆಗೆ ಗಂಭೀರ ಗಾಯ

**ಹೈದರಾಬಾದ್:** 25 ವರ್ಷದ ಯುವಕನೊಬ್ಬ ಅತ್ಯಾಚಾರಕ್ಕೆ ಯತ್ನಿಸಿದ ನಂತರ ಚಲಿಸುತ್ತಿದ್ದ ರೈಲಿನಿಂದ ಜಿಗಿದ 23 ವರ್ಷದ ಮಹಿಳೆಯೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ರಾತ್ರಿ 8-15ರ ಸುಮಾರಿನಲ್ಲಿ ಕೊಂಪಲ್ಲಿ ಬಳಿ ಈ ಘಟನೆ ನಡೆದಿದೆ. ತೀವ್ರವಾಗಿ ಗಾಯಗೊಂಡಿದ್ದ ಮಹಿಳೆ ಮರುದಿನ ಸರ್ಕಾರಿ ರೈಲ್ವೆ ಪೊಲೀಸರಿಗೆ (ಜಿಆರ್‌ಪಿ) ದೂರು ಸಲ್ಲಿಸಿದ್ದಾರೆ.

ಅನಂತಪುರ ಜಿಲ್ಲೆಯ ಸಂತ್ರಸ್ತೆ ಹೈದರಾಬಾದಿನ ಖಾಸಗಿ ಸಂಸ್ಥೆಯೊಂದರ ಉದ್ಯೋಗಿಯಾಗಿದ್ದಾರೆ. ತನ್ನ ಮೊಬೈಲ್ ಡಿಸ್ ಪ್ಲೇ ದುರಸ್ಥಿ ಮಾಡಿಸಲು ಮಾರ್ಚ್ 22 ರಂದು ಮಧ್ಯಾಹ್ನ 3 ಗಂಟೆಯಲ್ಲಿ ಮೆಡ್ಚಲ್ ನಿಂದ ಸಿಕಂದರಾಬಾದ್‌ಗೆ ತೆರಳುತ್ತಿದ್ದಾಗ ತನ್ನ ಮೇಲೆ ಅತ್ಯಾಚಾರದ ಯತ್ನ ನಡೆದಿರುವುದಾಗಿ ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ರಿಪೇರಿ ಮುಗಿಸಿ ಸಿಕಂದರಾಬಾದ್ ರೈಲು ನಿಲ್ದಾಣಕ್ಕೆ ಹೋಗಿ, ಮೇಡ್ಚಲ್‌ಗೆ ಸಾಮಾನ್ಯ ಟಿಕೆಟ್ ಖರೀದಿಸಿದ್ದು, ಸಂಜೆ 7:15 ಕ್ಕೆ ಮಹಿಳೆಯರ ಎಂಎಂಟಿಎಸ್ ರೈಲಿನ ಮಹಿಳೆಯರ ಬೋಗಿಯಲ್ಲಿ ಚಲಿಸುತ್ತಿದ್ದಾಗ ರಾತ್ರಿ 8-15ರ ಸಮಾರಿನಲ್ಲಿ ಸುಮಾರು 25 ವರ್ಷದ ಅಪರಿಚಿತ ಯುವಕ ಆಕೆಯೊಂದಿಗೆ ಲೈಂಗಿಕವಾಗಿ ಕಿರುಕುಳ ನೀಡಲು ಪ್ರಾರಂಭಿಸಿದ್ದಾನೆ.

## ಕೇರಳ ಬಿಜೆಪಿ ಅಧ್ಯಕ್ಷರಾಗಿ ರಾಜೀವ್ ಚಂದ್ರಶೇಖರ್

**ತಿರುವನಂತಪುರಂ:** ಮಾಜಿ ಕೇಂದ್ರ ಸಚಿವ ಮತ್ತು ಹಿರಿಯ ಬಿಜೆಪಿ ನಾಯಕ ರಾಜೀವ್ ಚಂದ್ರಶೇಖರ್ ಅವರನ್ನು, ಕೇರಳ ಬಿಜೆಪಿ ಘಟಕದ ರಾಜ್ಯಾಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ.

ರಾಜೀವ್ ಚಂದ್ರಶೇಖರ್ ಅಧಿಕೃತವಾಗಿ ಕೇರಳ ಬಿಜೆಪಿ ರಾಜ್ಯಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು.

ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಬಿಜೆಪಿ ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಚಂದ್ರಶೇಖರ್, ಕೇರಳದಲ್ಲಿ ಎನ್‌ಡಿಎ ಸರ್ಕಾರವನ್ನು ಅಧಿಕಾರಕ್ಕೆ ತರುವುದು ತಮ್ಮ ಪ್ರಾಥಮಿ ಆದ್ಯತೆ.. ಎಂದು ಘೋಷಿಸಿದರು. ಕೇರಳದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಗೆಲುವಿಗೆ ನಾವೆಲ್ಲರೂ ಶ್ರಮಿಸಬೇಕು. ಈ ಗುರಿ ಅತ್ಯಂತ ಕಠಿಣವಾಗಿದೆ ಎಂಬುದು ನಮಗೆಲ್ಲರಿಗೂ ಚೆನ್ನಾಗಿ ಗೊತ್ತಿದೆ. ಆದರೆ ನಾವೆಲ್ಲರೂ ಸೇರಿ ಈ ಗುರಿಯನ್ನು ಸಾಧಿಸುವ ಪ್ರತಿಜ್ಞೆ ಮಾಡೋಣ ಎಂದು ರಾಜೀವ್ ಚಂದ್ರಶೇಖರ್ ಕಾರ್ಯಕರ್ತರಿಗೆ ಕರೆ ನೀಡಿದರು.

ತಮ್ಮನ್ನು ಕೇರಳ ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಕ್ಕೆ ಪಕ್ಷದ ನಾಯಕರು ಮತ್ತು ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸಿದ ರಾಜೀವ್ ಚಂದ್ರಶೇಖರ್, ಈ ಗುರುತರವಾದ ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ಎಲ್ಲರ ಸಹಕಾರ ಅಗತ್ಯ ಎಂದು ಒತ್ತಿ ಹೇಳಿದರು. ಕೇರಳ ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷರಾಗಿ ನನನ್ನು ಆಯ್ಕೆ ಮಾಡಿರುವುದಕ್ಕೆ ನಾನು ಪ್ರಧಾನಮಂತ್ರಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ಹೈಕಮಾಂಡ್‌ನ ಇತರ ನಾಯಕರಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದರು.

## ಕಾಲೇಜು ವಿದ್ಯಾರ್ಥಿನಿ ಮೇಲೆ ಗ್ಯಾಂಗ್ ರೇಪ್

**ಅನುಪ್ಪುರ್:** 20 ವರ್ಷದ ಕಾಲೇಜು ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರವಾಗಿರುವ ಘಟನೆ ಮಧ್ಯಪ್ರದೇಶದ ಅನುಪ್ಪುರ್ ಜಿಲ್ಲೆಯಲ್ಲಿ ನಡೆದಿದೆ. ಪ್ರಕರಣ ಸಂಬಂಧ ಅಪ್ರಾಪ್ತ ಸೇರಿದಂತೆ ನಾಲ್ವರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಂಜೆ 6 ಗಂಟೆಗೆ ಕಾಲೇಜಿನಿಂದ ಹಿಂತಿರುಗಿದ ಯುವತಿ ಆಟೋರಿಕ್ಷಾದಿಂದ ಇಳಿದು ತನ್ನ ಮನೆಗೆ ನಡೆದು ಹೋಗುತ್ತಿದ್ದಾಗ ಈ ಘಟನೆ ನಡೆದಿದೆ ಎಂದು ರಾಜೇಂದ್ರಗ್ರಾಮ ಪೊಲೀಸ್ ಠಾಣೆ ಪ್ರಭಾರಿ ವೀರೇಂದ್ರ ಕುಮಾರ್ ತಿಳಿಸಿದ್ದಾರೆ.

ಮಾರ್ಗ ಮಧ್ಯದಲ್ಲಿ ಆರೋಪಿ ಹೇಮರಾಜ್ ಸಿಂಗ್ (23) ಆಕೆಯನ್ನು ತಡೆದಿದ್ದಾನೆ.

ನಂತರ ಆತನ ಮೂವರು ಸಹಚರರು ಆಕೆಯನ್ನು ಸಮೀಪದ ಮರಗಳ ಹಿಂದೆ ಎಳೆದೊಯ್ದು, ಸಾಮೂಹಿಕ ಅತ್ಯಾಚಾರವೆಸಗಿದ್ದಾರೆ.

### ಶೇ. 20ರಷ್ಟು ಸುಂಕ ಹಿಂದಕ್ಕೆ ಪಡೆದುಕೊಂಡ ಕೇಂದ್ರ

# ಅಗ್ಗದ ದರದಲ್ಲಿ ಗ್ರಾಹಕರಿಗೆ ಈರುಳ್ಳಿ



- ಈರುಳ್ಳಿ ವಿಚಾರದಲ್ಲಿ ಕೇಂದ್ರ ಸರ್ಕಾರದಂದ ಮಹತ್ವದ ಕ್ರಮ: ಸಚಿವ ಪ್ರಲ್ಹಾದ ಜೋಶಿ ಮಾಹಿತಿ
- ಈರುಳ್ಳಿ ರಫ್ತಿನ ಮೇಲಿನ ಶೇ.20ರಷ್ಟು ಸುಂಕವನ್ನು ಹಿಂದಕ್ಕೆ ಪಡೆದುಕೊಂಡ ಕೇಂದ್ರ ಸರ್ಕಾರ
- ತಿಂಗಳಿನಿಂದ ಸರಾಸರಿ ಚಿಲ್ಲರೆ ಬೆಲೆ ಶೇ. 10ರಷ್ಟು ಕುಸಿತ ದಾಖಲಿಸಿದೆ ಎಂದ ಸಚಿವ ಪ್ರಲ್ಹಾದ ಜೋಶಿ

**ಹೊಸದಿಲ್ಲಿ :** ಕೇಂದ್ರ ಸರ್ಕಾರ ಏ.1ರಿಂದಲೇ ಜಾರಿಗೆ ಬರುವಂತೆ ಈರುಳ್ಳಿ ರಫ್ತಿನ ಮೇಲಿನ ಶೇ.20ರಷ್ಟು ಸುಂಕವನ್ನು ಹಿಂತೆಗೆದುಕೊಂಡದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ಭಾರತ ಸರ್ಕಾರದ ಗ್ರಾಹಕ ವ್ಯವಹಾರಗಳ ಇಲಾಖೆ ಸಂವಹನದ ಮೇರೆಗೆ ಕಂದಾಯ ಇಲಾಖೆ ಈ ಬಗ್ಗೆ ಅಧಿಸೂಚನೆ ಹೊರಡಿಸಿದೆ. 2024ರ ಸೆ.13ರಿಂದ ರಫ್ತು ಸುಂಕ ಜಾರಿಯಲ್ಲಿತ್ತು. ಆದರೆ, ಈಗ ದೇಶೀಯವಾಗಿ ಈರುಳ್ಳಿ ಬೆಳೆ ಮತ್ತು ದಾಸ್ತಾನು ಲಭ್ಯತೆ ಆಧರಿಸಿ ಕೇಂದ್ರ ಈ ಕ್ರಮ ಕೈಗೊಂಡಿದೆ ಎಂದು ಸಚಿವ ಜೋಶಿ ತಿಳಿಸಿದ್ದಾರೆ.

2023 ಡಿಸೆಂಬರ್ 8ರಿಂದ 2024ರ ಮೇ 3 ರವರೆಗೆ ಸುಮಾರು ಐದು ತಿಂಗಳ ಕಾಲ ಈರುಳ್ಳಿಗೆ ಸುಂಕ, ಕನಿಷ್ಠ ರಫ್ತು ಬೆಲೆ ಮತ್ತು ರಫ್ತು ನಿಷೇಧ ಹೇರಲಾಗಿತ್ತು. ರಫ್ತು ನಿರ್ಬಂಧದ ಹೊರತಾಗಿಯೂ 2023-24ರಲ್ಲಿ 17.17 ಲಕ್ಷ ಮೆಟ್ರಿಕ್ ಟನ್ ಮತ್ತು 2024-25ರಲ್ಲಿ (ಮಾರ್ಚ್ 18 ರವರೆಗೆ ) 11.65 ಲಕ್ಷ ಮೆಟ್ರಿಕ್ ಟನ್ ಈರುಳ್ಳಿ ರಫ್ತು ಮಾಡಲಾಗಿತ್ತು. ಮಾಸಿಕ ಈರುಳ್ಳಿ ರಫ್ತು ಪ್ರಮಾಣ 2024ರ ಸೆಪ್ಟೆಂಬರ್ ಅಲ್ಲಿ 0.72 ಲಕ್ಷ ಮೆಟ್ರಿಕ್ ಟನ್ ನಿಂದ ಜನವರಿ 2025 ರಲ್ಲಿ 1.85 ಲಕ್ಷ ಮೆಟ್ರಿಕ್ ಟನ್ ಗೆ ಏರಿಕೆಯಾಗಿದೆ. ರಬಿ ಬೆಳೆ ಉತ್ತಮವಾಗಿದ್ದರಿಂದ ಮಂಡಿ ಮತ್ತು ಚಿಲ್ಲರೆ ಮಾರಾಟದ ಬೆಲೆ ಕಡಿಮೆಯಾಗಿದೆ. ಈ ಹಂತದಲ್ಲಿ ರೈತರಿಗೆ ಲಾಭದಾಯಕ ಬೆಲೆ ಖಾತರಿಪಡಿಸುವ ಮತ್ತು ಗ್ರಾಹಕರಿಗೆ ಕೈಗೆಟುಕುವಂತೆ ಈರುಳ್ಳಿ ಬೆಲೆ ಕಾಯ್ದುಕೊಳ್ಳುವಲ್ಲಿ ಕೇಂದ್ರ ಸರ್ಕಾರ ಬದ್ಧತೆ ತೋರಿದೆ ಎಂದು ಪ್ರಲ್ಹಾದ ಜೋಶಿ ಹೇಳಿದ್ದಾರೆ.

> **ದೇಶದಲ್ಲಿ 2023ರ ಆಗಸ್ಟ್ ನಿಂದ ಕಡಿಮೆ ಈರುಳ್ಳಿ ಉತ್ಪಾದನೆ ಮತ್ತು ಹೆಚ್ಚಿನ ಅಂತರಾಷ್ಟ್ರೀಯ ಬೆಲೆ ಸಮಸ್ಯೆ ಎದುರಿಸಬೇಕಾಗಿತ್ತು. ಈಗ ಹೆಚ್ಚು ಉತ್ಪಾದನೆ ಮತ್ತು ಬೆಲೆ ಇಳಿಕೆ ಸ್ವಾಗತಾರ್ಹವಾಗಿದೆ. ಆದರೆ ಯಾವುದೇ ಕಾರಣಕ್ಕೂ ರೈತರಿಗೆ ನಷ್ಟ ಉಂಟಾಗಲು ಬಿಡುವುದಿಲ್ಲ** -ಸಚಿವ ಪ್ರಲ್ಹಾದ ಜೋಶಿ

ಪ್ರಸ್ತುತ ಮಂಡಿ ಬೆಲೆ ಹಿಂದಿನ ವರ್ಷಕ್ಕಿಂತ ಹೆಚ್ಚಿದ್ದರೂ, ಅಖಿಲ ಭಾರತ ಸರಾಸರಿ ಮಾದರಿ ಬೆಲೆ ಶೇ.39ರಷ್ಟು ಕುಸಿತ ಕಂಡು ಬಂದಿದೆ. ಅದೇ ರೀತಿ, ಕಳೆದೊಂದು ತಿಂಗಳಿನಿಂದ ಸರಾಸರಿ ಚಿಲ್ಲರೆ ಬೆಲೆ ಶೇ. 10ರಷ್ಟು ಕುಸಿತ ದಾಖಲಿಸಿದೆ ಎಂದು ಕೇಂದ್ರ ಸಚಿವರು ಮಾಹಿತಿ ನೀಡಿದ್ದಾರೆ. ಈ ತಿಂಗಳಿನಿಂದ ಲಸಲ್ಗಾಂವ್ ಮತ್ತು ಪಿಂಪಾಲ್ಗಾಂವ್ ಮಾರುಕಟ್ಟೆಗಳಲ್ಲಿ ಈರುಳ್ಳಿ ಹೆಚ್ಚು ಹೆಚ್ಚು ಬರುತ್ತಿರುವುದು ಬೆಲೆ ಇಳಿಕೆಗೆ ಕಾರಣವಾಗಿದೆ.

### ಪತಿಗೆ ಪತ್ನಿ ಮೇಲೆ ಮಾಲೀಕತ್ವ ಅಥವಾ ನಿಯಂತ್ರಣ ಸಿಗುವುದಿಲ್ಲ: ಹೈಕೋರ್ಟ್

**ಅಲಹಾಬಾದ್:** ವಿವಾಹದಿಂದ ಪತಿಗೆ ಪತ್ನಿ ಮೇಲೆ ಮಾಲೀಕತ್ವ ಅಥವಾ ನಿಯಂತ್ರಣವನ್ನು ನೀಡುವುದಿಲ್ಲ ಅಥವಾ ವಿವಾಹ ನಂತರ ಹೆಣ್ಣಿನ ಸ್ವಾಯತ್ತತೆ ಅಥವಾ ಗೌಪ್ಯತೆಯ ಹಕ್ಕು ದುರ್ಬಲಗೊಳ್ಳುವುದಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ತೀರ್ಪು ನೀಡಿದೆ. ಫೇಸ್‌ಬುಕ್‌ನಲ್ಲಿ ತನ್ನ ಪತ್ನಿಯೊಂದಿಗೆ ಆತ್ಮೀಯವಾಗಿರುವ ವಿಡಿಯೋವನ್ನು ಅಪ್‌ಲೋಡ್ ಮಾಡಿದ ಆರೋಪ ಹೊತ್ತಿರುವ ವ್ಯಕ್ತಿಯ ವಿರುದ್ಧದ ಕ್ರಿಮಿನಲ್ ಮೊಕದ್ದಮೆಯನ್ನು ರದ್ದುಗೊಳಿಸುವ ಸಂದರ್ಭದಲ್ಲಿ ಅಲಹಾಬಾದ್ ಹೈಕೋರ್ಟ್ ಈ ತೀರ್ಪು ನೀಡಿದೆ.

ತನ್ನ ವಿರುದ್ಧದ ಆರೋಪಪಟ್ಟಿಯನ್ನು ರದ್ದುಗೊಳಿಸುವಂತೆ ಪತಿ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿದ ನ್ಯಾಯಮೂರ್ತಿ ವಿನೋದ್ ದಿವಾಕರ್, ಫೇಸ್‌ಬುಕ್‌ನಲ್ಲಿ ಪತ್ನಿ ಜೊತೆ ಖಾಸಗಿಯಾಗಿ ಕಳೆದ ಕ್ಷಣದ ವಿಡಿಯೋವನ್ನು ಅಪ್‌ಲೋಡ್ ಮಾಡುವ ಮೂಲಕ ವೈವಾಹಿಕ ಸಂಬಂಧದ ಪಾವಿತ್ರ್ಯವನ್ನು ಗಂಭೀರವಾಗಿ ಉಲ್ಲಂಘಿಸಿದ್ದಾರೆ. ಪತಿಯ ಮೇಲೆ ಪತ್ನಿ ಇಟ್ಟಿರುವ ನಂಬಿಕೆ ಮತ್ತು ವಿಶ್ವಾಸವನ್ನು ಗೌರವಿಸಬೇಕು, ಎಂದು ಹೇಳಿದರು.

ಪತ್ನಿಯೊಂದಿಗೆ ಖಾಸಗಿಯಾಗಿ ಕಳೆಯುವ ಕ್ಷಣದ ವಿಡಿಯೋ ಬಹಿರಂಗ ಮಾಡುವ ಕ್ರಿಯೆಯು ಪತಿ ಮತ್ತು ಪತ್ನಿಯ ನಡುವಿನ ಬಾಂಧವ್ಯವನ್ನು ವ್ಯಾಖ್ಯಾನಿಸುವ ಅಂತರ್ಗತ ಗೌಪ್ಯತೆಯ ಉಲ್ಲಂಘನೆಗೆ ಸಮಾನವಾಗಿದೆ. ಈ ನಂಬಿಕೆಯ ಉಲ್ಲಂಘನೆಯು ಸಂಬಂಧದ ಅಡಿಪಾಯವನ್ನೇ ಹಾಳು ಮಾಡುತ್ತದೆ ಮತ್ತು ವೈವಾಹಿಕ ಬಂಧದಿಂದ ರಕ್ಷಿಸಲ್ಪಡುವುದಿಲ್ಲ ಎಂದು ನ್ಯಾಯಮೂರ್ತಿಗಳು ಹೇಳಿದರು. ಪತ್ನಿ ತನ್ನ ಪತಿಯ ಮುಂದುವರಿದ ಭಾಗವಲ್ಲ, ಬದಲಾಗಿ ತನ್ನದೇ ಆದ ಹಕ್ಕುಗಳು, ಆಸೆಗಳು ಮತ್ತು ಸ್ವತಂತ್ರತೆಯನ್ನು ಹೊಂದಿರುವ ವ್ಯಕ್ತಿ. ಅವಳ ದೈಹಿಕ ಸ್ವಾಯತ್ತತೆ ಮತ್ತು ಗೌಪ್ಯತೆಯನ್ನು ಗೌರವಿಸುವುದು ಕೇವಲ ಕಾನೂನು ಬಾಧ್ಯತೆಯಲ್ಲ ನಿಜವಾದ ಸಮಾನ ಸಂಬಂಧವನ್ನು ಬೆಳೆಸುವಲ್ಲಿ ನೈತಿಕ ಕಡ್ಡಾಯವಾಗಿದೆ ಎಂದು ನ್ಯಾಯಾಲಯವು ಹೇಳಿದೆ.

### ಮಧ್ಯಪ್ರಾಚ್ಯದಲ್ಲಿ ಶಾಂತಿ ಎಂಬುದು ಶಾಶ್ವತ ಮರೀಚಿಕೆ, ಇಸ್ರೇಲ್-ಲೆಬನಾನ್ ನಡುವೆ ಹೆಚ್ಚಿನದ ವೈಮನಸ್ಸು

# ಇಸ್ರೇಲ್-ಲೆಬನಾನ್ ನಡುವೆ ಹೊಸ ಯುದ್ಧದ ಬೆದರಿಕೆ



**ಹೊಸದೊಂದು ಸಂಘರ್ಷದ ಅಪಾಯ**

**ಬೈರೂತ್;** ಒಂದಾದ ಮೇಲೊಂದರಂತೆ ಹಿಂಸಾತ್ಮಕ ಸಂಘರ್ಷಗಳಿಗೆ ಸಾಕ್ಷಿಯಾಗುತ್ತಿರುವ ಮಧ್ಯಪ್ರಾಚ್ಯ ಪ್ರದೇಶದಲ್ಲಿ, ಶಾಂತಿ ಎಂಬುದು ನಿಜಕ್ಕೂ ಮರೀಚಿಕೆಯಾಗುತ್ತಿದೆ. ಲೆಬನಾನ್ ತನ್ನ ಭೂಪ್ರದೇಶದಿಂದ ಉಡಾಯಿಸಿರುವ ರಾಕೆಟ್ ದಾಳಿಗೆ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಇಸ್ರೇಲ್ ಹೇಳಿದ್ದು, ಲೆಬನಾನ್ ಪ್ರಧಾನ ಮಂತ್ರಿ ನವಾಫ್ ಸಲಾಂ ಅವರು ದೇಶವು ಹೊಸ ಸಂಘರ್ಷದ ಅಂಚಿನಲ್ಲಿದೆ ಎಂದು ಹೇಳಿದ್ದಾರೆ.

ಇಸ್ರೇಲ್‌ನ ಪ್ರತೀಕಾರದ ಬೆದರಿಕೆಗಳು ಮತ್ತು ಲೆಬನಾನ್ ದಕ್ಷಿಣ ಗಡಿಯಲ್ಲಿನ ಮಿಲಿಟರಿ ಕಾರ್ಯಾಚರಣೆಗಳು, ಲೆಬನಾನ್ ಅನ್ನು ಮತ್ತೊಂದು ಹೊಸ ಯುದ್ಧಕ್ಕೆ ತಳ್ಳಬಹುದು.. ಎಂದು ಪ್ರಧಾನಿ ನವಾಫ್ ಸಲಾಂ ಲೆಬನಾನ್ ನಾಗರಿಕರನ್ನು ಎಚ್ಚರಿಸಿದ್ದಾರೆ.

ದೇಶದ ದಕ್ಷಿಣ ಗಡಿಯಲ್ಲಿ ಮತ್ತೆ ಮಿಲಿಟರಿ ಕಾರ್ಯಾಚರಣೆಗಳು ನಡೆಯುವ ಸಾಧ್ಯತೆ. ಇದರಿಂದ ದೇಶವು ಹೊಸ ಯುದ್ಧಕ್ಕೆ ಸಿಲುಕಬಹುದು. ಇದು ಲೆಬನಾನ್ ಮತ್ತು ಲೆಬನಾನ್‌ನ ಜನರಿಗೆ ತೊಂದರೆ ತರಲಿದೆ.. ಎಂದು ಪ್ರಧಾನಿ ನವಾಫ್ ಸಲಾಂ ಹೇಳಿರುವುದು ಗಮನ ಸೆಳೆದಿದೆ.

ಲೆಬನಾನ್ ಯುದ್ಧ ಮತ್ತು ಶಾಂತಿಯ ಬಗ್ಗೆ ನಿರ್ಧರಿಸುತ್ತದೆ. ಎಲ್ಲಾ ಭದ್ರತಾ ಮತ್ತು ಮಿಲಿಟರಿ ಕ್ರಮಗಳನ್ನು ನಾವು ತ್ವರಿತವಾಗಿ ತೆಗೆದುಕೊಳ್ಳುತ್ತೇವೆ. ಆದರೆ ಸಂಭಾವ್ಯ ಯುದ್ಧವು ಖಂಡಿತವಾಗಿಯೂ ಘೋರವಾಗಿರಲಿದೆ ಎಂದು ಲೆಬನಾನ್ ಪ್ರಧಾನಿ ನವಾಫ್ ಸಲಾಂ ಎಚ್ಚರಿಸಿದ್ದಾರೆ.

ಇಸ್ರೇಲ್ ಮತ್ತು ಹೆಜ್ಬುಲ್ಲಾ ನಡುವಿನ ಒಂದು ವರ್ಷದ ಸಂಘರ್ಷವನ್ನು ಕೊನೆಗೊಳಿಸಿದ ಕದನ ವಿರಾಮವು, ಈಗ ಮತ್ತೆ ಅಪಾಯಕ್ಕೆ ಸಿಲುಕಿದೆ. ಇತ್ತೀಚಿನ ರಾಕೆಟ್ ದಾಳಿಗಳು ಈ ಒಪ್ಪಂದಕ್ಕೆ ಧಕ್ಕೆ ತಂದಿದ್ದು, ಇಸ್ರೇಲ್ ಈಗಾಗಲೇ ದಕ್ಷಿಣ ಲೆಬನಾನ್ ಪ್ರಾಂತ್ಯದಲ್ಲಿ ಫಿರಂಗಿ ಮತ್ತು ವಾಯುದಾಳಿಗಳನ್ನು ನಡೆಸಿದೆ.

ಸದ್ಯದ ಪರಿಸ್ಥಿತಿಯು ಬಹಳ ಸೂಕ್ಷ್ಮವಾಗಿದ್ದು, ಒಂದು ಸಣ್ಣ ಕಿಡಿಯು ದೊಡ್ಡ ಯುದ್ಧಕ್ಕೆ ಕಾರಣವಾಗಬಹುದು. ಲೆಬನಾನ್ ಮತ್ತು ಇಸ್ರೇಲ್ ಎರಡೂ ಸಂಯಮದಿಂದ ವರ್ತಿಸುವುದು ಮುಖ್ಯ.

- ಮಧ್ಯಪ್ರಾಚ್ಯದಲ್ಲಿ ಹೊಸದೊಂದು ಸಂಘರ್ಷದ ಅಪಾಯ
- ಇಸ್ರೇಲ್-ಲೆಬನಾನ್ ನಡುವೆ ಹೆಚ್ಚಿನದ ವೈಮನಸ್ಸು
- ಲೆಬನಾನ್ ಭೂ ಪ್ರದೇಶದಿಂದ ಇಸ್ರೇಲ್‌ನತ್ತ ರಾಕೆಟ್ ದಾಳಿ
- ಪ್ರತೀಕಾರ ತೀರಿಸಿಕೊಳ್ಳುವುದಾಗಿ ಬೆದರಿಕೆಯೊಡ್ಡಿದ ಇಸ್ರೇಲ್
- ಹೊಸ ಯುದ್ಧಕ್ಕೆ ಸಿದ್ಧರಾಗುಂತೆ ಲೆಬನಾನ್ ಕರೆ

ಮಾತುಕತೆಗಳ ಮೂಲಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕು ಅಂತಾರಾಷ್ಟ್ರೀಯ ಸಮುದಾಯವು ಈ ನಿಟ್ಟಿನಲ್ಲಿ ಮಧ್ಯಸ್ಥಿಕೆ ವಹಿಸಬೇಕು ಎಂಬುದು ಜಾಗತಿಕ ಶಾಂತಿ ಪ್ರಿಯರ ಆಗ್ರಹವಾಗಿದೆ. ಲೆಬನಾನ್ ಈಗಾಗಲೇ ಅನೇಕ ಸಮಸ್ಯೆಗಳಿಂದ ಬಳಲುತ್ತಿದೆ. ಹೊಸ ಯುದ್ಧವು ದೇಶವನ್ನು ಇನ್ನಷ್ಟು ಸಂಕಷ್ಟಕ್ಕೆ ದೂಡುವುದರಲ್ಲಿ ಯಾವುದೇ ಅನುಮಾನವಿಲ್ಲ.

ಲೆಬನಾನ್ ಜನರು ಶಾಂತಿಯನ್ನು ಬಯಸುತ್ತಿದ್ದು, ಅವರಿಗೆ ನೆಮ್ಮದಿಯ ಜೀವನ ನಡೆಸಲು ಅವಕಾಶ ಸಿಗಬೇಕು.

ಇಸ್ರೇಲ್ ತನ್ನ ಭದ್ರತೆಯನ್ನು ಕಾಪಾಡಿಕೊಳ್ಳುವ ಹಕ್ಕು ಹೊಂದಿದೆಯಾದರೂ, ಅದು ಲೆಬನಾನ್‌ನೊಂದಿಗೆ ಸಂಘರ್ಷಕ್ಕೆ ಇಳಿಯದೇ ಶಾಂತಿಯುತ ಮಾತುಕತೆಯನ್ನು ನಡೆಸಬೇಕು. ಉಭಯ ದೇಶಗಳು ಪರಸ್ಪರ ಗೌರವದಿಂದ ನಡೆದುಕೊಂಡರೆ ಮಾತ್ರ ಶಾಂತಿ ಸಾಧ್ಯ ಎಂಬುದು ನಿರ್ವಿವಾದ.

### ದಾಳಿಗಳಿಗೆ ಪ್ರತ್ಯುತ್ತರ ನೀಡಲು ಸಿದ್ಧ

**ಇಸ್ರೇಲ್ ಮತ್ತು ಹೆಜ್ಬುಲ್ಲಾ ನಡುವಿನ ಕದನ ವಿರಾಮವು ರಾಕೆಟ್ ದಾಳಿಯಿಂದಾಗಿ ಅಪಾಯದಲ್ಲಿದೆ. ಇಸ್ರೇಲ್ ಸೇನಾ ಮುಖ್ಯಸ್ಥ ಎಯಲ್ ಝಮಿರ್ ಅವರು, ಗಾಜಾ, ಯೆಮೆನ್ ಮತ್ತು ಲೆಬನಾನ್ ಭೂ ಪ್ರದೇಶಗಳಿಂದ ಇಸ್ರೇಲ್ ಮೇಲೆ ರಾಕೆಟ್ ದಾಳಿ ನಡೆಸಲಾಗುತ್ತಿದೆ. ಎಂದು ಹೇಳಿದ್ದಾರೆ. ಅಲ್ಲದೆ ಈ ರಾಕೆಟ್ ದಾಳಿಗಳಿಗೆ ಸೂಕ್ತ ಪ್ರತೀಕಾರವೂ ತೀರಿಸಿಕೊಳ್ಳುವುದಾಗಿ ಝಮೀರ್ ಎಚ್ಚರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಲೆಬನಾನ್ ವಾಸಿಗಳಿಗೆ ಹೊಸ ಯುದ್ಧದ ಎಚ್ಚರಿಕೆ ನೀಡಿರುವ ಪ್ರಧಾನಿ ನವಾಫ್ ಸಲಾಂ, ಇಸ್ರೇಲ್‌ನ ಸಂಭಾವ್ಯ ಪ್ರತೀಕಾರದ ದಾಳಿಗಳಿಗೆ ಪ್ರತ್ಯುತ್ತರ ನೀಡಲು ಸಿದ್ಧ ಎಂದು ಗುಡುಗಿದ್ದಾರೆ.**

# ‘ಒಂದೇ ವರ್ಷದಲ್ಲಿ ಎರಡು ಬಾರಿ ಹೃದಯ ಒಡೆದಿದೆ’

ಐಪಿಎಲ್ ಪಂದ್ಯದ ನಂತರ ವಿರಾಟ್ ಕೊಹ್ಲಿ ಒಂದೇ ವರ್ಷದಲ್ಲಿ ನನ್ನ ಹೃದಯ ಎರಡು ಬಾರಿ ಒಡೆದಿದೆ ಎಂದು ಹೇಳುತ್ತಿರುವುದು ನಾವು ವಿಡಿಯೋದಲ್ಲಿ ಕಾಣಬಹುದಾಗಿದೆ. ವಿರಾಟ್ ಪ್ರಕಾರ, 2016 ರಲ್ಲಿ ವಿರಾಟ್ ಕೊಹ್ಲಿಗೆ ಎರಡು ಆಘಾತಗಳು ಎದುರಾಗಿದ್ದವು. ಇದರಲ್ಲಿ ಮೊದಲನೆಯದ್ದು, 2016 ರಲ್ಲಿ ನಡೆದಿದ್ದ ಟಿ20 ವಿಶ್ವಕಪ್‌ನಲ್ಲಿ ಟೀಂ ಇಂಡಿಯಾ ಟ್ರೋಫಿ ಗೆಲ್ಲಲು ವಿಫವಾಗಿತ್ತು. ಎರಡನೇಯದ್ದು ಅದೇ ವರ್ಷ ಐಪಿಎಲ್ ಫೈನಲ್‌ನಲ್ಲಿ ಆರ್‌ಸಿಬಿಯ ಸೋಲು. ಈ ಎರಡು ಘಟನೆಗಳು ಕೊಹ್ಲಿಯ ಹೃದಯ ಒಡೆದಿದ್ದವು ಎಂಬುದನ್ನು ಅವರೇ ಹೇಳಿಕೊಂಡಿದ್ದಾರೆ.




**2016 ರ ಐಪಿಎಲ್‌ನಲ್ಲಿ ವಿರಾಟ್ ಪ್ರದರ್ಶನ:** ವಿರಾಟ್ ಕೊಹ್ಲಿ ಅವರ ಪ್ರದರ್ಶನದ ದೃಷ್ಟಿಯಿಂದ ಐಪಿಎಲ್ 2016 ಈ ಕ್ರಿಕೆಟ್ ಲೀಗ್‌ನ ಅತ್ಯುತ್ತಮ ಸೀಸನ್ ಆಗಿದೆ. ಏಕೆಂದರೆ ಆ ಸೀಸನ್‌ನಲ್ಲಿ ಅವರು ಗಳಿಸಿದ ರನ್‌ಗಳ ಸಂಖ್ಯೆ ಇದುವರೆಗಿನ ಯಾವುದೇ ಆವೃತ್ತಿಯಲ್ಲಿ ಯಾವುದೇ ಬ್ಯಾಟ್ಸ್‌ಮನ್ ಗಳಿಸಿದ ರನ್‌ಗಳಿಗಿಂತ ಹೆಚ್ಚಾಗಿದೆ. 2016 ರ ಐಪಿಎಲ್‌ನಲ್ಲಿ ವಿರಾಟ್ ಕೊಹ್ಲಿ 973 ರನ್ ಕಲೆಹಾಕಿದ್ದರು. ಇದು ಒಂದು ಆವೃತ್ತಿಯಲ್ಲಿ ಬ್ಯಾಟ್ಸ್‌ಮನ್ ಒಬ್ಬ ಕಲೆಹಾಕಿದ ಅತ್ಯಧಿಕ ಮೊತ್ತವಾಗಿದೆ. ಇದುವರೆಗೆ ಈ ದಾಖಲೆಯನ್ನು ಯಾರಿಗೂ ಮುರಿಯಲು ಸಾಧ್ಯವಾಗಿಲ್ಲ.

**ಕೊಹ್ಲಿ ಆಟಕ್ಕೆ ಸಾಟಿಯಿಲ್ಲ:** ಇದು ಮಾತ್ರವಲ್ಲದೆ ವಿರಾಟ್ ಕೊಹ್ಲಿ ಐಪಿಎಲ್ ಇತಿಹಾಸದಲ್ಲಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರ ಕೂಡ. ಐಪಿಎಲ್ ನಲ್ಲಿ 8000 ಕ್ಕೂ ಹೆಚ್ಚು ರನ್ ಗಳಿಸಿದ ಏಕೈಕ ಆಟಗಾರ ಎಂಬ ದಾಖಲೆ ಕೊಹ್ಲಿ ಹೆಸರಿನಲ್ಲಿದೆ. ಅಲ್ಲದೆ ಒಂದೇ ಫ್ರಾಂಚೈಸಿ ಪರ ಕೊಹ್ಲಿ ಈ ಸಾಧನೆ ಮಾಡಿರುವುದು ವಿಶೇಷ.

# ಅಶುತೋಷ್ ಶರ್ಮಾ ಆರ್ಭಟಕ್ಕೆ ನಡುಗಿದ ಲಖನೌ

ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಸ್ಫೋಟಕ ಅರ್ಧಶತಕ ಸಿಡಿಸಿ ದಿಲ್ಲಿ ಕ್ಯಾಪಿಟಲ್ಸ್ ತಂಡದ ಗೆಲುವಿಗೆ ಕಾರಣರಾದ ಅಶುತೋಷ್ ಶರ್ಮಾ ಇದು ಕ್ರಿಕೆಟ್ ಪ್ರೇಮಿಗಳನ್ನು ಅಕ್ಷರಶಃ ತುದಿಗಾಲಲ್ಲಿ ನಿಲ್ಲಿಸಿದ ಪಂದ್ಯ. ಲಖನೌ ಸೂಪರ್ ಜೈಂಟ್ಸ್ ನೀಡಿದ್ದ ಬೃಹತ್ ಮೊತ್ತವನ್ನು ಬೆಂಬತ್ತಿ ಹೊರಟಿದ್ದ ದಿಲ್ಲಿ ಕ್ಯಾಪಿಟಲ್ಸ್ ತಂಡ ಸುಲಭವಾಗಿ ಸೋಲುವ ಹಂತದಲ್ಲಿತ್ತು. ಆದರೆ ಮಧ್ಯಮ ಕ್ರಮಾಂಕದಲ್ಲಿ ಅಶುತೋಶ್ ಶರ್ಮಾ ಮತ್ತು ವಿಪ್ರಾಜ್ ನಿಗಮ್ ಅವರ ಭರ್ಜರಿ ಬ್ಯಾಟಿಂಗ್ ಪ್ರದರ್ಶನದಿಂದಾಗಿ ದಿಲ್ಲಿ ಕ್ಯಾಪಿಟಲ್ಸ್ ತಂಡ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಅಂತಿಮ ಓವರ್ ನಲ್ಲಿ ಜಯಘೋಷ ಬಾರಿಸಿದೆ. ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ಲಖನೌ ಸೂಪರ್ ಜೈಂಟ್ಸ್ ತಂಡ ಆರಂಭದಿಂದಲೇ ಆಕ್ರಮಣಕಾರಿ ಆಟವನ್ನಾಡಿತು.




ಏಡನ್ ಮಾಕ್ರಂ ಮತ್ತು ಮಿಚೆಲ್ ಮಾರ್ಶ್ ಅವರು ಮೊದಲ ವಿಕೆಟ್‌ಗೆ ಕೇವಲ 4.4 ಓವರ್ ಗಳಲ್ಲಿ 44 ರನ್ ಪೇರಿಸಿದರು.13 ಎಸೆತಗಳಿಂದ ತಲಾ ಒಂದು ಬೌಂಡರಿ ಮತ್ತು ಸಿಕ್ಸರ್ ಗಳನ್ನು ಹೊಡೆದಿದ್ದ ಮಾಕ್ರಂ ಅವರನ್ನು ವಿಗರಾಜ್ ನಿಗಮ್ ಅವರು ಮಿಚೆಲ್ ಸ್ಟಾರ್ಕ್ ಅವರಿಗೆ ಕ್ಯಾಚ್ ಕೊಡಿಸುವಲ್ಲಿ ಯಶಸ್ವಿಯಾದರು.

ಆ ಬಳಿಕ ಮಿಚೆಲ್ ಸ್ಟಾರ್ಕ್ ಮತ್ತು ನಿಕೋಲಸ್ ಪೂರನ್ ಅವರು 2ನೇ ವಿಕೆಟ್ ಗೆ ಮಹತ್ವದ 87 ರನ್ ಗಳ ಜೊತೆಯಾಟವಾಡಿದರು. ಕೇವಲ 36 ಎಸೆತಗಳಿಂದ 72 ರನ್ ಗಳಿಸಿದರು. ಅಧರಲ್ಲಿ ತಲಾ 6 ಬೌಂಡರಿ ಮತ್ತು 6 ಸಿಕ್ಸರ್ ಗಳಿದ್ದವು. ನಿಕೋಲಸ್ ಪೂರನ್ ಅವರು ಕೇವಲ 30 ಎಸೆತಗಳಿಂದ 6 ಬೌಂಡರಿ ಮತ್ತು 7 ಸಿಕ್ಸರ್ ಗಳಿದ್ದ 75 ರನ್ ಗಳಿಸಿದರು. ಆದರೆ ನಾಯಕ ರಿಷಬ್ ಪಂತ್ ಅವರು ಶೂನ್ಯಕ್ಕೆ ಔಟಾಗಿ ಅಭಿಮಾನಿಗಳಿಗೆ ನಿರಾಶೆ ಮೂಡಿಸಿದರು. ಆಯುಷ್ ಬದೋನಿ(4), ಶಾರ್ದೂಲ್ ಠಾಕೂರ್(0) ಅವರು ಸಹ ಉತ್ತಮ ಬ್ಯಾಟಿಂಗ್ ಪ್ರದರ್ಶಿಸಲು ವಿಫಲರಾದರು. ಆದರೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದು ತುದಿಯಲ್ಲಿ ಗಟ್ಟಿಯಾಗಿ ನೆಲೆಯೂರಿದ್ದ ಡೇವಿಡ್ ಮಿಲ್ಲರ್ ಅರು 19 ಎಸೆತಗಳಲ್ಲಿ ಔಟಾಗದೆ 27 ರನ್ ಗಳಿಸಿದ್ದರಿಂದ ತಂಡ 200ರ ಗಡಿ ದಾಟಿತು. ದಿಲ್ಲಿ ಪರ ವೇಗಿ ಮಿಚೆಲ್ ಸ್ಟಾರ್ಕ್ 42 ರನ್ ಗೆ 3 ವಿಕೆಟ್ ಕಬಳಿಸಿದರು. ಕುಲ್ದೀಪ್ ಯಾದವ್ ಅವರು 20 ರನ್ ಗೆ 2 ವಿಕೆಟ್ ಗಳಿಸಿದರು. ವಿಪ್ರಾಜ್ ನಿಗಮ್, ಮುಕೇಶ್ ಕುಮಾರ್ ತಲಾ ಒಂದು ವಿಕೆಟ್ ಉರುಳಿಸಿದರು.

## ಮಾಲೀಕನಿಗೆ ಹೆದರುತ್ತಲೇ ಪೆವಿಲಿಯನ್ ಸೇರಿದ ನಾಯಕ



**2025ರ ಐಪಿಎಲ್‌ನ ನಾಲ್ಕನೇ ಪಂದ್ಯದಲ್ಲಿ ಲಕ್ನೋ ಸೂಪರ್ ಜೈಂಟ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಮುಖಾಮುಖಿಯಾಗಿವೆ. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ 210 ರನ್‌ಗಳ ಟಾರ್ಗೆಟ್ ನೀಡಿದೆ. ಲಕ್ನೋ ಕಲೆಹಾಕಿರುವ ಈ ಬೃಹತ್ ಮೊತ್ತಕ್ಕೆ ಪೂರನ್ ಹಾಗೂ ಮಾರ್ಷ್ ಕೊಡುಗೆಯ ಅಪಾರವಾಗಿತ್ತು. ಆದಾಗ್ಯೂ ಲಕ್ನೋ ತಂಡದ ಹೊಸ ನಾಯಕ ರಿಷಭ್ ಪಂತ್ ಉತ್ತಮ ಪ್ರದರ್ಶನ ನೀಡುತ್ತಾರೆಂದು ಎಲ್ಲರೂ ನಿರೀಕ್ಷಿಸಿದ್ದರು. ಆದರೆ ಪಂತ್ ತಮ್ಮ ಚೊಚ್ಚಲ ಪಂದ್ಯದಲ್ಲೇ ಎಲ್ಲರ ಭರವಸೆಯನ್ನು ಹುಸಿಗೊಳಿಸಿದ್ದಾರೆ.**

# ಧೋನಿಯಿಂದ ಬೆನ್ನುತಟ್ಟಿಸಿಕೊಂಡ ವಿಘ್ನೇಶ್ ಪುತ್ತೂರು ಯಾರು

ಉದಯೋನ್ಮುಖ ಪ್ರತಿಭೆಗಳಿಗೆ ದೊಡ್ಡ ವೇದಿಕೆಯಾಗಿರುವ ಇಂಡಿಯನ್ ಪ್ರೀಮಿಯರ್ ಲೀಗ್‌ನ 18ನೇ ಆವೃತ್ತಿಯಲ್ಲಿ ಹೊಸ ಹೊಸ ಪ್ರತಿಭೆಗಳು ಬೆಳಕಿಗೆ ಬರಲಾರಂಭಿಸಿವೆ. ಅತ್ತ ಬಿಸಿಸಿಐನಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಇಶಾನ್ ಕಿಶನ್ ಶತಕ ಸಿಡಿಸಿ ಅಬ್ಬರಿಸಿದ್ರೆ, ಇದೇ ಚೊಚ್ಚಲ ಐಪಿಎಲ್ ಪಂದ್ಯವನ್ನಾಡಿದ ಕೇರಳ ಮೂಲದ ಯುವಕ ಸದ್ಯ ಕ್ರಿಕೆಟ್ ಲೋಕದಲ್ಲಿ ಸುದ್ದಿಯಲ್ಲಿದ್ದಾರೆ.

ಸೂಪರ್ ಸಂಡೇ ಚೆಪಾಕ್‌ನಲ್ಲಿ ನಡೆದ ಐಪಿಎಲ್‌ನ 3ನೇ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ವಿರುದ್ಧ ಸಿಎಸ್‌ಕೆ 4 ವಿಕೆಟ್ ಗಳ ಗೆಲುವು ದಾಖಲಿಸಿತು. ಈ ಮೂಲಕ 18ನೇ ಆವೃತ್ತಿಯಲ್ಲಿ ಗೆಲುವಿನ ಶುಭಾರಂಭ ಮಾಡಿತು. ಆದ್ರೆ ಈ ಪಂದ್ಯದಲ್ಲಿ ಮಿಂಚಿದ್ದು ಇಂಪ್ಯಾಕ್ಟ್ ಪ್ಲೇಯರ್ ಆಗಿ ಕಣಕ್ಕಿಳಿದ ಕೇರಳ ಮೂಲದ ಯುವಕ ವಿಘ್ನೇಶ್ ಪುತ್ತೂರು.

ಹೌದು. ಕೇರಳದ ಮಲಪ್ಪುರಂನ 24 ವರ್ಷದ ವಿಘ್ನೇಶ್, ಮುಂಬೈ ಇಂಡಿಯನ್ಸ್ ಪರ ಐಪಿಎಲ್‌ಗೆ ಪದಾರ್ಪಣೆ ಮಾಡಿದ್ದಾರೆ. ಸೂಪರ್ ಸಂಡೇ ರೋಹಿತ್ ಶರ್ಮಾ ಬದಲಿಗೆ ಇಂಪ್ಯಾಕ್ಟ್ ಪ್ಲೇಯರ್ ಆಗಿ ಕಣಕ್ಕಿಳಿದಿದ್ದ ವಿಘ್ನೇಶ್ ತಮ್ಮ ಸ್ಪಿನ್ ಮೋಡಿಯಿಂದ ಆಕರ್ಷಿಸಿದರು. ಸ್ವಾರಸ್ಯವೆಂದರೆ ವಿಘ್ನೇಶ್ ಕೇರಳ ಪರ ಹಿರಿಯರ ಮಟ್ಟದಲ್ಲಿ ಈ ವರೆಗೆ ಒಂದೇ ಒಂದು ಪಂದ್ಯವನ್ನೂ ಆಡಿದವರಲ್ಲ. ಆದರೂ ಘಟಾನುಘಟಿಗಳ ಅಖಾಡಕ್ಕೆ ಧುಮುಕಿ ಸಿಕ್ಕ ಅವಕಾಶವನ್ನು ಸದ್ಬಳಕೆ ಮಾಡಿಕೊಂಡರು, ಫೀಲ್ಡಿಂಗ್‌ನಲ್ಲೂ ವಿಘ್ನೇಶ್ ಗಮನ ಸೆಳೆದಿದ್ದು ವಿಶೇಷ.

ಮುಂಬೈ ತಂಡದ ಇಂಪ್ಯಾಕ್ಟ್ ಆಟಗಾರನಾಗಿ ಬಂದ ಕೇರಳದ ಮೂಲದ ವಿಘ್ನೇಶ್ ಪುತ್ತೂರು, ಸಿಕ್ಕ ಅವಕಾಶವನ್ನು ಚೆನ್ನಾಗಿ ಬಳಸಿಕೊಂಡರು. ಉತ್ತಮವಾಗಿ ಬೌಲಿಂಗ್ ಮಾಡಿದ ವಿಘ್ನೇಶ್ ಅವರ ಬಳಿ ಸ್ವತಃ ಧೋನಿಯೇ ಹೋಗಿ ಭುಜ ತಟ್ಟಿ ಶ್ಲಾಘಿಸಿದರು. ಧೋನಿಯಿಂದ ಮೆಚ್ಚುಗೆ ಪಡೆದು ವಿಘ್ನೇಶ್ ಸಂತಸಗೊಂಡರು.




**ಯಾರು ಈ ವಿಘ್ನೇಶ್ ಪುತ್ತೂರು:** ವಿಘ್ನೇಶ್ ಪುತ್ತೂರು ಬಲಗೈ ಬ್ಯಾಟರ್ ಹಾಗೂ ಎಡಗೈ ಸ್ಪಿನ್ ಬೌಲರ್. 2001ರ ಮಾರ್ಚ್ 2 ರಂದು ಜನಿಸಿದ ವಿಘ್ನೇಶ್ ಮಲಪ್ಪುರಂ ಜಿಲ್ಲೆಯ ಪೆರಿಂಥಲ್ಮನ್ ನಿವಾಸಿ. 14 ವರ್ಷದೊಳಗಿನ ಮತ್ತು 19 ವರ್ಷದೊಳಗಿನ ಮಟ್ಟದಲ್ಲಿ ಕೇರಳ ಪರ ಮಾತ್ರ ಆಡಿದ್ದಾರೆ. ಇನ್ನೂ ಹಿರಿಯರ ಮಟ್ಟದಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸಿಲ್ಲ. ಕೇರಳ ಕ್ರಿಕೆಟ್ ಲೀಗ್‌ನಲ್ಲಿ ಅಲೆಪ್ಪಿ ರಿಪ್ಪಲ್ಸ್ ಪರ ಆಡಿದ್ದು, ಮೂರು ಪಂದ್ಯಗಳಿಂದ ಕೇವಲ ಎರಡು ವಿಕೆಟ್‌ಗಳನ್ನು ಮಾತ್ರ ಪಡೆದರು. ಈ ಮಧ್ಯೆ ತಮಿಳುನಾಡು ಪ್ರೀಮಿಯರ್ ಲೀಗ್‌ನಲ್ಲಿಯೂ ಸಹ ಆಡಿದ್ದಾರೆ.

**ಹೆತ್ತವರ ಪ್ರೋತ್ಸಾಹವೇ ಶ್ರೀರಕ್ಷೆ:** ವಿಘ್ನೇಶ್ ಬೆಳವಣಿಗೆ ಹಿಂದೆ ಹೆತ್ತವರ ಪ್ರೋತ್ಸಾಹವಿದೆ. ಆರ್ಥಿಕ ಸವಾಲುಗಳನ್ನು ಹೊಂದಿರುವ ಕುಟುಂಬದಲ್ಲಿ ಜನಿಸಿದ ವಿಘ್ನೇಶ್, ಎಂದಿಗೂ ಕ್ರೀಡೆಯ ಮೇಲಿನ ತನ್ನ ಆಸಕ್ತಿ ಕಡಿಮೆ ಮಾಡಿಕೊಂಡಿರಲಿಲ್ಲ. ತಂದೆ ಸುನಿಲ್ ಕುಮಾರ್ ಆಟೋ ಚಾಲಕರಾಗಿದ್ದರೆ, ತಾಯಿ ಕೆ.ಪಿ. ಬಿಂದು ಗೃಹಿಣಿ. ಆರಂಭದಲ್ಲಿ ಮಧ್ಯಮ ವೇಗ ಮತ್ತು ಸ್ಪಿನ್ ಬೌಲಿಂಗ್ ಮಾಡುತ್ತಿದ್ದರು. ತಮ್ಮ ಬೌಲಿಂಗ್ ಅನ್ನು ಸುಧಾರಿಸಿಕೊಳ್ಳುತ್ತಲೇ ಇದ್ದರು. ನಂತರ ಅವರು ಕ್ರಿಕೆಟ್ ವೃತ್ತಿಜೀವನವನ್ನು ಮುಂದುವರಿಸಲು ತ್ರಿಶೂರ್‌ಗೆ ತೆರಳಿದರು. ಅಲ್ಲಿ ಸೇಂಟ್ ಥಾಮಸ್ ಕಾಲೇಜಿನ ಪರ ಕೇರಳ ಕಾಲೇಜು ಪ್ರೀಮಿಯರ್ ಟಿ20 ಲೀಗ್‌ನಲ್ಲಿ ಪ್ರಮುಖ ಬೌಲರ್ ಗಳಲ್ಲಿ ಒಬ್ಬರಾಗಿದ್ದರು. ದೇಶೀಯ ಕ್ರಿಕೆಟ್‌ನಲ್ಲಿ ಕೇರಳ ಪರ ಪಾದಾರ್ಪಣೆ ಮಾಡುವ ಮೊದಲು 2025ರ ಟಾಟಾ ಐಪಿಎಲ್ ಹರಾಜಿನಲ್ಲಿ ಮುಂಬೈ ಇಂಡಿಯನ್ಸ್ ತಂಡಕ್ಕೆ 30 ಲಕ್ಷ ರೂ.ಗೆ ಹರಾಜಾದರು.

**ದಕ್ಷಿಣ ಆಫ್ರಿಕಾಗೆ ತೆರಳಿದ್ದ ವಿಘ್ನೇಶ್:** ವಿಘ್ನೇಶ್ ಪುತ್ತೂರು ಅವರನ್ನು ಟಿ 20 ಲೀಗ್‌ಗಾಗಿ ಮುಂಬೈ ಕೇಪ್‌ಟೌನ್‌ನೊಂದಿಗೆ ದಕ್ಷಿಣ ಆಫ್ರಿಕಾಕ್ಕೆ ಕಳುಹಿಸಲಾಗಿತ್ತು. ಈ ಟೂರ್ನಿಯಲ್ಲಿ ರಶೀದ್ ಖಾನ್, ಟ್ರೆಂಟ್ ಬೌಲ್ಟ್ ಅವರಂತಹ ದಿಗ್ಗಜ ಬೌಲರ್‌ಗಳೊಂದಿಗೆ ಸಮಯ ಕಳೆದ ವಿಘ್ನೇಶ್ ಬೌಲಿಂಗ್ ಟ್ರಿಕ್ಸ್ ಕಲಿತು ದೇಶಕ್ಕೆ ಮರಳಿದ್ದರು. ಇದೇ ಅವಕಾಶ ಅವರನ್ನು ದೇಶಾದ್ಯಂತ ಮೆಚ್ಚುಗೆ ಗಳಿಸುವಂತೆ ಮಾಡಿದೆ. ಸೋಷಿಯಲ್ ಮಿಡಿಯಾ ಎಕ್ಸ್‌ನಲ್ಲೂ ಟಾಪ್ ಟ್ರೆಂಡಿಂಗ್‌ನಲ್ಲಿದ್ದಾರೆ.

# ರಶ್ಮಿಕಾ ಅಪ್ಪನಿಗೆ ಇಲ್ಲದಿರೋ ತೊಂದರೆ ನಿಮಗ್ಯಾಕೆ



ಸಲ್ಮಾನ್ ಖಾನ್, ರಶ್ಮಿಕಾ ಮಂದಣ್ಣ ನಟನೆಯ ‘ಸಿಕಂದರ್’ ಚಿತ್ರ ಮಾ.30ರಂದು ರಿಲೀಸ್‌ಗೆ ರೆಡಿಯಿದೆ. ಸದ್ಯ ಮುಂಬೈನಲ್ಲಿ ಚಿತ್ರದ ಟ್ರೈಲರ್ ರಿಲೀಸ್ ಸಮಾರಂಭ ಅದ್ದೂರಿಯಾಗಿ ಜರುಗಿದೆ. ಈ ವೇಳೆ, ರಶ್ಮಿಕಾ ಜೊತೆಗಿನ ವಯಸ್ಸಿನ ಅಂತರದ ಬಗ್ಗೆ ಸಲ್ಮಾನ್‌ರನ್ನು ಟ್ರೋಲ್ ಮಾಡಿದ್ದರ ಬಗ್ಗೆ ಪ್ರಶ್ನೆ ಎದುರಾಗಿದೆ. ಆಗ ಅವರ ಅಪ್ಪನಿಗೆ ಏನು ತೊಂದರೆ ಇಲ್ಲ ಮತ್ಯಾಕೆ ನಿಮಗೆ ಸಮಸ್ಯೆ ಎಂದು ಖಡಕ್ ಆಗಿ ಸಲ್ಮಾನ್ ಮಾತನಾಡಿದ್ದಾರೆ.

**ಟ್ರೋಲಿಗರಿಗೆ ಸಲ್ಮಾನ್ ಖಾನ್ ತಿರುಗೇಟು**

‘ಸಿಕಂದರ್’ ಸಿನಿಮಾಗೆ ‘ಪುಷ್ಪ 2’ ನಟಿ ನಾಯಕಿ ಎನ್ನುತ್ತಿದ್ದಂತೆ ಸಲ್ಮಾನ್ ಮತ್ತು ರಶ್ಮಿಕಾ ವಯಸ್ಸಿನ ಬಗ್ಗೆ ಚರ್ಚೆ ನಡೆದಿತ್ತು. ಸಲ್ಮಾನ್‌ಗಿಂತ ರಶ್ಮಿಕಾ 31 ವರ್ಷ ಚಿಕ್ಕವರು. ಹಾಗಾಗಿ ಸಹಜವಾಗಿ ಸಲ್ಮಾನ್ ಟೀಕೆಗೆ ಗುರಿಯಾಗಿದ್ರು. ಹಾಗಾಗಿ ಇದೀಗ ಚಿತ್ರದ ಪ್ರಚಾರ ಕಾರ್ಯದ ವೇಳೆ ಸಲ್ಮಾನ್ ಮಾತನಾಡಿ, ಹೀರೋಯಿನ್‌ಗೆ ಯಾವುದೇ ಸಮಸ್ಯೆ ಇಲ್ಲ. ಅವರ ತಂದೆಗೂ ಕೂಡ ಯಾವುದೇ ಸಮಸ್ಯೆ ಇಲ್ಲ, ಹೀಗಿರುವಾಗ ನಿಮ್ಮದೇನು ನಿಮಗ್ಯಾಕೆ ಇದು ಸಮಸ್ಯೆಯಂತೆ ಕಾಣುತ್ತಿದೆ ಎಂದು ಕೇಳಿದ್ದಾರೆ.

ಮುಂದುವರೆದು, ರಶ್ಮಿಕಾಗೆ ನಾಳೆ ಮದುವೆ ಯಾಗ್ತಾರೆ, ಮುಂದೆ ಮಕ್ಕಳಾಗುತ್ತೆ, ಆಗಲೂ ಕೂಡ ಅವರಿಗೆ ಚಿತ್ರರಂಗದಲ್ಲಿ ಕೆಲಸ ಮಾಡಲು ಅವರ ಪತಿಯಿಂದ ಅನುಮತಿ ಸಿಗುತ್ತೆ ಎಂದು ಭಾವಿಸಿದ್ದೇನೆ ಎಂದು ಸಲ್ಮಾನ್ ಹೇಳಿದ್ದಾರೆ. ಮುಂದೆಯೂ ಕೂಡ ಅವರೊಂದಿಗೆ ಸಿನಿಮಾ ಮಾಡುತ್ತೇನೆ ಎಂದು ಟ್ರೋಲಿಗರಿಗೆ ನಟ ತಿರುಗೇಟು ನೀಡಿದ್ದಾರೆ. ಇತ್ತ ಸಲ್ಮಾನ್ ಖಾನ್ ಅವರ ಈ ಮಾತಿಗೆ ಹೌದು ಎಂದು ರಶ್ಮಿಕಾ ಹಿಂದೆ ನಿಂತು ತಲೆಯಾಡಿಸಿದ್ದಾರೆ. ಒಟ್ನಲ್ಲಿ ಮಗಳ ವಯಸ್ಸಿನ ನಾಯಕಿ ಜೊತೆ ರೊಮ್ಯಾನ್ಸ್ ಮಾಡ್ತಿದ್ದೀರಾ ಎಂದು ಸಲ್ಮಾನ್‌ಗೆ ಟ್ರೋಲ್ ಮಾಡಿದವರಿಗೆ ಖಡಕ್ ಉತ್ತರ ಕೊಟ್ಟಿದ್ದಾರೆ.



# ದಕ್ಷಿಣದಲ್ಲಿ ಅಧೀರನಿಗೆ ಭಾರೀ ಬೇಡಿಕೆ




‘ಕೆಜಿಎಫ್ 2 ಹಿಟ್ ಆದ್ಮೇಲೆ ಸಂಜಯ್ ದತ್‌ಗೆ ಸೌತ್‌ನಲ್ಲಿ ಬೇಡಿಕೆ ಹೆಚ್ಚಾಗಿದೆ. ಬಾಲಿವುಡ್‌ಗಿಂತ ದಕ್ಷಿಣದ ಸಿನಿಮಾಗಳಿಗೆ ನಟ ಹೆಚ್ಚು ಪ್ರಾಮುಖ್ಯತೆ ಕೊಡ್ತಿದ್ದಾರೆ. ಸದ್ಯ ಪ್ರಭಾಸ್ ನಟನೆಯ ಹೊಸ ಸಿನಿಮಾದಲ್ಲಿ ಸಂಜಯ್ ದತ್ ಕಾಣಿಸಿಕೊಳ್ಳಲಿದ್ದಾರೆ ಎನ್ನಲಾದ ಸುದ್ದಿಯೊಂದು ಚರ್ಚೆಗೆ ಗ್ರಾಸವಾಗಿದೆ.

ಸೌತ್‌ನಲ್ಲಿ ಸಾಲು ಸಾಲು ಸಿನಿಮಾಗಳಲ್ಲಿ ಸಂಜಯ್ ದತ್ ಬ್ಯುಸಿಯಾಗಿದ್ದಾರೆ. ಸದ್ಯ ‘ಅನಿಮಲ್’ ಖ್ಯಾತಿಯ ನಿರ್ದೇಶಕ ಸಂದೀಪ್ ರೆಡ್ಡಿ ವಂಗಾ ನಿರ್ದೇಶನದ ‘ಸ್ಪಿರಿಟ್’ನಲ್ಲಿ ಪ್ರಭಾಸ್ ಪ್ರಮುಖ ಪಾತ್ರದಲ್ಲಿ ನಟಿಸಲಿದ್ದಾರೆ. ಈ ಸಿನಿಮಾದಲ್ಲಿ ಸಂಜಯ್ ದತ್ ಅವರು ಪ್ರಭಾಸ್‌ಗೆ ಅಣ್ಣನಾಗಿ ಬಣ್ಣ ಹಚ್ಚಲಿದ್ದಾರೆ ಎನ್ನಲಾದ ಸುದ್ದಿಯೊಂದು ಟಾಲಿವುಡ್‌ನಲ್ಲಿ ಕೇಳಿ ಬರುತ್ತಿದೆ. ಸಂದೀಪ್ ಮಾರ್ಕ್ ಅನ್ನೋ ಪಾತ್ರಕ್ಕೆ ಸಂಜಯ್‌ರನ್ನು ಚಿತ್ರತಂಡ ಸಂಪರ್ಕಿಸಿದೆ ಎನ್ನಲಾಗಿದೆ. ಆದರೆ ಈ ಬಗ್ಗೆ ನಟನಾಗಲಿ, ಚಿತ್ರತಂಡದ ಕಡೆಯಿಂದ ಆಗಲಿ ಯಾವುದೇ ಅಧಿಕೃತ ಮಾಹಿತಿ ಹೊರಬಿದ್ದಿಲ್ಲ. ಅದಷ್ಟೇ ಅಲ್ಲ, ಪ್ರಭಾಸ್ ನಟನೆಯ ರಾಜಾ ಸಾಬ್ ಸಿನಿಮಾದಲ್ಲೂ ಸಂಜಯ್ ದತ್ ವಿಲನ್ ಆಗಿ ನಟಿಸಿದ್ದಾರೆ ಎಂಬ ಸುದ್ದಿ ಕೂಡ ಇದೆ. ಚಿತ್ರತಂಡದ ಕಡೆಯಿಂದ ಅಫಿಷಿಯಲ್ ಅಪ್‌ಡೇಟ್ ಸಿಗುವವರೆಗೂ ಕಾದುನೋಡಬೇಕಿದೆ. ಇನ್ನೂ ಕನ್ನಡದ ನಟ ಧ್ರುವ ಸರ್ಜಾ ನಟನೆಯ ‘ಕೆಡಿ’ ಸಿನಿಮಾದಲ್ಲಿ ಸಂಜಯ್ ದತ್ ಪವರ್‌ಫುಲ್ ಪಾತ್ರದಲ್ಲಿ ನಟಿಸಿದ್ದಾರೆ. ಈ ಸಿನಿಮಾದ ರಿಲೀಸ್‌ಗಾಗಿ ಫ್ಯಾನ್ಸ್ ಎದುರು ನೋಡ್ತಿದ್ದಾರೆ.

# ರಿಯಾ ಚಕ್ರವರ್ತಿಗೆ ಕ್ಲೀನ್ ಚಿಟ್




ನಟಿ ರಿಯಾ ಚಕ್ರವರ್ತಿ ಅವರು ನಿಟ್ಟುಸಿರು ಬಿಟ್ಟಿದ್ದಾರೆ. ಸುಶಾಂತ್ ಸಿಂಗ್ ರಜಪೂತ್ ಸಾವಿನ ಕೇಸ್‌ನಲ್ಲಿ ರಿಯಾ ಚಕ್ರವರ್ತಿ ಮೇಲೆ ಹಲವು ಆರೋಪಗಳನ್ನು ಮಾಡಲಾಗಿತ್ತು. ಈ ಪ್ರಕರಣದ ತನಿಖೆ ನಡೆಸಿದ ಸಿಬಿಐ ಈಗ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆ. ಈ ವರದಿಯಲ್ಲಿ ರಿಯಾ ಚಕ್ರವರ್ತಿ ಅವರಿಗೆ ಕ್ಲೀನ್ ಚಿಟ್ ನೀಡಲಾಗಿದೆ. ಸುಶಾಂತ್ ಸಾವಿನಲ್ಲಿ ರಿಯಾ ಚಕ್ರವರ್ತಿ ಪಾತ್ರ ಇಲ್ಲ ಎಂದು ಹೇಳಲಾಗಿದೆ.

ಆದ್ದರಿಂದ ರಿಯಾ ಚಕ್ರವರ್ತಿ ಅವರಿಗೆ ಖುಷಿ ಆಗಿದೆ. ಅವರ ಕುಟುಂಬದರು, ಆಪ್ತರು ಹಾಗೂ ಅಭಿಮಾನಿಗಳು ನಿಟ್ಟುಸಿರು ಬಿಟ್ಟಿದ್ದಾರೆ. ಕ್ಲೀನ್ ಚಿಟ್ ಸಿಕ್ಕ ಕೂಡಲೇ ರಿಯಾ ಚಕ್ರವರ್ತಿ ಅವರು ದೇವರ ದರ್ಶನ ಪಡೆದಿದ್ದಾರೆ. ರಿಯಾ ಚಕ್ರವರ್ತಿ ಅವರು ಮುಂಬೈನ ಸಿದ್ಧಿ ವಿನಾಯಕ ದೇವಸ್ಥಾನಕ್ಕೆ ಭೇಟಿ ನೀಡಿದ್ದಾರೆ. ಅವರ ಜೊತೆ ತಂದೆ ಇಂದ್ರಜಿತ್ ಚಕ್ರವರ್ತಿ, ಸಹೋದರ ಶೋವಿಕ್ ಚಕ್ರವರ್ತಿ ಕೂಡ ದೇವಸ್ಥಾನಕ್ಕೆ ಬಂದಿದ್ದಾರೆ. ಈ ವೇಳೆ ಅವರು ಪಾಪರಾಜಿ ಕ್ಯಾಮೆರಾ ಕಂಡು ಕೈ ಮುಗಿದಿದ್ದಾರೆ. ಅವರ ಫೋಟೋಗಳು ವೈರಲ್ ಆಗಿವೆ. ಕ್ಲೀನ್ ಚಿಟ್ ಸಿಕ್ಕಿದ್ದರಿಂದ ಈ ಕುಟುಂಬದವರ ಮುಖದಲ್ಲಿ ನಗು ಮೂಡಿದೆ.

ಬಾಲಿವುಡ್ ನಟ ಸುಶಾಂತ್ ರಜಪೂತ್ ಜೊತೆ ನಟಿ ರಿಯಾ ಚಕ್ರವರ್ತಿ ಲಿವ್-ಇನ್-ರಿಲೇಷನ್‌ಶಿಪ್‌ನಲ್ಲಿ ಇದ್ದರು.

ಇಬ್ಬರ ಆಪ್ತವಾದ ಫೋಟೋಗಳು ವೈರಲ್ ಆಗಿದ್ದವು. ಆದರೆ ಸುಶಾಂತ್ ಸಿಂಗ್ ರಜಪೂತ್ ನಿಧನದ ಬಳಿಕ ರಿಯಾ ಚಕ್ರವರ್ತಿ ಮೇಲೆ ಅನುಮಾನ ಮೂಡಿತ್ತು. ಸುಶಾಂತ್ ಆತ್ಮಹತ್ಯೆಗೆ ರಿಯಾ ಚಕ್ರವರ್ತಿಯೇ ಪ್ರಚೋದನೆ ನೀಡಿದ್ದಾರೆ ಎಂದು ನಟನ ತಂದೆ ದೂರು ನೀಡಿದ್ದರು.

## ನಾನಿ ಜೊತೆ ಶ್ರೀನಿಧಿ ಶೆಟ್ಟಿ ರೊಮ್ಯಾನ್ಸ್

**‘ಹಿಟ್ 3’ ಸಾಂಗ್ ಔಟ್**

‘ಕೆಜಿಎಫ್ 2 ನಟಿ ಶ್ರೀನಿಧಿ ಶೆಟ್ಟಿ ಅವರು ನ್ಯಾಚುರಲ್ ಸ್ಟಾರ್ ನಾನಿಗೆ ಜೊತೆಯಾಗಿದ್ದಾರೆ. ‘ಹಿಟ್ 3’ ಸಿನಿಮಾದ ಮೂಲಕ ಮೋಡಿ ಮಾಡಲು ರೆಡಿಯಾಗಿದ್ದಾರೆ. ಸದ್ಯ ಈ ಸಿನಿಮಾದ ರೊಮ್ಯಾಂಟಿಕ್ ಸಾಂಗ್‌ವೊಂದು ರಿಲೀಸ್ ಆಗಿದೆ. ಸಾಂಗ್ಯೂ ಟ್ಯೂಬ್‌ನಲ್ಲಿ ಭರ್ಜರಿ ವಿವ್ಸ್ ಪಡೆದುಕೊಳ್ಳುತ್ತಿದೆ. ಮೊದಲ ಬಾರಿಗೆ ಹಿಟ್ 3 ಮೂಲಕ ನಾನಿಗೆ ಶ್ರೀನಿಧಿ ಜೋಡಿಯಾಗಿ ನಟಿಸಿದ್ದಾರೆ. ಸದ್ಯ ರಿಲೀಸ್ ಆಗಿರುವ ‘ಪ್ರೇಮ ವೆಲ್ಲುವ’ ಸಾಂಗ್ ನೋಡಿ ಸಿನಿಪ್ರಿಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಹಾಡಿನಲ್ಲಿ ನಾನಿ ಮತ್ತು ಶ್ರೀನಿಧಿ ಕೆಮಿಸ್ಟ್ರಿ ಮುದ್ದಾಗಿದೆ. ಇಬ್ಬರ ಲವ್ ರೊಮ್ಯಾನ್ಸ್ ಚೆನ್ನಾಗಿ ಮೂಡಿ ಬಂದಿದೆ. ಇನ್ನೂ ನಾನಿ ನಟನೆಯ ‘ಹಿಟ್ 3’ ಸಿನಿಮಾ ಮೇಲೆ ಫ್ಯಾನ್ಸ್‌ಗೆ ಭಾರೀ ನಿರೀಕ್ಷೆಯಿದೆ.

ಈ ಹಿಂದಿನ 2 ಪಾರ್ಟ್‌ಗಳಲ್ಲಿ ಮೂಡಿ ಬಂದ ಹಿಟ್ ಸಿನಿಮಾ ಸಕ್ಸಸ್ ಕಂಡಿತ್ತು. ಹಾಗಾಗಿ ಸಹಜವಾಗಿ ಈ ಸಿನಿಮಾದ ಮೇಲೆ ಫ್ಯಾನ್ಸ್‌ಗೆ ಕುತೂಹಲವಿದೆ. ನಾನಿ ಅವತಾರ ನೋಡೋಕೆ ಅಭಿಮಾನಿಗಳು ಕಾಯ್ತಿದ್ದಾರೆ. ಈ ವರ್ಷ ಮೇ 1ರಂದು ಸಿನಿಮಾ ರಿಲೀಸ್ ಆಗಲಿದೆ.

ಇನ್ನೂ ‘ಕೆಜಿಎಫ್ 2’ರ ಸಕ್ಸಸ್ ಬಳಿಕ ಶ್ರೀನಿಧಿ ಶೆಟ್ಟಿ ಸಿನಿಮಾ ಆಯ್ಕೆಯಲ್ಲಿ ಸಖತ್ ಚ್ಯುಸಿಯಾಗಿದ್ದಾರೆ. ಕಥೆ ಮತ್ತು ಪಾತ್ರಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡ್ತಾರೆ. ಹಾಗಾಗಿ ನಾನಿ ಜೊತೆ ಹಿಟ್ ಕೊಡಲು ಅವರು ರೆಡಿಯಾಗಿದ್ದಾರೆ. ಈ ಸಿನಿಮಾದ ಮೂಲಕ ಮತ್ತೆ ನಟಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ.

# ಸಿಕಂದರ್ ಟ್ರೈಲರ್‌ನಲ್ಲಿ ಮಿಂಚಿದ ಕನ್ನಡಿಗ




ಸಲ್ಮಾನ್ ಖಾನ್ ನಟನೆಯ ‘ಸಿಕಂದರ್’ ಚಿತ್ರದ ಟ್ರೈಲರ್ ರಿಲೀಸ್ ಆಗಿ ಅಭಿಮಾನಿಗಳ ಮೆಚ್ಚುಗೆ ಪಡೆದಿದೆ. ಈ ಚಿತ್ರದ ಟ್ರೈಲರ್ ನಲ್ಲಿ ಕನ್ನಡತಿ ರಶ್ಮಿಕಾ ಮಂದಣ್ಣ ಒಬ್ಬರೇ ಅಲ್ಲ, ಕನ್ನಡದ ನಟ ಕಿಶೋರ್ ಕೂಡ ಮಿಂಚಿದ್ದಾರೆ. ‘ಸಿಕಂದರ್’ನಲ್ಲಿ ಕನ್ನಡ ಪ್ರತಿಭೆಗಳ ಹವಾ ಜೋರಾಗಿದೆ. ‘ಸಿಕಂದರ್’ ಸಿನಿಮಾದಲ್ಲಿ ಸಲ್ಮಾನ್ ಖಾನ್‌ಗೆ ಕನ್ನಡತಿ ರಶ್ಮಿಕಾ ಮಂದಣ್ಣ ನಾಯಕಿಯಾಗಿ ನಟಿಸಿದ್ದಾರೆ. ಟ್ರೈಲರ್‌ನಲ್ಲಿ ಇಬ್ಬರ ರೊಮ್ಯಾನ್ಸ್ ಹೈಲೈಟ್ ಆಗಿದೆ. ಸಿನಿಮಾದಲ್ಲಿ ಬಾಲಿವುಡ್ ಮಂದಿಗಿಂತ ದಕ್ಷಿಣದ ಕಲಾವಿದರಿಗೆ ಚಿತ್ರತಂಡ ಮಣೆ ಹಾಕಿದೆ. ಇನ್ನೂ ಕನ್ನಡಿಗ ಕಿಶೋರ್ ಬಹುಭಾಷಾ ನಟನಾಗಿ ಸೈ ಎನಿಸಿಕೊಂಡಿದ್ದಾರೆ. ಯಾವುದೇ ಭಾಷೆಯ ಸಿನಿಮಾ ಆಗಿದ್ರೂ, ಪಾತ್ರ ಕೊಟ್ಟರೂ ಕಿಶೋರ್ ಆ ಪಾತ್ರಕ್ಕೆ ನ್ಯಾಯ ಸಲ್ಲಿಸುತ್ತಾರೆ. ಆ ಪಾತ್ರವೇ ತಾವಾಗಿ ನಟಿಸುತ್ತಾರೆ. ಇದೀಗ ‘ಸಿಕಂದರ್’ ಸಿನಿಮಾದಲ್ಲಿ ಅವರು ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದಾರೆ.

ಸಲ್ಮಾನ್ ಖಾನ್ ಮುಂದೆ ಕಿಶೋರ್ ತೊಡೆ ತಟ್ಟಿದ್ದಾರೆ. ಟ್ರೈಲರ್‌ನಲ್ಲಿ ಚಿಕ್ಕದಾಗಿ ಸಲ್ಮಾನ್ ಮತ್ತು ಕಿಶೋರ್ ಫೈಟ್ ಸೀನ್ ತೋರಿಸಲಾಗಿದೆ. ಇಬ್ಬರ ನಡುವೆ ಜುಗಲ್‌ಬಂದಿ ಇರೋದು ಖಾತ್ರಿಯಾಗಿದೆ. ಈಗಾಗಲೇ ಟ್ರೈಲರ್ ನೋಡಿ ಮೆಚ್ಚಿರೋ ಅಭಿಮಾನಿಗಳಿಗೆ ಸಿನಿಮಾದಲ್ಲಿ ಕಿಶೋರ್ ಪಾತ್ರ ಹೇಗಿರಲಿದೆ ಎಂಬುದರ ಬಗ್ಗೆ ಕುತೂಹಲವಿದೆ.

ಇನ್ನೂ ಈ ಚಿತ್ರದಲ್ಲಿ ‘ಮಗಧೀರ’ ನಟಿ ಕಾಜಲ್, ‘ಬಾಹುಬಲಿ’ ಖ್ಯಾತಿಯ ಕಟ್ಟಪ್ಪ ಅಲಿಯಾಸ್ ಸತ್ಯರಾಜ್ ಸೇರಿದಂತೆ ಅನೇಕರು ನಟಿಸಿದ್ದಾರೆ. ಸೌತ್‌ನ ಖ್ಯಾತ ನಿರ್ದೇಶಕ ಎ.ಆರ್ ಮುರುಗದಾಸ್ ಈ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ಇದೇ ಮಾ.30ರಂದು ‘ಸಿಕಂದರ್’ ಸಿನಿಮಾ ರಿಲೀಸ್‌ಗೆ ಸಜ್ಜಾಗಿದೆ. ಸಿನಿಮಾ ನೋಡಲು ಕನ್ನಡದ ಪ್ರೇಕ್ಷಕರು ಕೂಡ ಎದುರು ನೋಡ್ತಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966